ಮಂಗಳವಾರ, ನವೆಂಬರ್ 8, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 308 | ಪುಟ 12
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ತಾಯಿಕಾರ್ಡ್ ಮತ್ತಿತರ ಸವಲತ್ತು ಅನುಷ್ಠಾನದಲ್ಲಿ ಹಲವು ತೊಡಕು

ಕುಸಿಯುತ್ತಲೇ ಇದೆ ಕೊಬ್ಬರಿ ಬೆಲೆ 9
'ವಂದೇ ಭಾರತ್' ಎಕ್ಸ್‌ಪ್ರೆಸ್‌ಗೆ ಸ್ವಾಗತ 4B

ಇಂದು
ಕ್ಷೇಮ ಕುಶಲ 4

ಸೆನ್ಸೆಕ್ಸ್	ನಿಫ್ಟಿ	₹/$
61,185 ▲	18,203 ▲	81,92 ▲

ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಶಿಕ್ಷಣ, ಉದ್ಯೋಗದಲ್ಲಿ ಮೀಸಲಾತಿ ಪರವಾಗಿ 3:2ರ ಬಹುಮತದ ತೀರ್ಪು

ಶೇ 10 ಮೀಸಲಾತಿ ಎತ್ತಿಹಿಡಿದ 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗ ನೇಮಕಾತಿಯಲ್ಲಿ ಶೇ 10 ರಷ್ಟು ಮೀಸಲಾತಿ ನೀಡುವ ಸಂವಿಧಾನದ 103ನೇ ತಿದ್ದುಪಡಿಯನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದು ಸೋಮವಾರ ಬಹುಮತದ ತೀರ್ಪು ನೀಡಿದೆ. ಐವರು ನ್ಯಾಯಮೂರ್ತಿಗಳಿದ್ದ ಸಂವಿಧಾನ ಪೀಠದಲ್ಲಿ ಮೂವರು ನ್ಯಾಯಮೂರ್ತಿಗಳು, 103ನೇ ತಿದ್ದುಪಡಿಯಿಂದ ಸಂವಿಧಾನದ ಮೂಲ ರಚನೆಗೆ ಧಕ್ಕೆಯಾಗುವುದಿಲ್ಲ ಎಂದು ತೀರ್ಪು ನೀಡಿದ್ದಾರೆ. ಇಬ್ಬರು ನ್ಯಾಯಮೂರ್ತಿಗಳು ಇದಕ್ಕೆ ಭಿನ್ನ ತೀರ್ಪು ನೀಡಿದ್ದಾರೆ.

ಬಹುಮತದ ತೀರ್ಪು ತಿದ್ದುಪಡಿಯ ಪರವಾಗೇ ಇದ್ದ ಕಾರಣ, ತಿದ್ದುಪಡಿಯನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ 40ಕ್ಕೂ ಹೆಚ್ಚು ಅರ್ಜಿಗಳನ್ನು ವಜಾ ಮಾಡಲಾಗಿದೆ.

2019ರ ಲೋಕಸಭಾ ಚುನಾವಣೆಗೂ ಮುನ್ನ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ (ಇಡಬ್ಲ್ಯುಎಸ್) ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗ ನೇಮಕಾತಿಯಲ್ಲಿ ಶೇ 10ರಷ್ಟು ಮೀಸಲಾತಿ ನೀಡುವ ಉದ್ದೇಶದಿಂದ ಸಂವಿಧಾನಕ್ಕೆ 103ನೇ ತಿದ್ದುಪಡಿ ತಂದಿತ್ತು. ಸಾಮಾನ್ಯ ವರ್ಗಗಳಲ್ಲಿ ಆರ್ಥಿಕವಾಗಿ ದುರ್ಬಲವಾದವರಿಗೆ ಇದು ಅನ್ವಯವಾಗುತ್ತದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳನ್ನು ಈ ಮೀಸಲಾತಿಯಿಂದ ಹೊರಗೆ ಇಡಲಾಗಿತ್ತು. ಸರ್ಕಾರದ ಈ ಕ್ರಮದ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಹಲವು ಅರ್ಜಿಗಳು ಸಲ್ಲಿಕೆಯಾಗಿದ್ದವು.

'ಆರ್ಥಿಕ ಸ್ಥಿತಿಗತಿಯನ್ನು ಮಾನದಂಡವಾಗಿ ಇರಿಸಿಕೊಂಡು ಮೀಸಲಾತಿ ನೀಡುವ ಕ್ರಮದಿಂದ ಸಂವಿಧಾನದ ಮೂಲರಚನೆಗೆ ಧಕ್ಕೆಯಾಗುತ್ತದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಇತರೆ ಹಿಂದುಳಿದ ವರ್ಗಗಳನ್ನು ಈ ಮೀಸಲಾತಿಯಿಂದ ಹೊರಗಿಟ್ಟ ಕಾರಣದಿಂದಲೂ ಸಂವಿಧಾನದ ಮೂಲ ರಚನೆಗೆ ಧಕ್ಕೆಯಾಗುತ್ತದೆ. ಒಟ್ಟು ಮೀಸಲಾತಿಯ ಶೇ 50ರಷ್ಟು ಮಿತಿಯನ್ನು ಈ ತಿದ್ದುಪಡಿಯು ಉಲ್ಲಂಘಿಸುತ್ತದೆ' ಎಂಬುದು ಅರ್ಜಿದಾರರ ವಾದವಾಗಿತ್ತು.

ಮುಖ್ಯ ನ್ಯಾಯಮೂರ್ತಿ ಯು.ಯು. ಲಲಿತ್ ಅವರ ನೇತೃತ್ವದ ಐವರು ಸದಸ್ಯರ ಸಂವಿಧಾನ ಪೀಠವು ಈ ಅರ್ಜಿಗಳ ವಿಚಾರಣೆ ನಡೆಸಿತ್ತು. ಸೆಪ್ಟೆಂಬರ್‌ನಲ್ಲಿ ಸತತ ಆರೂವರೆ ದಿನ ನಡೆದ ವಿಚಾರಣೆಯ ನಂತರ ತೀರ್ಪನ್ನು ಕಾಯ್ದಿರಿಸಲಾಗಿತ್ತು. ಐವರು ಸದಸ್ಯರ ಪೀಠವು ಒಟ್ಟು ನಾಲ್ಕು ಪ್ರತ್ಯೇಕ ತೀರ್ಪುಗಳನ್ನು ನೀಡಿದೆ.

ಮುಖ್ಯ ನ್ಯಾಯಮೂರ್ತಿ ಯು.ಯು. ಲಲಿತ್ ಮತ್ತು ನ್ಯಾಯಮೂರ್ತಿ ಎಸ್. ರವೀಂದ್ರ ಭಟ್ ಅವರು 100 ಪುಟಗಳ ಒಂದೇ ತೀರ್ಪು ನೀಡಿದ್ದು, ಈ ತಿದ್ದುಪಡಿಯು ಸಂವಿಧಾನದ ಮೂಲ ರಚನೆಗೆ ಧಕ್ಕೆ ತರುತ್ತದೆ ಎಂದಿದ್ದಾರೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ, ಬೇಲಾ.ಎಂ. ತ್ರಿವೇದಿ ಮತ್ತು ದಿನೇಶ್ ಮಾಹೇಶ್ವರಿ ಅವರು ತಿದ್ದುಪಡಿಯ ಪರವಾಗಿ ತೀರ್ಪು ನೀಡಿದ್ದಾರೆ. 'ಆರ್ಥಿಕ ಸ್ಥಿತಿಗತಿಯನ್ನು ಆಧರಿಸಿ ಮೀಸಲಾತಿ ನೀಡಿರುವುದರಿಂದ ಸಂವಿಧಾನದ ಮೂಲ ರಚನೆಗೆ ಧಕ್ಕೆಯಾಗಿಲ್ಲ. ಮೀಸಲಾತಿಯು ಎಲ್ಲರನ್ನೂ ಒಳಗೊಳ್ಳುವ ಸಾಧನವಾಗಿದೆ. ಈ ಸಾಧನವು ಕೇವಲ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರಿಗಷ್ಟೇ ಅಲ್ಲ' ಎಂದು ಈ ಮೂವರು ನ್ಯಾಯಮೂರ್ತಿಗಳು ಹೇಳಿದ್ದಾರೆ.


9ನೇ ಪುಟ ನೋಡಿ

'ಸಂವಿಧಾನದ ಮೂಲ ರಚನೆಗೆ ಧಕ್ಕೆ'

'ಈ ಮೀಸಲಾತಿಯಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳನ್ನು ಹೊರಗಿಟ್ಟಿದ್ದು ಸಂವಿಧಾನದ ಉಲ್ಲಂಘನೆಯಾಗುತ್ತದೆ. ಅಸಮಾನತೆಯ ಆಚರಣೆಯನ್ನು ಸಂವಿಧಾನವು ನಿಷೇಧಿಸಿದೆ. ಆದರೆ ಈ ತಿದ್ದುಪಡಿಯು, ಅಸಮಾನತೆಯನ್ನೇ ಆಚರಿಸುತ್ತದೆ. ಈ ರೀತಿ ಹೊರಗಿಡುವ ಪದ್ಧತಿಯನ್ನು ಸಂವಿಧಾನವು ಅನುಮತಿಸುವುದಿಲ್ಲ. ಸಾಮಾಜಿಕ ನ್ಯಾಯ ಮತ್ತು ಸಂವಿಧಾನದ ಮೂಲ ರಚನೆಗೆ 103ನೇ ತಿದ್ದುಪಡಿಯು ಧಕ್ಕೆ ತರುತ್ತದೆ. ಸಾಮಾಜಿಕವಾಗಿ ಹಿಂದುಳಿದವರು ಮೀಸಲಾತಿಯಿಂದಾಗಿ ಈಗ ಉತ್ತಮ ಸ್ಥಿತಿಯಲ್ಲಿ ಇದ್ದಾರೆ ಎಂಬುದನ್ನು ನಂಬುವಂತೆ ಈ ತಿದ್ದುಪಡಿಯು ಒತ್ತಾಯಿಸುತ್ತದೆ. ಸಾಮಾಜಿಕ ಹಿನ್ನೆಲೆಯ ಆಧಾರದಲ್ಲಿ ಹೊರಗಿಡುವ ಕ್ರಮವು, ಸಮಾನತೆಯನ್ನು ಧ್ವಂಸ ಮಾಡುತ್ತದೆ' ಎಂದು ಮುಖ್ಯ ನ್ಯಾಯಮೂರ್ತಿ ಯು.ಯು.ಲಲಿತ್ ಮತ್ತು ನ್ಯಾಯಮೂರ್ತಿ ರವೀಂದ್ರ ಭಟ್ ಅವರು ತಮ್ಮ ತೀರ್ಪಿನಲ್ಲಿ ಹೇಳಿದ್ದಾರೆ.

'ಒಟ್ಟು ಮೀಸಲಾತಿಯ ಶೇ 50ರಷ್ಟು ಮಿತಿಯನ್ನು ಮೀರಲು ಅವಕಾಶ ಮಾಡಿಕೊಡುವುದು ಮತ್ತಷ್ಟು ಅಸಮಾನತೆಗೆ ಕಾರಣವಾಗಬಹುದು. ಅಂತಿಮವಾಗಿ ಅದು ಮತ್ತಷ್ಟು ವಿಭಜನೆಗೆ ದಾರಿ ಮಾಡಿಕೊಡಬಹುದು. ಆಗ ಸಮಾನತೆ ಎಂಬುದು ಕೇವಲ ಮೀಸಲಾತಿಯ ಹಕ್ಕು ಎಂಬ ಮಟ್ಟಕ್ಕೆ ಕುಸಿಯಬಹುದು' ಎಂದು ಈ ಇಬ್ಬರು ನ್ಯಾಯಮೂರ್ತಿಗಳು ಹೇಳಿದ್ದಾರೆ.

'ಮೀಸಲಾತಿಗೆ ಕಾಲಮಿತಿ ಬೇಕು'



ನ್ಯಾಯಮೂರ್ತಿ ಬೇಲಾ.ಎಂ.ತ್ರಿವೇದಿ, ಮೀಸಲಾತಿಗೆ ಕಾಲಮಿತಿ ಇರಬೇಕು. ಮೀಸಲಾತಿ ಕೊನೆಗೊಂಡರೆ ಜಾತಿ ಮತ್ತು ವರ್ಗ ರಹಿತ ಸಮಾಜ ಸೃಷ್ಟಿಯಾಗುತ್ತದೆ ಎಂದು ತಮ್ಮ ತೀರ್ಪಿನಲ್ಲಿ ಹೇಳಿದ್ದಾರೆ.

'ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ನೀಡಿರುವ ಮೀಸಲಾತಿಗೆ ಕಾಲಮಿತಿ ಇರಬೇಕು ಎಂದು 1985ರಲ್ಲಿ ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿತ್ತು. ಮೀಸಲಾತಿಯ ಉದ್ದೇಶವು 50 ವರ್ಷಗಳಲ್ಲಿ ಈಡೇರಬೇಕು ಎನ್ನಲಾಗಿತ್ತು. ಆದರೆ, ನಾವೀಗ 75ನೇ ವರ್ಷದಲ್ಲಿದ್ದೇವೆ ಮತ್ತು ಮೀಸಲಾತಿಯ ಉದ್ದೇಶ ಪೂರ್ಣಗೊಂಡಿಲ್ಲ. ಮೀಸಲಾತಿ ಜಾರಿಗೆ ಬರಲು ಭಾರತದ ಪುರಾತನ ಜಾತಿ ಪದ್ಧತಿಯೇ ಕಾರಣ ಎನ್ನಲಾಗದು. ಈ ವರ್ಗಗಳಿಗೆ ಸಮಾನ ಅವಕಾಶ ನೀಡುವ ಉದ್ದೇಶದಿಂದ ಮೀಸಲಾತಿ ನೀಡಲಾಗಿತ್ತು. ದೇಶವು 75ನೇ ಸ್ವಾತಂತ್ರ್ಯೋತ್ಸವದಲ್ಲಿರುವ ಸಂದರ್ಭದಲ್ಲಿ, ಸಮಾಜದ ಹಿತಾಸಕ್ತಿಗಾಗಿ ಈ ಮೀಸಲಾತಿ ಪದ್ಧತಿಯನ್ನು ನಾವು ಮರುಪರಿಶೀಲಿಸಬೇಕಿದೆ. ಆಂಗ್ಲೊ ಇಂಡಿಯನ್ ಸಮುದಾಯಕ್ಕೆ ನೀಡಲಾಗಿದ್ದ ಮೀಸಲಾತಿ ಯನ್ನು ತೆಗೆಯಲಾಗಿದೆ. ಸಂವಿಧಾನವು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ನೀಡಿರುವ ಮೀಸಲಾತಿಗೆ, ಇಂಥದ್ದೇ ಕಾಲಮಿತಿ ಇರಬೇಕು. ಅಂತಹದ್ದೇ ಕಾಲಮಿತಿಯನ್ನು ಈ ವರ್ಗಗಳಿಗೂ ಅನ್ವಯಿಸಿದರೆ ಜಾತಿ ಮತ್ತು ವರ್ಗರಹಿತ ಸಮಾಜದ ನಿರ್ಮಾಣಕ್ಕೆ ಕಾರಣವಾಗುತ್ತದೆ' ಎಂದು ಅವರು ಹೇಳಿದ್ದಾರೆ.

ತೀರ್ಪು ಸ್ವಾಗತಿಸಿದ ಖರ್ಗೆ



ಬೆಂಗಳೂರು: ಆರ್ಥಿಕವಾಗಿ ಹಿಂದುಳಿದವರಿಗೆ (ಇಡಬ್ಲ್ಯುಎಸ್) ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇ 10 ಮೀಸಲಾತಿ ಕಲ್ಪಿಸಿ ಸಂವಿಧಾನಕ್ಕೆ ಮಾಡಲಾದ 103ನೇ ತಿದ್ದುಪಡಿಯು ಸಂವಿಧಾನಬದ್ಧ ಎಂದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಅನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸ್ವಾಗತಿಸಿದ್ದಾರೆ. ಸುದ್ದಿಗಾರರ ಜೊತೆ ಮಾತನಾಡಿದ ಖರ್ಗೆ, 'ಮೀಸಲಾತಿ ಪ್ರಸ್ತಾವನೆಯನ್ನು ಲೋಕಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಿದ್ದೆವು. ಅದನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ಸುಪ್ರೀಂ ಕೋರ್ಟ್ ತೀರ್ಪನ್ನು ಸ್ವಾಗತಿಸುತ್ತೇನೆ' ಎಂದರು.

'ಸಂವಿಧಾನದ ಆಶಯಗಳಿಗೆ ಧಕ್ಕೆ'



ಕಲಬುರಗಿ: 'ಆರ್ಥಿಕವಾಗಿ ಹಿಂದುಳಿದವರಿಗೆ ಶೇ 10ರಷ್ಟು ಮೀಸಲಾತಿ ಕಲ್ಪಿಸುವ ಕೇಂದ್ರ ಸರ್ಕಾರದ ನಿಲುವನ್ನು ಎತ್ತಿ ಹಿಡಿದ ಸುಪ್ರೀಂ ಕೋರ್ಟ್ ತೀರ್ಪು ದುರದೃಷ್ಟಕರ. ಇದರಿಂದ ಸಂವಿಧಾನದ ಆಶಯಗಳಿಗೆ ಎಳ್ಳುನೀರು ಬಿಟ್ಟಂತಾಗಿದೆ' ಎಂದು ದಲಿತ ಸಂಘರ್ಷ ಸಮಿತಿ ಮುಖಂಡ ಗುರುಪ್ರಸಾದ್ ಕೆರಗೋಡು ಬೇಸರ ವ್ಯಕ್ತಪಡಿಸಿದರು.

ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿಯಿಂದ ಸೋಮವಾರ ನಡೆದ ಸಮಾವೇಶದಲ್ಲಿ ಮಾತನಾಡಿದ ಅವರು, 'ದಲಿತರ ಶವಪೆಟ್ಟಿಗೆಗೆ ಕೊನೆಯ ಮೊಳೆ ಹೊಡೆದಂತಾಗಿದೆ' ಎಂದರು. 'ಮೀಸಲಾತಿ ಎಂಬುದು ಬಡತನ ನಿರ್ಮೂಲನೆ ಕಾರ್ಯಕ್ರಮ ಅಲ್ಲ. ಶತಮಾನಗಳಿಂದ ಅನುಭವಿಸಿದ ಅವಮಾನ, ಅಸ್ಪೃಶ್ಯತೆ ತೊಡೆದು ಹಾಕಲು ಪರಿಶಿಷ್ಟರಿಗೆ ಮೀಸಲಾತಿ ಕಲ್ಪಿಸಲಾಗಿದೆ. ಬ್ರಾಹ್ಮಣ, ವೈಶ್ಯ, ಕ್ಷತ್ರಿಯ, ಮೊದಲಿಯರ್ ಸಮುದಾಯದ ಕೆಲವನ್ನು ಹೊರತುಪಡಿಸಿ ಉಳಿದೆಲ್ಲರಿಗೂ ಮೀಸಲಾತಿಯಿದೆ' ಎಂದರು.

'ಶೇ 10ರಷ್ಟು ಮೀಸಲಾತಿಯನ್ನು ಮೇಲ್ಜಾತಿಯ ಆರ್ಥಿಕವಾಗಿ ಹಿಂದುಳಿದವರಿಗೆ ನೀಡುವ ಮೂಲಕ ನಿಜವಾದ ಶೋಷಿತರಿಗೆ ಹಿನ್ನಡೆಯಾಗಿದೆ. ಪರಿಶಿಷ್ಟರಿಗೆ ಮೀಸಲಾತಿ ಹೆಚ್ಚಿಸಿದ್ದು ಸ್ವಾಗತಾರ್ಹ. ಆದರೆ, ಎಲ್ಲ ಸರ್ಕಾರಿ ಸಂಸ್ಥೆಗಳನ್ನು ಖಾಸಗೀಕರಣ ಮಾಡಿದರೆ ಮೀಸಲಾತಿಯ ಅರ್ಥವಾದರೂ ಏನು ಉಳಿಯುತ್ತದೆ' ಎಂದು ಪ್ರಶ್ನಿಸಿದರು.

'ಹಿಂದೂ ಪರ್ಷಿಯನ್ ಪದ, ಅದಕ್ಕೆ ಕೆಟ್ಟ ಅರ್ಥವಿದೆ'

ಪ್ರಜಾವಾಣಿ ವಾರ್ತೆ



ಸತೀಶ ಜಾರಕಿಹೊಳಿ

ನಿಪ್ಪಾಣಿ (ಬೆಳಗಾವಿ ಜಿಲ್ಲೆ): 'ಹಿಂದೂ ಎಂಬುದು ಭಾರತೀಯ ಪದವಲ್ಲ. ಅದು ಪರ್ಷಿಯನ್ ನೆಲಕ್ಕೆ ಸೇರಿದ ಪದವಾಗಿದ್ದು, ಕೆಟ್ಟ (ಗಂದೀ) ಅರ್ಥವನ್ನು ಕೊಡುತ್ತದೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ, ಶಾಸಕ ಸತೀಶ ಜಾರಕಿಹೊಳಿ ಹೇಳಿದರು.

ಪಟ್ಟಣದಲ್ಲಿ ಮಾನವ ಬಂಧುತ್ವ ವೇದಿಕೆ ಭಾನುವಾರ ರಾತ್ರಿ ಆಯೋಜಿಸಿದ್ದ 'ಮನೆ- ಮನೆಗೆ ಬುದ್ಧ, ಬಸವ, ಅಂಬೇಡ್ಕರ್ ಕಾರ್ಯಕ್ರಮ'ದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

'ಹಿಂದೂ ಪದ ಎಲ್ಲಿಂದ ಬಂತು? ಆ ಪದ ಪರ್ಷಿಯನ್ ಮೂಲದ್ದು. ಪರ್ಷಿಯನ್ ಎಲ್ಲಿದೆ? ಇರಾನ್, ಇರಾಕ್, ಖಜಕಿಸ್ತಾನ್, ಉಜ್ಬೆಕಿಸ್ತಾನ್‌ದಲ್ಲಿದೆ. ಹಾಗಿದ್ದರೆ ಭಾರತಕ್ಕೂ ಅದಕ್ಕೂ ಏನು ಸಂಬಂಧ? 'ಹಿಂದೂ' ನಿಮ್ಮದು ಹೇಗೆ ಆಯಿತು? ಈ ಬಗ್ಗೆ ಚರ್ಚೆಯಾಗಲಿ' ಎಂದರು. 'ಬೇಕಿದ್ದರೆ ವಾಟ್ಸ್‌ಆ್ಯಪ್, ವಿಕಿಪೀಡಿಯಾದಲ್ಲಿ ಪರಿಶೀಲಿಸಿ. ಈ ಪದ ಭಾರತ ಮೂಲದ್ದಲ್ಲ. ಹಾಗಿದ್ದರೆ ನೀವೇಕೆ ಇಷ್ಟು ಮೆರೆಸುತ್ತಿದ್ದೀರಿ? ಅದರ ಅರ್ಥ ಗೊತ್ತಾದರೆ ನಾಚಿಕೆಯಾಗುತ್ತದೆ. ಎಲ್ಲಿಯದೋ ಧರ್ಮ, ಎಲ್ಲಿಯದೋ ಶಬ್ದ ತಂದು ನೀವು ನಮ್ಮ ಮೇಲೆ ಹೇರುತ್ತಿದ್ದೀರಿ' ಎಂದು ಆಕ್ಷೇಪಿಸಿದರು.

'ಸಮಯ ಕಳೆಯಲು ಬರೆದ ಪುಸ್ತಕಗಳನ್ನೇ ಮಹಾನ್ ಗ್ರಂಥಗಳಾಗಿ ಮಾಡಲಾಗಿದೆ. ಈಗ ಅವು ನಮ್ಮನ್ನು ಆಳುತ್ತಿವೆ. ಕೆಲವರು ಅವುಗಳನ್ನೇ ಮುಂದಿಟ್ಟುಕೊಂಡು ಧರ್ಮ, ಜಾತಿ ಎನ್ನುತ್ತ ದಿಕ್ಕು ತಪ್ಪಿಸುತ್ತಿದ್ದಾರೆ' ಎಂದು ದೂರಿದರು.

9ನೇ ಪುಟ ನೋಡಿ

'ನನ್ನ ಭಾಷಣ ತಪ್ಪಾಗಿ ಅರ್ಥೈಸಬೇಡಿ'

ಬೆಳಗಾವಿ: 'ಹಿಂದೂ ಶಬ್ದ ಪರ್ಷಿಯನ್ ಭಾಷೆಯಿಂದ ಬಂದಿದ್ದು ಎಂದು ನಾನು ಹೇಳಿದ್ದು ನಿಜ. ಈ ಬಗ್ಗೆ ಚರ್ಚೆ ಆಗಬೇಕು ಎಂದು ಹೇಳಿದ್ದೇನೆ ಹೊರತು, ಹಿಂದೂ ಪದದ ಬಗ್ಗೆ ನಿಂದನೆ ಮಾಡಿಲ್ಲ' ಎಂದು ಸತೀಶ ಜಾರಕಿಹೊಳಿ ಸ್ಪಷ್ಟನೆ ನೀಡಿದ್ದಾರೆ.

ತಮ್ಮ ಟ್ವಿಟರ್ ಹಾಗೂ ಫೇಸ್‌ಬುಕ್ ಖಾತೆಗಳಲ್ಲಿ ವಿಡಿಯೊ ಮೂಲಕ ಪ್ರತಿಕ್ರಿಯೆ ನೀಡಿರುವ ಅವರು, 'ನನ್ನ ಭಾಷಣವನ್ನು ಕೆಲ ಮಾಧ್ಯಮದವರು ತಪ್ಪಾಗಿ ಅರ್ಥೈಸಿ, ದೊಡ್ಡದಾಗಿ ಹರಿಬಿಟ್ಟಿದ್ದಾರೆ. ನಾ ಹೇಳಿದ್ದರಲ್ಲೇನೂ ತಪ್ಪಿಲ್ಲ. ಹಿಂದೂ ಪದವು ಪರ್ಷಿಯನ್ ಮೂಲದ್ದು ಎಂಬುದಕ್ಕೆ ದಾಖಲೆಗಳಿವೆ' ಎಂದಿದ್ದಾರೆ.

'ಆರ್ಯ ಸಮಾಜದ ಸಂಸ್ಥಾಪಕ ಸ್ವಾಮಿ ದಯಾನಂದ ಸರಸ್ವತಿ ಅವರು ರಚಿಸಿದ 'ಸತ್ಯಾರ್ಥ ಪ್ರಕಾಶ' ಪುಸ್ತಕದಲ್ಲಿ, ಡಾ.ಜಿ.ಎಸ್. ಪಾಟೀಲ ಅವರು ಬರೆದ 'ಬಸವ ಭಾರತ' ಪುಸ್ತಕದಲ್ಲೂ ಇದರ ಉಲ್ಲೇಖವಿದೆ. ಬಾಲಗಂಗಾಧರ ತಿಲಕ ಅವರ 'ಕೇಸರಿ' ಪತ್ರಿಕೆಯಲ್ಲೂ ಇದರ ಮಾಹಿತಿ ನೀಡಿದ್ದರು. ಇಂಥ ಸಾಕಷ್ಟು ದಾಖಲೆಗಳಿವೆ' ಎಂದೂ ಹೇಳಿದ್ದಾರೆ.

9ನೇ ಪುಟ ನೋಡಿ

ಕಾಂಗ್ರೆಸ್ ಪಕ್ಷವು ಎಲ್ಲಾ ಧರ್ಮ, ನಂಬಿಕೆ ಮತ್ತು ವಿಶ್ವಾಸಗಳಿಗೆ ಗೌರವ ನೀಡುವ ದೇಶವನ್ನು ಕಟ್ಟಿದೆ. ಇದು ಭಾರತದ ಸತ್ವ. ಜಾರಕಿಹೊಳಿ ಅವರ ಹೇಳಿಕೆ ದುರದೃಷ್ಟಕರ. ಇದನ್ನು ಖಂಡಿಸುತ್ತೇವೆ

ರಣದೀಪ್‌ಸಿಂಗ್ ಸುರ್ಜೇವಾಲಾ
ರಾಜ್ಯ ಕಾಂಗ್ರೆಸ್ ಉಸ್ತುವಾರಿ

ಪೋಕ್ಸೊ: ವಯೋಮಿತಿ ಪರಿಶೀಲನೆಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಹದಿನಾರು ವರ್ಷ ದಾಟಿದ ಬಾಲಕಿಯರು ಪ್ರೇಮ ಪ್ರಕರಣಗಳಲ್ಲಿ ಸಿಲುಕಿ ಮನೆಬಿಟ್ಟು ಓಡಿ ಹೋಗುವ ಮತ್ತು ಲೈಂಗಿಕ ಸಂಪರ್ಕ ಹೊಂದುವ ಪ್ರಕರಣಗಳು ಹೆಚ್ಚುತ್ತಿದ್ದು, ಈ ನಿಟ್ಟಿನಲ್ಲಿ ಬಾಲಕಿಯರ ಲೈಂಗಿಕ ಸಂಪರ್ಕದ ವಯೋಮಿತಿಯ ಬಗ್ಗೆ ಪುನರ್ ಪರಿಶೀಲನೆ ನಡೆಸಬೇಕು ಮತ್ತು ವಾಸ್ತವ ಸಂಗತಿಗಳ ಆಧಾರದಲ್ಲಿ ಈ ನಿಟ್ಟಿನಲ್ಲಿ ಮರುಚಿಂತನೆ ನಡೆಸಬೇಕು' ಎಂದು ಹೈಕೋರ್ಟ್, ಭಾರತೀಯ ಕಾನೂನು ಆಯೋಗಕ್ಕೆ ನಿರ್ದೇಶಿಸಿದೆ.

ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆ ಆರೋಪದ ಪ್ರಕರಣವೊಂದರಲ್ಲಿ ಸೆಷನ್ಸ್ ನ್ಯಾಯಾಲಯದ ಆದೇಶ ಪ್ರಶ್ನಿಸಿ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಮೇಲ್ಮನವಿ ವಜಾಗೊಳಿಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಮತ್ತು ಜಿ.ಬಸವರಾಜ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಮಹತ್ವದ ಆದೇಶ ನೀಡಿದೆ.

'ಪೋಕ್ಸೊ ಕಾಯ್ದೆ ಅನುಸಾರ ಲೈಂಗಿಕ ಸಂಪರ್ಕಕ್ಕೆ ಹೊಂದಲು ಸಮ್ಮತಿಯ ವಯಸ್ಸು 18 ವರ್ಷ. ಹಾಗಾಗಿ, ವಾಸ್ತವ ನೆಲೆಗಟ್ಟಿನಲ್ಲಿ ಪೋಕ್ಸೊ ಕಾಯ್ದೆ ಅಡಿಯಲ್ಲಿನ ಸಮ್ಮತಿಯ ವಯಸ್ಸಿನ ಮಾನದಂಡದ ಬಗ್ಗೆ ಕಾನೂನು ಆಯೋಗ ಮರುಚಿಂತನೆ ನಡೆಸಬೇಕಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ವಿದ್ಯಾರ್ಥಿಗಳಿಗೆ 9ನೇ ತರಗತಿಯಿಂದಲೇ ಭಾರತೀಯ ದಂಡ ಸಂಹಿತೆ-1860 (ಐಪಿಸಿ) ಹಾಗೂ ಪೋಕ್ಸೊ ಕಾಯ್ದೆ-2012ರ ನಿಯಮಗಳ ಬಗ್ಗೆ ಶಿಕ್ಷಣ ನೀಡಬೇಕು. ಈ ನಿಟ್ಟಿನಲ್ಲಿ ಸೂಕ್ತ ಶಿಕ್ಷಣ ಸಾಮಗ್ರಿ ರೂಪಿಸಲು ರಾಜ್ಯ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಗಳು ಸಮಿತಿಯೊಂದನ್ನು ರಚಿಸಬೇಕು. ಐಪಿಸಿ ಮತ್ತು ಪೋಕ್ಸೊ ಕಾಯ್ದೆ ನಿಯಮ ಉಲ್ಲಂಘನೆ ಮಾಡುವುದರಿಂದ ಎಂತಹ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂಬ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಬೇಕು. ಈ ಕುರಿತಂತೆ ಮುನ್ನೆಚ್ಚರಿಕೆ ನೀಡುವಂತೆ ಎಲ್ಲಾ ಶಾಲೆಗಳಿಗೆ ಸೂಚಿಸಬೇಕು. ಸಮಿತಿಯು ಈ ಬಗ್ಗೆ ಅನುಪಾಲನಾ ವರದಿ ಸಲ್ಲಿಸಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

ಪ್ರಕರಣವೇನು?: 'ನನ್ನ ಮಗಳನ್ನು ಓಡಿಸಿಕೊಂಡು ಹೋಗಿದ್ದಾನೆ ಮತ್ತು ಆಕೆಯೊಂದಿಗೆ ಲೈಂಗಿಕ ಸಂಪರ್ಕ ಹೊಂದಿದ್ದಾನೆ' ಎಂಬ ತಾಯಿಯ ಆರೋಪದ ಮೇರೆಗೆ ಆರೋಪಿಯ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿತ್ತು. ಪ್ರಕರಣ ವಿಚಾರಣಾ ಹಂತದಲ್ಲಿರುವಾಗಲೇ ಆರೋಪಿ ಮತ್ತು ಸಂತ್ರಸ್ತೆ ಮದುವೆಯಾಗಿದ್ದರು. 'ಎರಡು ಮಕ್ಕಳನ್ನು ಪಡೆದು ಸುಖಜೀವನ ನಡೆಸುತ್ತಿರುವ ನಮಗೀಗ ಪ್ರಕರಣ ಮುಂದುವರಿಸುವ ಬಯಕೆ ಇಲ್ಲ' ಎಂದು ಸಂತ್ರಸ್ತೆ ಮತ್ತು ಆರೋಪಿ ನ್ಯಾಯಾಲಯಕ್ಕೆ ಜಂಟಿ ಮೆಮೊ (ಜ್ಞಾಪನಾ ಪತ್ರ) ಸಲ್ಲಿಸಿದ್ದರು. ಇದನ್ನು ಪರಿಗಣಿಸಿದ್ದ ನ್ಯಾಯಾಲಯ ಆರೋಪಿಯನ್ನು ಖುಲಾಸೆಗೊಳಿಸಿತ್ತು. ಈ ಆದೇಶ ರದ್ದು ಕೋರಿ ಪ್ರಾಸಿಕ್ಯೂಷನ್ ಹೈಕೋರ್ಟ್‌ಗೆ ಕ್ರಿಮಿನಲ್ ಮೇಲ್ಮನವಿ ಸಲ್ಲಿಸಿತ್ತು.

ಕಾಂಗ್ರೆಸ್, ಭಾರತ್ ಜೋಡೊ ಟ್ವಿಟರ್ ಖಾತೆಗೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಜಿಎಫ್-2 ಚಿತ್ರದ ಸಂಗೀತವನ್ನು ಅನುಮತಿ ಇಲ್ಲದೆ ಬಳಸಿಕೊಂಡಿರುವ ಆರೋಪದ ಮೇರೆಗೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ (ಐಎನ್‌ಸಿ) ಮತ್ತು ಭಾರತ್ ಜೋಡೊ ಯಾತ್ರೆಯ ಅಧಿಕೃತ ಟ್ವಿಟರ್ ಖಾತೆಗಳನ್ನು ಇದೇ 21ರವರೆಗೆ ತಾತ್ಕಾಲಿಕವಾಗಿ ನಿರ್ಬಂಧಿಸಲು ನಗರದ ವಾಣಿಜ್ಯ ನ್ಯಾಯಾಲಯ ಮಧ್ಯಂತರ ಆದೇಶ ಮಾಡಿದೆ.

ಕೆಜಿಎಫ್-2 ಚಿತ್ರದ ಸಂಗೀತದ ಹಕ್ಕುಸ್ವಾಮ್ಯ ಹೊಂದಿರುವ ಎಂಆರ್‌ಟಿ ಮ್ಯೂಸಿಕ್ ಕಂಪನಿ ಸಲ್ಲಿಸಿರುವ ಅಸಲು ದಾವೆ ವಿಚಾರಣೆ ನಡೆಸಿದ ನಗರದ 86ನೇ ವಾಣಿಜ್ಯ ನ್ಯಾಯಾಲಯ ಈ ಕುರಿತಂತೆ ಆದೇಶಿಸಿದೆ. 'ಭಾರತ್ ಜೋಡೊ ಯಾತ್ರೆ ವೇಳೆ ಕೆಜಿಎಫ್-2 ಚಿತ್ರದ ಸಂಗೀತವನ್ನು ಅನುಮತಿ ಇಲ್ಲದೆ ಬಳಕೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ. ಇದನ್ನು ತಡೆಯದೆ ಹೋದರೆ ಅರ್ಜಿದಾರರಿಗೆ ಸಾಕಷ್ಟು ಹಾನಿ ಉಂಟಾಗುತ್ತದೆ ಮತ್ತು ಪೈರಸಿಯನ್ನು ದೊಡ್ಡ ಪ್ರಮಾಣದಲ್ಲಿ ಪ್ರೋತ್ಸಾಹಿಸಿದಂತಾಗುತ್ತದೆ' ಎಂದು ಆದೇಶದಲ್ಲಿ ಅಭಿಪ್ರಾಯ ವ್ಯಕ್ತಪಡಿಸಲಾಗಿದೆ.

ಕೆಜಿಎಫ್-2 ಚಿತ್ರದ ಸಂಗೀತವನ್ನು ಅನಧಿಕೃತವಾಗಿ ಬಳಸಿಕೊಂಡ ವಿಚಾರದಲ್ಲಿ ವಿದ್ಯುನ್ಮಾನ ಪರಿಶೋಧನೆ ಮಾಡಬೇಕಿದೆ. ಐಎನ್‌ಸಿ ಇಂಡಿಯಾದ ಟ್ವಿಟರ್, ಭಾರತ್ ಜೋಡೊ ಯಾತ್ರೆಯ ಟ್ವಿಟರ್, ಫೇಸ್‌ಬುಕ್, ಯೂ ಟ್ಯೂಬ್, ಇನ್‌ಸ್ಟಾಗ್ರಾಂ ಸಾಮಾಜಿಕ ಜಾಲತಾಣದ ಅಧಿಕೃತ ಖಾತೆಯಲ್ಲಿರುವ ಹಕ್ಕುಸ್ವಾಮ್ಯ ಮತ್ತು ಬೌದ್ಧಿಕ ಆಸ್ತಿ ಹಕ್ಕಿಗೆ ಸಂಬಂಧಿಸಿದ ಸಾಮಗ್ರಿಗಳನ್ನು ವಿದ್ಯುನ್ಮಾನ ಪರಿಶೋಧನೆ ನಡೆಸಲು ವಾಣಿಜ್ಯ ನ್ಯಾಯಾಲಯದ ಕಂಪ್ಯೂಟರ್ ವಿಭಾಗದ ಜಿಲ್ಲಾ ಸಿಸ್ಟಮ್ಸ್ ಆಡಳಿತಾಧಿಕಾರಿ ಎಸ್. ಎನ್. ವೆಂಕಟೇಶ ಮೂರ್ತಿ ಅವರನ್ನು ಸ್ಥಳೀಯ ಕಮಿಷನರ್ ಆಗಿ ನೇಮಕ ಮಾಡಿ ನ್ಯಾಯಾಲಯ ಆದೇಶಿಸಿದೆ.

'ಸ್ಥಳೀಯ ಕಮಿಷನರ್ ಅವರು ಕಾಂಗ್ರೆಸ್‌ನ ಅಧಿಕೃತ ವೆಬ್‌ಸೈಟ್ ಮತ್ತು ಸಾಮಾಜಿಕ ಜಾಲತಾಣಗಳ ಖಾತೆಯಲ್ಲಿರುವ ಸಾಮಗ್ರಿಗಳನ್ನು ಪರಿಶೀಲಿಸಬೇಕು. ಅದನ್ನು ನ್ಯಾಯಾಲಯದ ಸಿಸ್ಟೆಮ್ಯಾಂಡ್‌ನಲ್ಲಿ ಪ್ರತ್ಯೇಕ ಕಾಂಪ್ಯಾಕ್ಟ್ ಡಿಸ್ಕ್ (ಸಿಡಿ) ರೂಪದಲ್ಲಿ ಸಂಗ್ರಹಣೆ ಮಾಡಬೇಕು' ಎಂದು ನಿರ್ದೇಶಿಸಲಾಗಿದೆ.



ದೀಪೋತ್ಸವ ಕಾರ್ತಿಕ ಮಾಸದ ಎರಡನೇ ಸೋಮವಾರ ಹೊಸಪೇಟೆ ತಾಲ್ಲೂಕಿನ ಹಂಪಿ ವಿರೂಪಾಕ್ಷೇಶ್ವರ ದೇವಸ್ಥಾನದ ಅಂಗಳದಲ್ಲಿ ಭಕ್ತರು ದೀಪಗಳನ್ನು ಬೆಳಗಿಸಿದರು
ಚಿತ್ರ: ರಾಚಯ್ಯ ಎಸ್. ಸ್ಥಾವರಿಮಠ

'ಸಚಿವರಿಗೆ ₹ 15 ಲಕ್ಷ ಸಂದಾಯ'

ಪಾಲಿಕೆ ವ್ಯವಸ್ಥಾಪಕ– ಗುತ್ತಿಗೆದಾರರೊಬ್ಬರ ಸಂಭಾಷಣೆಯ ಆಡಿಯೊ ಬಹಿರಂಗ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಬೀದಿಬದಿ ವ್ಯಾಪಾರಿಗಳಿಂದ ಜಕಾತಿ (ಸುಂಕ) ಸಂಗ್ರಹಕ್ಕೆ ಅನುಮತಿ ನೀಡಲು ಗುತ್ತಿಗೆದಾರರೊಬ್ಬರಿಂದ ಲಂಚ ಪಡೆಯುತ್ತಿದ್ದಾಗ ಭಾನುವಾರ ಲೋಕಾಯುಕ್ತ ಬಲೆಗೆ ಬಿದ್ದಿದ್ದ ಮಹಾನಗರ ಪಾಲಿಕೆಯ ವ್ಯವಸ್ಥಾಪಕ ವೆಂಕಟೇಶ್ ಅವರು 'ಜಿಲ್ಲಾ ಉಸ್ತುವಾರಿ ಸಚಿವರಿಗೂ (ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ) ₹ 15 ಲಕ್ಷ ಸಂದಾಯ ಮಾಡಲಾಗಿದೆ' ಎಂದು ಹೇಳಿರುವ ಆಡಿಯೊ ಸೋಮವಾರ ಹೊರಬಿದ್ದಿದೆ.

'2021ರಲ್ಲಿ ಜಕಾತಿ ಸಂಗ್ರಹದ ಗುತ್ತಿಗೆ ಪಡೆದಿದ್ದೆ. ನಷ್ಟದ ಕಾರಣ ಗುತ್ತಿಗೆ ಅವಧಿ ವಿಸ್ತರಿಸುವಂತೆ ಪಾಲಿಕೆ ಆಯುಕ್ತರನ್ನು ಕೇಳಿಕೊಂಡಿದ್ದೆ. ಅದಕ್ಕೆ ಆಯುಕ್ತರು, ವ್ಯವಸ್ಥಾಪಕ ವೆಂಕಟೇಶ್ ಅವರನ್ನು ಸಂಪರ್ಕಿಸಲು ಸೂಚಿಸಿದ್ದರು. ಗುತ್ತಿಗೆ ನವೀಕರಿಸಲು ವೆಂಕಟೇಶ್ ₹ 7 ಲಕ್ಷದ ಲಂಚಕ್ಕೆ ಬೇಡಿಕೆ ಇರಿಸಿ, ಮುಂಗಡವಾಗಿ ₹ 2 ಲಕ್ಷ ಪಡೆದಿದ್ದರು. ಭಾನುವಾರ ರಾತ್ರಿ ಮತ್ತೆ ₹ 3 ಲಕ್ಷ ಪಡೆಯುವಾಗ ಲೋಕಾಯುಕ್ತರ ಬಲೆಗೆ ಬಿದ್ದಿದ್ದಾರೆ' ಎಂದು ಗುತ್ತಿಗೆದಾರ ಕೃಷ್ಣ ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.



ಬೈರತಿ ಬಸವರಾಜ



ಕೃಷ್ಣ

'ಜಿಲ್ಲಾ ಉಸ್ತುವಾರಿ ಸಚಿವರಿಗೆ ₹ 15 ಲಕ್ಷ ನೀಡಲಾಗಿದೆ' ಎಂದು ಪಾಲಿಕೆ ವ್ಯವಸ್ಥಾಪಕ ವೆಂಕಟೇಶ್ ಹೇಳಿರುವ ಆಡಿಯೊವನ್ನು ಇದೇ ವೇಳೆ ಶ್ರೀರಾಮ ಸೇನೆಯ ಜಿಲ್ಲಾ ಘಟಕದ ಅಧ್ಯಕ್ಷ ಮಣಿ ಸರ್ಕಾರ್ ಅವರೊಂದಿಗೆ ಬಹಿರಂಗಪಡಿಸಿದ ಅವರು, 'ಪಾಲಿಕೆಯು ಭ್ರಷ್ಟಾಚಾರದ ಉಗ್ರಾಣವಾಗಿದೆ' ಎಂದು ದೂರಿದರು.

'ಕಮಿಷನರ್ ಬಾಯಿಬಿಟ್ಟು ಕೇಳಿದ್ದಾರೆ. ಕೃಷ್ಣ ಅವರಿಗೆ ಹೇಳಿ ₹ 5 ಲಕ್ಷ ಕೊಡಿಸಿ ಅಂದಿದ್ದಾರೆ. ಯಾರಿಗೆ ಕೊಡ್ತಾರೆ, ನಮಗೆ ಕೊಟ್ರೆ ಲಾಸ್ ಆಗುತ್ತೇನ್ರೀ, ಕೆಲಸ ಮಾಡಿ ಕೊಡುವುದಿಲ್ಲವೇ ಎಂಬುದಾಗಿ ತಿಳಿಸಿದ್ದಾರೆ' ಎಂದು ವೆಂಕಟೇಶ್ ಹಾಗೂ ಕೃಷ್ಣ ನಡುವೆ ನಡೆದಿರುವ ಮಾತುಕತೆಯ ವಿವರ ಆಡಿಯೊದಲ್ಲಿದೆ.

'ಕಮಿಷನರ್ ಟೆನ್ಷನ್‌ನಲ್ಲಿದ್ದಾರೆ. ಮೊನ್ನೆ ಸಚಿವರು ಬಂದಾಗ ₹ 15 ಲಕ್ಷ ಕೊಟ್ಟಿದ್ದಾರೆ' ಎಂದು ವೆಂಕಟೇಶ್ ಹೇಳಿರುವ ಹಾಗೂ 'ಸಚಿವರೆಂದರೆ, ಬೈರತಿ ಬಸವರಾಜ ಅವರಿಗಾ? ಪ್ರತಿ ಬಾರಿ ಬಂದಾಗಲೂ ಅವರಿಗೆ ದುಡ್ಡು ಕೊಡಬೇಕಾ' ಎಂದು ಗುತ್ತಿಗೆದಾರ ಪ್ರಶ್ನಿಸುವುದೂ ಆಡಿಯೊದಲ್ಲಿ ದಾಖಲಾಗಿದೆ.

ಆಯುಕ್ತರ ಮೇಲೆ ಕ್ರಮಕ್ಕೆ ಆಗ್ರಹ: 'ಪಾಲಿಕೆ ಆಯುಕ್ತ ವಿಶ್ವನಾಥ ಪಿ. ಮುದಜ್ಜಿ ಕೂಡ ಈ ಭ್ರಷ್ಟಾಚಾರದಲ್ಲಿ ಪಾಲುದಾರರಾಗಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಆಯುಕ್ತರು ಆಂಜನೇಯ ಬಡಾವಣೆಯಲ್ಲಿ ₹ 3 ಕೋಟಿ ವೆಚ್ಚದ ಮನೆ ಕಟ್ಟಿಸುತ್ತಿದ್ದಾರೆ. ಹಲವು ನಿವೇಶನಗಳನ್ನು ಹೊಂದಿದ್ದಾರೆ. ದಾಖಲೆ ಸರಿ ಇರುವ ಯಾವುದೇ ಕೆಲಸಗಳೂ ಪಾಲಿಕೆಯಲ್ಲಿ ಆಗುತ್ತಿಲ್ಲ. ದಾಖಲೆ ಸರಿ ಇಲ್ಲದ, ಅಕ್ರಮ ಕೆಲಸಗಳಷ್ಟೇ ಆಗುತ್ತಿವೆ' ಎಂದು ಮಣಿ ಸರ್ಕಾರ್ ಆರೋಪಿಸಿದರು.

ನವೆಂಬರ್ 4ರಿಂದ ಡಿಸೆಂಬರ್ 14ರ ನಡುವಿನ ಅವಧಿ

ಮದುವೆ ವಹಿವಾಟು ₹ 3.75 ಲಕ್ಷ ಕೋಟಿ ನಿರೀಕ್ಷೆ



ನವದೆಹಲಿ (ಪಿಟಿಐ): ನವೆಂಬರ್ 4ರಿಂದ ಡಿಸೆಂಬರ್ 14ರ ನಡುವಿನ ಅವಧಿಯಲ್ಲಿ ದೇಶದಲ್ಲಿ ಒಟ್ಟು 32 ಲಕ್ಷ ಮದುವೆಗಳು ನಡೆಯುವ ಅಂದಾಜು ಇದೆ. ಇಷ್ಟು ಮದುವೆಗಳು ದೇಶದಲ್ಲಿ ಒಟ್ಟು ₹ 3.75 ಲಕ್ಷ ಕೋಟಿ ಮೌಲ್ಯದ ವಹಿವಾಟು ನಡೆಯುವುದಕ್ಕೆ ಕಾರಣವಾಗಲಿವೆ!

ವ್ಯಾಪಾರಿಗಳ ಸಂಘಟನೆಯಾಗಿರುವ ಅಖಿಲ ಭಾರತ ವರ್ತಕರ ಮಹಾಸಂಘ (ಸಿಎಐಟಿ) ಈ ಅಂದಾಜು ಸಿದ್ಧಪಡಿಸಿದೆ. ಮಹಾಸಂಘದ ಸಂಶೋಧನಾ ವಿಭಾಗವು ನಡೆಸಿದ ಅಧ್ಯಯನದ ಮೂಲಕ ಸಿಕ್ಕ ಅಂಕಿ–ಅಂಶಗಳ ಆಧಾರದಲ್ಲಿ ಈ ಅಂದಾಜು ಮಾಡಲಾಗಿದೆ.

ಅಧ್ಯಯನದ ಭಾಗವಾಗಿ ದೇಶದ ಒಟ್ಟು 35 ನಗರಗಳಲ್ಲಿ 4,302 ವರ್ತಕರು ಹಾಗೂ ಸೇವಾದಾತರಿಂದ ಮಾಹಿತಿ ಪಡೆಯಲಾಗಿದೆ.

ನವೆಂಬರ್ 4ರಿಂದ ಡಿಸೆಂಬರ್ 14ರವರೆಗಿನ ಅವಧಿಯಲ್ಲಿ ದೆಹಲಿಯಲ್ಲಿಯೇ 3.5 ಲಕ್ಷ ಮದುವೆಗಳು ನಡೆಯಲಿದೆ ಎಂದು ಅಂದಾಜು ಮಾಡಲಾಗಿದೆ ಎಂದು ಸಿಎಐಟಿ ಪ್ರಧಾನ ಕಾರ್ಯದರ್ಶಿ ಪ್ರವೀಣ್ ಖಂಡೇಲ್ವಾಲ್ ತಿಳಿಸಿದ್ದಾರೆ. ಇಷ್ಟು ಮದುವೆಗಳಿಂದ ಒಟ್ಟು ₹ 75 ಸಾವಿರ ಕೋಟಿ ಮೌಲ್ಯದ ವಹಿವಾಟು ಸಾಧ್ಯವಾಗಲಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ದೇಶದಲ್ಲಿ ಒಟ್ಟು 25 ಲಕ್ಷ ಮದುವೆಗಳು ನಡೆದಿದ್ದವು. ಇವುಗಳಿಂದಾಗಿ ಒಟ್ಟು ಅಂದಾಜು ₹ 3 ಲಕ್ಷ ಕೋಟಿ ಮೌಲ್ಯದ ವಹಿವಾಟು ನಡೆದಿದ್ದವು.

ಮದುವೆ ನಿಮಿತ್ತ ನಡೆಯುವ ಖರೀದಿಗಳ ಕಾರಣದಿಂದಾಗಿ ಈ ಬಾರಿ ₹ 3.75 ಲಕ್ಷ ಕೋಟಿ ಮೌಲ್ಯದ ವಹಿವಾಟು ನಡೆಯುವ ನಿರೀಕ್ಷೆ ಇದೆ. ಮುಂದಿನ ಮದುವೆ ಋತು ಜನವರಿ 14ರಿಂದ ಜುಲೈವರೆಗೆ ಇರಲಿದೆ ಎಂದು ಖಂಡೇಲ್ವಾಲ್ ತಿಳಿಸಿದ್ದಾರೆ.

ಮುರುಘಾ ಮಠದ ಹಾಸ್ಟೆಲ್: ಸಂತ್ರಸ್ತೆಯರ ಶಂಕೆ

ಆಂಧ್ರದ ವಿದ್ಯಾರ್ಥಿನಿಯ ಸಾವಿನ ತನಿಖೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಮುರುಘಾ ಮಠದ ಹಾಸ್ಟೆಲ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದ ಸಹಪಾಠಿಯ ಸಾವಿನ ಬಗ್ಗೆ, ಪೋಕ್ಸೊ ಸಂತ್ರಸ್ತ ವಿದ್ಯಾರ್ಥಿನಿಯರು ವ್ಯಕ್ತಪಡಿಸಿದ ಅನುಮಾನದ ಜಾಡು ಹಿಡಿದು ಪೊಲೀಸರು ಆಂಧ್ರಪ್ರದೇಶಕ್ಕೆ ತೆರಳಿ ತನಿಖೆ ನಡೆಸಿದ್ದಾರೆ. ವಿದ್ಯಾರ್ಥಿನಿ ರೈಲಿಗೆ ಸಿಲುಕಿ ಮೃತಪಟ್ಟಿರುವ ಸಂಗತಿ ತನಿಖೆಯಿಂದ ದೃಢಪಟ್ಟಿದೆ.

ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಪೋಕ್ಸೊ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿದ ಪ್ರೌಢಶಾಲೆಯ ಇಬ್ಬರು ವಿದ್ಯಾರ್ಥಿನಿಯರು, ತನಿಖೆಯ ಭಾಗವಾಗಿ ಹೇಳಿಕೆ ನೀಡಿದಾಗ ತಮ್ಮ ಸಹಪಾಠಿಯ ಸಾವಿನ ಬಗ್ಗೆ ಶಂಕೆ ವ್ಯಕ್ತಪಡಿಸಿದ್ದರು.

ಪೋಕ್ಸೊ ಪ್ರಕರಣದ ತನಿಖೆ ನಡೆಸುತ್ತಿದ್ದ ಡಿವೈಎಸ್‌ಪಿ ಅನಿಲ್‌ಕುಮಾರ್ ನೇತೃತ್ವದ ತಂಡ ವಿದ್ಯಾರ್ಥಿನಿಯ ಸಾವಿನ ಸತ್ಯಾಸತ್ಯತೆ ಅರಿಯಲು ಆಂಧ್ರಪ್ರದೇಶದ ಹಿಂದೂಪುರಕ್ಕೆ ಭೇಟಿ ನೀಡಿತ್ತು. ಮೂಲತಃ ಆಂಧ್ರಪ್ರದೇಶದ ವಿದ್ಯಾರ್ಥಿನಿ ಮುರುಘಾ ಮಠದಲ್ಲಿ ವ್ಯಾಸಂಗ ಮಾಡುತ್ತಿದ್ದಳು. ಹಾಸ್ಟೆಲ್‌ನಲ್ಲಿ ಸಂತ್ರಸ್ತ ವಿದ್ಯಾರ್ಥಿನಿಯರೊಂದಿಗೆ ಆಶ್ರಯ ಪಡೆದಿದ್ದಳು. ಮೂರು ವರ್ಷಗಳ ಹಿಂದೆ ಈ ವಿದ್ಯಾರ್ಥಿನಿ ರೈಲಿಗೆ ಸಿಲುಕಿ ಮೃತಪಟ್ಟಿರುವ ವಿಷಯ ತಿಳಿದಿತ್ತು. ಆದರೆ, ಸಹಪಾಠಿಯ ಸಾವು ಪೋಕ್ಸೊ ಸಂತ್ರಸ್ತ ವಿದ್ಯಾರ್ಥಿನಿಯರಲ್ಲಿ ಸಂಶಯ, ಆತಂಕ ಮೂಡಿಸಿತ್ತು ಎಂಬುದು ತನಿಖೆಯಿಂದ ಗೊತ್ತಾಗಿದೆ.

'ಆಂಧ್ರಪ್ರದೇಶದ ಹಿಂದೂಪುರ ರೈಲ್ವೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅನುಮಾನಾಸ್ಪದ ಸಾವು ಪ್ರಕರಣ ದಾಖಲಾಗಿತ್ತು. ವಿದ್ಯಾರ್ಥಿನಿಯೊಬ್ಬಳು ಚಲಿಸುತ್ತಿದ್ದ ರೈಲಿನಿಂದ ಆಕಸ್ಮಿಕವಾಗಿ ಬಿದ್ದು ಮೃತಪಟ್ಟಿರುವುದು ರೈಲ್ವೆ ಪೊಲೀಸರ ತನಿಖೆಯಲ್ಲಿ ದೃಢಪಟ್ಟಿತ್ತು. ಈ ಮಾಹಿತಿಯನ್ನು ತನಿಖಾ ತಂಡ ಕಲೆಹಾಕಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಪರಶುರಾಮ ತಿಳಿಸಿದ್ದಾರೆ.

ಚಿನಕುರಳಿ
ಪ್ರಕಾಶ್ ಶೆಟ್ಟಿ



ಅಂಬೇಡ್ಕರ್ ನಿಗಮ: ಸುರೇಶ್ ನಾಯ್ಕ್ ಅಧಿಕಾರ ಸ್ವೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ.ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಹುದ್ದೆಯ ಕುರ್ಚಿಗಾಗಿ ನಡೆದ 'ಗುದ್ದಾಟ' ಅಂತ್ಯಗೊಂಡಿದ್ದು, ಕೆ.ಎನ್. ಸುರೇಶ್ ನಾಯ್ಕ್ ಅವರು ಸೋಮವಾರದಿಂದ ಕರ್ತವ್ಯ ನಿರತರಾಗಿದ್ದಾರೆ.

ಭ್ರಷ್ಟಾಚಾರ ಆರೋಪ ಎದುರಿಸುತ್ತಿರುವ ಹಾಲಿ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಸುರೇಶ್ ಕುಮಾರ್ ಅವರನ್ನು ವರ್ಗಾವಣೆ ಮಾಡಿ, ಆ ಜಾಗಕ್ಕೆ ಸುರೇಶ್ ನಾಯ್ಕ್ ಅವರನ್ನು ನಿಯೋಜಿಸಿತ್ತು. ಆದರೆ, ಸುರೇಶ್ ಕುಮಾರ್ 'ಕುರ್ಚಿ' ಬಿಟ್ಟು ಕೊಡದ ಕಾರಣ ಗೊಂದಲ ಉಂಟಾಗಿತ್ತು. ಈ ಬಗ್ಗೆ 'ಪ್ರಜಾವಾಣಿ' ಸೋಮವಾರದ ಸಂಚಿಕೆಯಲ್ಲಿ ವರದಿ ಮಾಡಿತ್ತು.

'ವರದಿ ಪ್ರಕಟಗೊಳ್ಳುತ್ತಿದ್ದಂತೆ ಎಚ್ಚೆತ್ತುಕೊಂಡ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಮತ್ತು ಇಲಾಖೆಯ ಕಾರ್ಯದರ್ಶಿ ಪಿ. ಮಣಿವಣ್ಣನ್ ಅವರು, ಸುರೇಶ್ ಕುಮಾರ್ ಅವರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಅಲ್ಲದೆ, ಕುರ್ಚಿ ಬಿಟ್ಟುಕೊಟ್ಟು, ಕರ್ತವ್ಯ ನಿಭಾಯಿಸಲು ಸುರೇಶ್ ನಾಯ್ಕ್ ಅವರಿಗೆ ಅವಕಾಶ ಮಾಡಿಕೊಡುವಂತೆ ತಾಕೀತು ಮಾಡಿದ್ದರು' ಎಂದು ಮೂಲಗಳು ತಿಳಿಸಿವೆ.

'ಯುಎಎಚ್' ಕೋರ್ಸ್‌ಗಳ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕದ ಯೂನಿವರ್ಸಿಟಿ ಆಫ್ ಅಲಬಾಮದಲ್ಲಿ (ಯುಎಎಚ್) ಉನ್ನತ ಶಿಕ್ಷಣ ಮತ್ತು ಸಂಶೋಧನೆ ಕೈಗೊಳ್ಳಲು ಇರುವ ಅವಕಾಶಗಳ ಕುರಿತು ಬೆಂಗಳೂರು ನಗರ ವಿಶ್ವವಿದ್ಯಾಲಯದ ತಂತ್ರಜ್ಞಾನ ಇಲಾಖೆ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ವಿದ್ಯಾರ್ಥಿಗಳಿಗೆ ಆಯೋಜಿಸಿತ್ತು.

ಯೂನಿವರ್ಸಿಟಿ ಆಫ್ ಅಲಬಾಮಾದ ಕಂಪ್ಯೂಟರ್ ಸೈನ್ಸ್ ಎಮಿರೆಟ್ಸ್ ಪ್ರೊಫೆಸರ್ ರಂಗನಾಥ್ ಅವರು, ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಜತೆ ಸಮಾಲೋಚನೆ ನಡೆಸಿದರು.

ಬಿಸಿಎ, ಬಿ.ಎಸ್ಸಿ, ಕಂಪ್ಯೂಟರ್ ಸೈನ್ಸ್ ವಿಷಯದ ನಾಲ್ಕು ವರ್ಷದ ಪದವಿ ಕೋರ್ಸ್‌ಗಳಲ್ಲಿ ಅತ್ಯುತ್ತಮ ಶೈಕ್ಷಣಿಕ ಅರ್ಹತೆ ಹೊಂದಿರುವವರಿಗೆ ಕಂಪ್ಯೂಟರ್ಸ್ ಸೈನ್ಸ್‌ನಲ್ಲಿ ವಿದ್ಯಾರ್ಥಿವೇತನದೊಂದಿಗೆ ಎಂ.ಎಸ್. ಮತ್ತು ಸಂಶೋಧನೆ ಕೈಗೊಳ್ಳಬಹುದು ಎಂದು ವಿವರಿಸಿದರು.

ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಇದ್ದರು.

ಕುಂಬೇನ ಅಗ್ರಹಾರದಲ್ಲಿ ನಾಲೆ ಒತ್ತುವರಿ ಪ್ರಕರಣ

ಬಿಲ್ಡರ್‌ಗೆ ₹46 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಮಹದೇವಪುರ ವಲಯದ ಕುಂಬೇನ ಅಗ್ರಹಾರದಲ್ಲಿ ನಾಲೆ ಒತ್ತುವರಿ ಮಾಡಿ ಕಟ್ಟಡ ನಿರ್ಮಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಲ್ಡರ್‌ಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು (ಕೆಎಸ್‌ಪಿಸಿಬಿ) ₹46.12 ಲಕ್ಷ ಪರಿಸರ ದಂಡ ವಿಧಿಸಿದೆ.

ಈ ಸಂಬಂಧ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ದಕ್ಷಿಣ ವಲಯ ಪೀಠಕ್ಕೆ ಮಂಡಳಿಯು ಪ್ರಮಾಣ ಪತ್ರ ಸಲ್ಲಿಸಿದೆ.

ಕುಂಬೇನ ಅಗ್ರಹಾರದ ಸರ್ವೆ ಸಂಖ್ಯೆ 2/1 ಹಾಗೂ 2/7ರಲ್ಲಿ ವೆಂಕಟೇಶ್ವರ ಬಿಲ್ಡರ್ (ಎಸ್.ವಿ.ಎಲಿಗೆಂಟ್) ವಸತಿ ಸಮುಚ್ಚಯ ನಿರ್ಮಾಣ ಮಾಡುತ್ತಿದೆ. ಈ ಬಿಲ್ಡರ್ ನಾಲೆಯ ಮೀಸಲು ಪ್ರದೇಶದಲ್ಲಿ 203 ಚದರ ಮೀಟರ್‌ನಲ್ಲಿ ಈಜುಕೊಳ, 20.50 ಚದರ ಮೀಟರ್‌ನಲ್ಲಿ ಸ್ನಾನದ ಕೊಠಡಿಗಳನ್ನು ನಿರ್ಮಾಣ ಮಾಡಿದ್ದಾರೆ. ನಾಲೆಯ ಮೀಸಲು ಪ್ರದೇಶದಲ್ಲಿ ನಿಯಮಬಾಹಿರವಾಗಿ ವಸತಿ ಸಮುಚ್ಚಯ ನಿರ್ಮಾಣ ಮಾಡಲಾಗುತ್ತಿದೆ ಎಂದು ಆರೋಪಿಸಿ ಸ್ಥಳೀಯ ನಿವಾಸಿ ಪರಮೇಶ್ ವಿ. ಎಂಬುವರು ಬಿಬಿಎಂಪಿಗೆ ದೂರು ಸಲ್ಲಿಸಿದ್ದರು. ಆದರೆ, ಬಿಬಿಎಂಪಿ ಅಧಿಕಾರಿಗಳು ಕ್ರಮ ಕೈಗೊಂಡಿರಲಿಲ್ಲ. ಬಳಿಕ ಪರಮೇಶ್, ಎನ್‌ಜಿಟಿಯಲ್ಲಿ ಪ್ರಕರಣ ದಾಖಲಿಸಿದ್ದರು.

ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಉಪ ಪರಿಸರ ಅಧಿಕಾರಿ 2022ರ ಏಪ್ರಿಲ್ 27ರಂದು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಿದ್ದರು. ಮಹಾಯೋಜನೆಯ ನಿಯಮಗಳನ್ನು ಉಲ್ಲಂಘಿಸಿ ನಿರ್ಮಾಣ ಚಟುವಟಿಕೆ ನಡೆಸಲಾಗಿದೆ ಎಂದು ವರದಿ ಸಲ್ಲಿಸಿದ್ದರು. ಎನ್‌ಜಿಟಿಯಲ್ಲಿ ಜುಲೈ 18ರಂದು ನಡೆದ ವಿಚಾರಣೆಯ ವೇಳೆ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಈ ಬಗ್ಗೆ ಮಾಹಿತಿ ನೀಡಿದ್ದರು.

ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡಿದ್ದರೂ ಬಿಬಿಎಂಪಿ ಅಧಿಕಾರಿಗಳು ಕ್ರಮ ಕೈಗೊಳ್ಳದಿರುವುದಕ್ಕೆ ಎನ್‌ಜಿಟಿ ಅತೃಪ್ತಿ ವ್ಯಕ್ತಪಡಿಸಿತ್ತು.

ಎನ್‌ಜಿಟಿಯಲ್ಲಿ ಪ್ರಕರಣ ದಾಖಲಾದ ಬೆನ್ನಲ್ಲೇ ಪಾಲಿಕೆಯು, ಬಿಬಿಎಂಪಿ ಕಾಯ್ದೆ 2020ರ ಕಟ್ಟಡ ನಿಯಮಾವಳಿ ಹಾಗೂ ಬೈಲಾ ಉಲ್ಲಂಘಿಸಿ ಅನಧಿಕೃತ ಕಟ್ಟಡಗಳನ್ನು ನಿರ್ಮಾಣ ಮಾಡಲಾಗಿದೆ. ಅನಧಿಕೃತ ಕಟ್ಟಡ ನಿರ್ಮಾಣದ ತೆರವಿಗೆ ಕ್ರಮ ವನ್ನೂ ಕೈಗೊಳ್ಳಲಾಗಿದೆ ಎಂದು ಎನ್‌ಜಿಟಿಗೆ ವರದಿ ಸಲ್ಲಿಸಿತ್ತು.

ಸೆಪ್ಟೆಂಬರ್ 19ರಂದು ನಡೆದ ಪ್ರಕರಣದ ವಿಚಾರಣೆಯ ವೇಳೆ ಬಿಬಿಎಂಪಿ ಅಧಿಕಾರಿಗಳು, ಅಕ್ರಮ ನಿರ್ಮಾಣಗಳನ್ನು ತೆರವು ಮಾಡಲಾಗಿದೆ ಎಂದು ಮಾಹಿತಿ ನೀಡಿದ್ದರು. ಈ ಸಂಬಂಧ ಕೈಗೊಂಡ ಕ್ರಮಗಳ ವರದಿಯನ್ನು ಎನ್‌ಜಿಟಿಗೆ ಸಲ್ಲಿಸಿದ್ದರು.

ಅರ್ಜಿದಾರರ ವಕೀಲರು, 'ನಾಲೆಯ ಮೀಸಲು ಪ್ರದೇಶ ಒತ್ತುವರಿ ಮಾಡಿ ಕಟ್ಟಡದ ಕಾಂಪೌಂಡ್ ನಿರ್ಮಾಣ ಮಾಡಲಾಗಿದೆ' ಎಂದು ವಾದಿಸಿದ್ದರು. ಈ ಬಗ್ಗೆ ಅಧಿಕಾರಿಗಳು ಸರ್ವೆ ನಡೆಸಿ ವರದಿ ಸಲ್ಲಿಸಬೇಕು ಎಂದು ಎನ್‌ಜಿಟಿ ಆದೇಶ ಹೊರಡಿಸಿತ್ತು. ಬಳಿಕ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಿದ್ದರು.

'ಈಜುಕೊಳ, ಸ್ನಾನದ ಕೊಠಡಿ ತೆರವು ಮಾಡಲಾಗಿದೆ. ಆದರೆ, ನಾಲೆಯ ಮೀಸಲು ಪ್ರದೇಶದಲ್ಲಿ ನಿರ್ಮಾಣ ಮಾಡಿರುವ ಕಟ್ಟಡದ ಕಾಂಪೌಂಡ್ ಹಾಗೆಯೇ ಇದೆ. ಹೀಗಾಗಿ, ಪರಿಸರ ಪರಿಹಾರದ ರೂಪದಲ್ಲಿ ಬಿಲ್ಡರ್‌ಗೆ ₹46.12 ಲಕ್ಷ ದಂಡ ವಿಧಿಸಲಾಗಿದೆ. ಈ ಸಂಬಂಧ ನೋಟಿಸ್ ನೀಡಲಾಗಿದೆ' ಎಂದು ಮಾಲಿನ್ಯ ನಿಯಂತ್ರಣ ಮಂಡಳಿಯ ಹಿರಿಯ ಪರಿಸರ ಅಧಿಕಾರಿ ಎಂ.ಜಿ.ಯತೀಶ್ ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ.

ಬಿಬಿಎಂಪಿ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಬಿಬಿಎಂಪಿಯ ಮೂವರು ಮುಖ್ಯ ಎಂಜಿನಿಯರ್ ಅವರನ್ನು ವರ್ಗಾವಣೆ ಮಾಡಿ ಮುಖ್ಯ ಆಯುಕ್ತರು ಸೋಮವಾರ ಆದೇಶ ಹೊರಡಿಸಿದ್ದಾರೆ.

ಎಂ. ಲೋಕೇಶ್ ಅವರನ್ನು ಮಹದೇವಪುರ ವಲಯಕ್ಕೆ, ಬಸವರಾಜ್ ಕಬಾಡೆ ಅವರನ್ನು ಬೃಹತ್ ನೀರುಗಾಲುವೆ ವಿಭಾಗಕ್ಕೆ ಹಾಗೂ ವಿನಾಯಕ ಸುಗೂರು ಅವರನ್ನು ಯೋಜನಾ ವಿಭಾಗಕ್ಕೆ ವರ್ಗಾಯಿಸಲಾಗಿದೆ.

'ಶಾಲೆಗಳ ದತ್ತು ಚಳವಳಿಯಾಗಲಿ'

ಪ್ರಜಾವಾಣಿ ವಾರ್ತೆ



ವೀರಭದ್ರ ನಗರ ಮತ್ತು ಹೊಸಕೆರೆಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಪ್ರೊ. ಎಂ.ಆರ್. ದೊರೆಸ್ವಾಮಿ ಅವರು ಬ್ಯಾಗ್ ಮತ್ತು ನೋಟ್ ಬುಕ್‌ಗಳನ್ನು ವಿತರಿಸಿದರು. ಸಚಿವ ಮುನಿರತ್ನ, ಹೃದ್ರೋಗ ತಜ್ಞೆ ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ ಇದ್ದರು.

ಬೆಂಗಳೂರು: ಪಿಇಎಸ್ ಸಂಸ್ಥೆಗಳ ಸಂಸ್ಥಾಪಕ ಹಾಗೂ ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ. ಎಂ ಆರ್. ದೊರೆಸ್ವಾಮಿ ಅವರ ಜನ್ಮದಿನದ ಅಂಗವಾಗಿ ಸೋಮವಾರ ಸಂಸ್ಥಾಪಕರ ದಿನ ಆಚರಿಸಲಾಯಿತು.

ಪಿಇಎಸ್ ವಿಶ್ವವಿದ್ಯಾಲಯ ದತ್ತು ಪಡೆದಿರುವ ವೀರಭದ್ರ ನಗರ ಮತ್ತು ಹೊಸಕೆರೆಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಬ್ಯಾಗ್ ಮತ್ತು ನೋಟ್ ಬುಕ್‌ಗಳನ್ನು ವಿತರಿಸುವ ಕಾರ್ಯಕ್ರಮವನ್ನು ಜನ್ಮದಿನದ ಅಂಗವಾಗಿ ಆಯೋಜಿಸಲಾಗಿತ್ತು.

ಹೃದ್ರೋಗ ತಜ್ಞೆ ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ ಮಾತನಾಡಿ, 'ದೊರೆಸ್ವಾಮಿ ಅವರದ್ದು ಸಮರ್ಪಣೆಯ ಜೀವನ. ಜ್ಞಾನವನ್ನು ಪಸರಿಸುವ ಕೈಂಕರ್ಯವನ್ನು ದೊರೆಸ್ವಾಮಿ ಅವರು ಕೈಗೊಂಡಿದ್ದಾರೆ' ಎಂದರು.

ಪ್ರೊ.ಎಂ.ಆರ್. ದೊರೆಸ್ವಾಮಿ ಮಾತನಾಡಿ, 'ಸರ್ಕಾರಿ ಶಾಲೆಗಳ ದತ್ತು ಸಾಮಾಜಿಕ ಚಳವಳಿಯಾಗಬೇಕು' ಎಂದು ಹೇಳಿದರು.

ಸಚಿವ ಮುನಿರತ್ನ, ಪಿಇಎಸ್ ವಿಶ್ವವಿದ್ಯಾಲಯದ ಕುಲಪತಿ ಡಾ.ಜಿ. ಸೂರ್ಯಪ್ರಸಾದ್, ಕುಲಸಚಿವ ಡಾ.ಕೆ. ಎಸ್.ಶ್ರೀಧರ್ ಹಾಗೂ ವೀರಭದ್ರನಗರದ ಮತ್ತು ಹೊಸಕೆರೆಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ಮುಖ್ಯಸ್ಥರು ಉಪಸ್ಥಿತರಿದ್ದರು.



ನಗರದಲ್ಲಿ ಭಾನುವಾರ 'ಗದಾಯುದ್ಧಂ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ವೀರಲೋಕ ಪ್ರಕಾಶನದ ವ್ಯವಸ್ಥಾಪಕ ಆನಂದ್ ರಾಜ್, ಲೇಖಕ ಡಿ.ಎಸ್.ಶ್ರೀನಿವಾಸ್, ವ್ಯಾಖ್ಯಾನಕಾರ ಎ.ವಿ.ಪ್ರಸನ್ನ, ಲೇಖಕ ಎಂ.ಎ.ಜಯರಾಮರಾವ್, ವಿದ್ವಾಂಸ ಅರಳು ಮಲ್ಲಿಗೆ ಪಾರ್ಥಸಾರಥಿ ಹಾಜರಿದ್ದರು – ಪ್ರಜಾವಾಣಿ ಚಿತ್ರ

'ಗಮಕಕ್ಕೆ ದೊರೆಯದ ಪ್ರೋತ್ಸಾಹ'

ಬೆಂಗಳೂರು: 'ಬರಹಗಾರರು ಬೆಳೆಯಲು ಪ್ರಕಾಶಕರ ಜತೆಗೆ ಕುಟುಂಬದ ಬೆಂಬಲ ಹಾಗೂ ಪ್ರೋತ್ಸಾಹವೂ ಮುಖ್ಯ' ಎಂದು ವಿದ್ವಾಂಸ ಡಾ.ಅರಳು ಮಲ್ಲಿಗೆ ಪಾರ್ಥಸಾರಥಿ ಹೇಳಿದರು.

ವೀರಲೋಕ ಪುಸ್ತಕ ಪ್ರಕಾಶನವು ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗಮಕ ವಿದ್ವಾಂಸ ಡಾ.ಎಂ.ಎ.ಜಯರಾಮರಾವ್ ಅವರ 'ಗದಾಯುದ್ಧಂ– ಒಂದು ವ್ಯಾಖ್ಯಾನ' ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಲೇಖಕರಿಗೆ ಎಲ್ಲ ಕ್ಷೇತ್ರದ ಬೆಂಬಲ ಲಭಿಸಿದರೆ ಬೆಳೆಯಲು ಸಾಧ್ಯ. ನಾನು ಹಾಗೂ ಜಯರಾಮರಾವ್ ಅವರು ಜತೆಗೂಡಿ ಸಾಕಷ್ಟು ಸಾಹಿತ್ಯ ಕೃಷಿ ಮಾಡಿದ್ದೇವೆ. ರನ್ನನ ಕಾವ್ಯ ಹಾಗೂ ಪದಗಳು ನಾನಾರ್ಥಗಳು ನೀಡುತ್ತವೆ' ಎಂದು ಹೇಳಿದರು.

ಲೇಖಕ ಡಾ.ಎಂ.ಎ.ಜಯರಾಮರಾವ್, 'ರನ್ನ, ಜನ್ನ, ಪಂಪ ಹಾಗೂ ಕುಮಾರವ್ಯಾಸ ಅವರ ಕಾವ್ಯಗಳು ಇನ್ನೂ ಪ್ರಸ್ತುತದಲ್ಲಿವೆ. ಅದಕ್ಕೆ ಕಾರಣವಾದವರು ಗಮಕಿಗಳು. ಆದರೆ, ಸರ್ಕಾರ ಮತ್ತು ಅಕಾಡೆಮಿ ಗಮಕಕ್ಕೆ ಪ್ರಾಶಸ್ತ್ಯ ನೀಡದಿರುವುದು ನೋವು ತಂದಿದೆ' ಎಂದರು.

> **ಪುಸ್ತಕ ಪರಿಚಯ**
> ಕೃತಿ: 'ಗದಾಯುದ್ಧಂ– ಒಂದು ವ್ಯಾಖ್ಯಾನ'
> ಲೇಖಕ: ಡಾ.ಎಂ.ಎ.ಜಯರಾಮರಾವ್
> ಪುಟಗಳು: 304, ಬೆಲೆ: ₹ 350
> ಪ್ರಕಾಶನ: ವೀರಲೋಕ

ಲೇಖಕ ಶ್ರೀನಿವಾಸ ಮಾತನಾಡಿ, ಗದಾಯುದ್ಧಂ ಕೃತಿಯಲ್ಲಿ ರನ್ನನ ಶಬ್ದ ಭಂಡಾರವೇ ಇದೆ ಎಂದರು.

ವ್ಯಾಖ್ಯಾನಕಾರ ಡಾ.ಎ.ವಿ.ಪ್ರಸನ್ನ ಅವರು, ಪಂಪನ ಕಾವ್ಯದಲ್ಲಿನ ಕರ್ಣನ ವೈಭವೀಕರಣ, ರನ್ನನ ಕಾವ್ಯದ ದುರ್ಯೋಧನ ವೈಭವೀಕರಣ ಕುರಿತು ವಿಶ್ಲೇಷಿಸಿ, ಅಂದಿನ ಅವರ ರಾಜಾಶ್ರಯ ಹಾಗೂ ರಾಜಕಾರಣ ಇದಕ್ಕೆ ಕಾರಣವಿರಬಹುದೇ ಎಂದರು. ವೀರಲೋಕ ಪ್ರಕಾಶನದ ವೀರಕಪುತ್ರ ಶ್ರೀನಿವಾಸ್, ಗಮಕಕಲಾ ಪರಿಷತ್ತಿನ ಅಧ್ಯಕ್ಷೆ ಗಂಗಮ್ಮ ಕೇಶವಮೂರ್ತಿ, ವಾಣಿಜ್ಯೋದ್ಯಮಿ ಎಂ.ವಿ. ಸತ್ಯನಾರಾಯಣ, ಬ್ರಾಹ್ಮಣ ವೆಲ್ ಫೇರ್ ಅಸೋಸಿಯೇಷನ್‌ನ ಅಧ್ಯಕ್ಷ ಡಾ.ಸತ್ಯಪ್ರಕಾಶ್ ಇದ್ದರು.

ಮೆಟ್ರೊ: ಹೂಡಿ ತನಕ ಪರೀಕ್ಷಾರ್ಥ ಸಂಚಾರ

ಬೆಂಗಳೂರು: ಬೈಯಪ್ಪನಹಳ್ಳಿ–ವೈಟ್‌ಫೀಲ್ಡ್ ನಡುವೆ ಪರೀಕ್ಷಾರ್ಥ ಸಂಚಾರವನ್ನು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಚುರುಕುಗೊಳಿಸಿದ್ದು, ಸೋಮವಾರ ಹೂಡಿ ತನಕ ಯಶಸ್ವಿಯಾಗಿ ವಿಸ್ತರಿಸಿದೆ.

ಅ.21ರಂದು ವೈಟ್‌ಫೀಲ್ಡ್–ಪಟ್ಟಂದೂರು ಅಗ್ರಹಾರ (ಐಟಿಪಿಎಲ್) ನಡುವೆ 3.5 ಕಿ.ಮೀ ಪರೀಕ್ಷಾರ್ಥ ಸಂಚಾರ ಆರಂಭಿಸಿತ್ತು. ಸೋಮವಾರ ಹೂಡಿ ತನಕ 8.3 ಕಿ.ಮೀ ಮಾರ್ಗದಲ್ಲಿ ಆರು ಬೋಗಿಗಳ ಮೆಟ್ರೊ ರೈಲು ಗಂಟೆಗೆ 15 ಕಿ.ಮೀ ವೇಗದಲ್ಲಿ ಸಂಚರಿಸಿದ್ದು, ತಾಂತ್ರಿಕ ಅಂಶಗಳನ್ನು ಪರಿಶೀಲಿಸಲಾಯಿತು.

ಒಟ್ಟು 15.5 ಕಿ.ಮೀ ಮಾರ್ಗದ ಪೈಕಿ 11.8 ಕಿ.ಮೀ ಅಂತರದಲ್ಲಿ ಪರೀಕ್ಷಾರ್ಥ ಸಂಚಾರ ಆರಂಭವಾಗಿದೆ. 2023ರ ಜನವರಿ ಕೊನೆ ಅಥವಾ ಫೆಬ್ರುವರಿಯಲ್ಲಿ ಬೈಯಪ್ಪನಹಳ್ಳಿ–ವೈಟ್‌ಫೀಲ್ಡ್ ಮೆಟ್ರೊ ರೈಲು ಸಂಚಾರ ಸಾರ್ವಜನಿಕರಿಗೆ ಲಭ್ಯವಾಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ನಗರದಲ್ಲಿ ಇಂದು

ರೇಣುಕಾ ದೇವಿ ಎಲ್ಲಮ್ಮ ದೇವಸ್ಥಾನದ ಸಹಾಯಾರ್ಥವಾಗಿ 'ಮಿನುಗುತಾರೆಯ ಕಡೆಯ ದಿನಗಳು' ನಾಟಕ: ಭಾವನಾ ರಾಮಣ್ಣ ಮೊದಲ ಬಾರಿಗೆ ರಂಗಭೂಮಿಯಲ್ಲಿ ಅಭಿನಯ, ಆಯೋಜನೆ: ಆದಿಶಕ್ತಿ ಶೈಕ್ಷಣಿಕ ಸಾಮಾಜಿಕ ಕಲಾ ಸಂಸ್ಥೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 4ರಿಂದ ಕಲ್ಪನಾ ಅಭಿನಯದ ಗೀತೆಗಳಿಗೆ ನೃತ್ಯ, ನಾಟಕ ಸಂಜೆ 5



ಭಾವನಾ ರಾಮಣ್ಣ

ಸಾರಿಗೆ ಕನ್ನಡ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ: ಪ್ರಶಸ್ತಿ ಪ್ರದಾನ ಮಾಡುವವರು: ಮನು ಬಳಿಗಾರ್, ಅಧ್ಯಕ್ಷತೆ: ವೂಡೇ ಪಿ.ಕೃಷ್ಣ, ಮುಖ್ಯ ಅತಿಥಿಗಳು ಎಸ್. ಎಚ್.ಭುವನೇಶ್ವರ್, ವತ್ಸಲಾ ಮೋಹನ್, ಅಭಿನಂದನಾ ನುಡಿ: ವ.ಚ.ಚನ್ನೇಗೌಡ, ಆಯೋಜನೆ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಕನ್ನಡ ಕ್ರಿಯಾ ಸಮಿತಿ, ಸ್ಥಳ: ನಯನ ಸಭಾಂಗಣ, ಸಂಜೆ 5.30

ವೈಜ್ಞಾನಿಕ ಮನೋಧರ್ಮದೊಂದಿಗೆ ಚಂದ್ರಗ್ರಹಣ ಕಾರ್ಯಕ್ರಮ: ಭಾಗವಹಿಸುವವರಿಗೆ ಹಣ್ಣು, ಒಬ್ಬಟ್ಟು, ಸಮೋಸ, ಮೊಟ್ಟೆ ಬಿರಿಯಾನಿ, ಬ್ಲಾಕ್ ಟೀ ವಿತರಣೆ, ಆಯೋಜನೆ: ಮೂಢನಂಬಿಕೆ ವಿರೋಧಿ ಒಕ್ಕೂಟ, ಸ್ಥಳ: ಟೌನ್‌ಹಾಲ್, ಸಂಜೆ 5

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ: ಮತ್ತೊಂದು ಹೆಜ್ಜೆ ಗುರುತು • ನ.11ರಂದು ಉದ್ಘಾಟಿಸಲಿರುವ ಪ್ರಧಾನಿ ನರೇಂದ್ರ ಮೋದಿ

ಬಿಐಎಎಲ್: ಹೊಸತುಗಳ 2ನೇ ಟರ್ಮಿನಲ್

• ಆದಿತ್ಯ ಕೆ.ಎ.

ಬೆಂಗಳೂರು: ದೇಶ ಹಾಗೂ ವಿದೇಶದ ಪ್ರಯಾಣಿಕರನ್ನು ತನ್ನತ್ತ ಸೆಳೆಯುತ್ತಿರುವ 'ಸಿಲಿಕಾನ್ ಸಿಟಿ' ಬೆಂಗಳೂರು ಅಂತರರಾಷ್ಟ್ರೀಯ ಮಟ್ಟದಲ್ಲಿ ಮತ್ತೊಂದು ಹೆಜ್ಜೆ ಗುರುತು ಮೂಡಿಸುತ್ತಿದೆ.


ದೇವನಹಳ್ಳಿಯ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಟರ್ಮಿನಲ್-2 ಉದ್ಘಾಟನೆಗೆ ಸಜ್ಜುಗೊಂಡಿದೆ. ಪ್ರಧಾನಿ ನರೇಂದ್ರ ಮೋದಿ ಅವರು ನ.11ರಂದು ಉದ್ಘಾಟಿಸುತ್ತಿದ್ದು, ಬಳಿಕ ಪ್ರಯಾಣಿಕರ ಸೇವೆಗೆ ಲಭ್ಯವಾಗಲಿದೆ. ಇದಕ್ಕಾಗಿ ಬಿಐಎಎಲ್ ಸಿದ್ಧತೆ ಮಾಡಿಕೊಂಡಿದೆ.

ಮೊದಲ ಟರ್ಮಿನಲ್‌ಗಿಂತಲೂ 2ನೇ ಟರ್ಮಿನಲ್‌ನಲ್ಲಿ ಅತ್ಯಾಧುನಿಕ ವ್ಯವಸ್ಥೆಗಳಿದ್ದು, ವಿದ್ಯುತ್ ದೀಪಗಳ ಅಲಂಕಾರದಿಂದ ಈಗಲೇ ಪ್ರಯಾಣಿಕರನ್ನು ಸೆಳೆಯುತ್ತಿದೆ. ಇದು ಉದ್ಘಾಟನೆಗೊಂಡರೆ ಪ್ರಯಾಣಿಕರ ದಟ್ಟಣೆ ನಿಯಂತ್ರಣ ಸುಗಮವಾಗಲಿದೆ.

'ಕೆಂಪೇಗೌಡ ವಿಮಾನ ನಿಲ್ದಾಣವು ಅತ್ಯುತ್ತಮ ಪ್ರಾದೇಶಿಕ ವಿಮಾನ ನಿಲ್ದಾಣ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದು, ವೈಮಾನಿಕ ಸಂಚಾರ ವ್ಯವಸ್ಥೆಗೆ ಮತ್ತಷ್ಟು ಬಲ ಬರಲಿದೆ' ಎಂದು ನಿಲ್ದಾಣದ ಅಧಿಕಾರಿಗಳು ಹೇಳುತ್ತಾರೆ.

'ಈಗ ವಿಮಾನ ನಿಲ್ದಾಣಗಳು ವಾಣಿಜ್ಯ ಚಟುವಟಿಕೆಯ ಕೇಂದ್ರಗಳಾಗಿ ಹೊರಹೊಮ್ಮುತ್ತಿವೆ. ಅದಕ್ಕೆ ತಕ್ಕಂತೆ ಸಂಪರ್ಕ, ಮೂಲಸೌಕರ್ಯ ವ್ಯವಸ್ಥೆ ಕಲ್ಪಿಸಲಾಗಿದೆ. ವಿಮಾನ ನಿಲ್ದಾಣ ನಿರ್ಮಾಣದ ಮೇಲಿನ ಹೂಡಿಕೆಗಳು ಸ್ಥಳೀಯ ಹಾಗೂ ರಾಷ್ಟ್ರೀಯ, ಅಂತರರಾಷ್ಟ್ರೀಯ ಆರ್ಥಿಕತೆಯ ಮೇಲೆ ಪರಿಣಾಮ ಬೀರಲಿದೆ. ವಿಶ್ವದಲ್ಲಿ ವೇಗವಾಗಿ ಬೆಳೆಯುತ್ತಿರುವ ವಿಮಾನ ನಿಲ್ದಾಣಗಳ ಪೈಕಿ ಬೆಂಗಳೂರೂ ಒಂದು. ಇಲ್ಲಿ ಒಟ್ಟಾರೆ ₹ 13 ಸಾವಿರ ಕೋಟಿ ಬಂಡವಾಳ ಹೂಡಿಕೆ ಮಾಡಲಾಗಿದೆ' ಎಂದು ಬಿಐಎಎಲ್ ಅಧಿಕಾರಿಯೊಬ್ಬರು ತಿಳಿಸಿದರು.

'2008ರಲ್ಲಿ ಕಾರ್ಯಾಚರಣೆ ಆರಂಭಿಸಿದ ನಿಲ್ದಾಣವು ದಕ್ಷಿಣ ಭಾರತದ ಅತ್ಯಂತ ದಟ್ಟಣೆ ವಿಮಾನ ನಿಲ್ದಾಣವಾಗಿ ಬೆಳೆದಿದೆ. ಈ ದಟ್ಟಣೆ ನಿಯಂತ್ರಣ ಉದ್ದೇಶದಿಂದ ವಿಸ್ತರಣೆ ಮಾಡಲಾಗಿದೆ. ಇದು ಹೊಸ ಬಹು-ಮಾದರಿ ಸಾರಿಗೆ ಕೇಂದ್ರವಾಗಿ ಹೊರಹೊಮ್ಮಿದೆ' ಎಂದು ಅವರು ಹೇಳಿದರು.



ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 2ರ ಒಳಾಂಗಣ


ಪ್ರಯಾಣಿಕರಿಗೆ ಪ್ರಕೃತಿ ಸೌಂದರ್ಯದ ಅನುಭವ ಬರುವಂತೆ ಟರ್ಮಿನಲ್ 2 ಅನ್ನು ವಿನ್ಯಾಸ ಮಾಡಲಾಗಿದೆ. ಪ್ರಯಾಣಿಕರು ವಿಶ್ರಾಂತಿ ಪಡೆಯುವ ಸ್ಥಳದಲ್ಲಿ ಉದ್ಯಾನ ನಿರ್ಮಿಸಲಾಗಿದೆ. ಹೊಸ ಟರ್ಮಿನಲ್‌ನಲ್ಲಿ ಪ್ರಯಾಣಿಕರು ಸಾಗುವಾಗ ಉದ್ಯಾನದಲ್ಲಿ ನಡೆದಾಡಿದ ಅನುಭವ ಸಿಗಲಿದೆ. ಡಿಜಿಟಲ್ ವ್ಯವಸ್ಥೆಯ ಮೂಲಕ ರಾಜ್ಯದ ಜಲಮೂಲಗಳು, ನೈಸರ್ಗಿಕ ಕಾಡು ತೋರಿಸಲು ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಪ್ರಯಾಣಿಕರಿಗೆ ಪುಟ್ಟ ಕಾಡಿನಲ್ಲಿದ್ದ ಅನುಭವ ಸಿಗುವಂತೆ ಕಟ್ಟಡ ವಿನ್ಯಾಸಗೊಂಡಿದೆ.

ಎರಡೂ ಟರ್ಮಿನಲ್‌ಗಳ ನಡುವೆ ಫ್ಲೈಓವರ್ ನಿರ್ಮಿಸಲಾಗಿದೆ. ಮಳೆ ನೀರು ಸಂಗ್ರಹ ವ್ಯವಸ್ಥೆಯಿದ್ದು, ಇದೇ ನೀರನ್ನು ಶುದ್ಧೀಕರಿಸಿ ಬಳಸಲು ಚಿಂತಿಸಲಾಗಿದೆ. ಖಾಲಿ ಜಾಗದಲ್ಲಿ ಕೆರೆ ನಿರ್ಮಿಸಲಾಗಿದೆ. ಇದು ಸಹ ನಿಲ್ದಾಣಕ್ಕೆ ಮೆರುಗು ಹೆಚ್ಚಿಸಲಿದೆ.

ಸೋಲಾರ್ ವ್ಯವಸ್ಥೆ ಅಳವಡಿಸಲಾಗಿದ್ದು, ವಿದ್ಯುತ್ ಬಳಕೆಯಲ್ಲಿ ನಿಲ್ದಾಣವು ಸ್ವಾವಲಂಬನೆ ಸಾಧಿಸಲಿದೆ ಎಂದು ಹೆಸರು ಹೇಳಲು ಬಯಸದ ಸಿಬ್ಬಂದಿಯೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಪ್ರಯಾಣಿಕರು ದಣಿವಿಲ್ಲದೇ ನಿಲ್ದಾಣಕ್ಕೆ ಪ್ರವೇಶ ಪಡೆಯುವ ವ್ಯವಸ್ಥೆ ಕಲ್ಪಿಸಲಾಗಿದೆ. ಪ್ರವೇಶದ ಪಾಸ್ ಪಡೆಯುವ ವಿಧಾನ ಸರಳೀಕರಿಸಲಾಗಿದೆ. 'ಡಿಜಿ ಯಾತ್ರೆ' ಸೌಕರ್ಯವೂ ನೆರವಾಗಲಿದೆ. ತಪಾಸಣಾ ಸಾಲು, ಬ್ಯಾಗ್ ಸ್ಕ್ರೀನಿಂಗ್ ವ್ಯವಸ್ಥೆ ಸಹ ಸ್ಮಾರ್ಟ್ ಆಗಿರಲಿದೆ. 1ನೇ ಟರ್ಮಿನಲ್‌ನಂತೆಯೇ ಇಲ್ಲಿಯೂ ರೋಬೊಗಳು ಓಡಾಟ ನಡೆಸಲಿವೆ.

ಪ್ರಯಾಣಿಕರ ಓಡಾಟ ಹೆಚ್ಚಳ: ವಿಮಾನ ಪ್ರಯಾಣಿಕರ ಸಂಖ್ಯೆಯು ಕೋವಿಡ್ ಪೂರ್ವದ ಹಂತಕ್ಕೆ ತಲುಪಿದೆ. ಕೆಂಪೇಗೌಡ ನಿಲ್ದಾಣದಿಂದ ಈ ವರ್ಷ ದೇಶೀಯವಾಗಿ 1,05,345 ವಿಮಾನಗಳು ಹಾಗೂ ವಿದೇಶಕ್ಕೆ 13,498 ವಿಮಾನಗಳು ಹಾರಾಟ ನಡೆಸಿವೆ. ದೇಶೀಯವಾಗಿ 1.43 ಕೋಟಿ ಹಾಗೂ ವಿದೇಶಕ್ಕೆ 19.60 ಲಕ್ಷ ಪ್ರಯಾಣಿಕರು ಈ ನಿಲ್ದಾಣದ ಮೂಲಕ ಬಂದು ಹೋಗಿದ್ದಾರೆ. ದೀಪಾವಳಿ ವೇಳೆ 5 ಲಕ್ಷ ದೇಶೀಯ ಹಾಗೂ 70 ಸಾವಿರ ಅಂತರರಾಷ್ಟ್ರೀಯ ಪ್ರಯಾಣಿಕರು ಪ್ರಯಾಣ ಬೆಳೆಸಿದ್ದಾರೆ.



ಆಕರ್ಷಕ ಒಳವಿನ್ಯಾಸ

ರಾಜ್ಯದ ಕಲೆ, ಸಂಸ್ಕೃತಿ ಅನಾವರಣ

ಅತ್ಯಾಧುನಿಕ ಸೌಲಭ್ಯದ ಜೊತೆಗೆ ಟರ್ಮಿನಲ್ 2ರಲ್ಲಿ ರಾಜ್ಯದ ಇತಿಹಾಸ, ಸಾಂಸ್ಕೃತಿಕ ಪರಂಪರೆ ಅನಾವರಣಗೊಂಡಿದೆ.

ಕಟ್ಟಡದಲ್ಲಿ ರಾಜ್ಯದ ಸಾಂಸ್ಕೃತಿಕ ವೈವಿಧ್ಯ ಮತ್ತು ವಿಶಿಷ್ಟ ಕಲಾ ಪ್ರಕಾರಗಳು ಕಣ್ಮನ ಸೆಳೆಯುತ್ತಿವೆ.

'ಅಳವಡಿಸಿರುವ ಸ್ಕ್ರೀನ್‌ಗಳಲ್ಲಿ ಕಲೆಗೆ ಸಂಬಂಧಿಸಿದ ವಿಡಿಯೊಗಳು ದಿನವಿಡೀ ಪ್ರದರ್ಶನಗೊಳ್ಳಲಿವೆ. ಅದಕ್ಕಾಗಿಯೇ ಪ್ರತ್ಯೇಕ 'ಆರ್ಟ್ ಲಾಂಜ್' ಎಂಬ ಪ್ರತ್ಯೇಕ ವಿಭಾಗ ನಿರ್ಮಿಸಲಾಗಿದೆ' ಎಂದು ಹೇಳುತ್ತಾರೆ ಬಿಐಎಎಲ್‌ನ ಅಧಿಕಾರಿಗಳು.

ವೈಶಿಷ್ಟಗಳು ಏನು?

- ಪುಟ್ಟ ಅರಣ್ಯ ಹಾಗೂ ಉದ್ಯಾನದಲ್ಲಿ ಓಡಾಡಿದ ಅನುಭವ
- ಸುಸ್ಥಿರತೆ ಕಾಯ್ದುಕೊಳ್ಳುವಿಕೆ
- ಹೊಸ ತಂತ್ರಜ್ಞಾನ ಹಾಗೂ ನಾವೀನ್ಯ
- ರಾಜ್ಯದ ಸಾಂಸ್ಕೃತಿಕ ವೈವಿಧ್ಯದ ಪರಿಚಯ



ಅತ್ಯಾಧುನಿಕ ವ್ಯವಸ್ಥೆ

- ವಿಸ್ತೀರ್ಣ: **2.55** ಲಕ್ಷ ಚದರ ಮೀಟರ್
- ಪ್ರಯಾಣಿಕರ ಗೇಟ್‌ಗಳ ಸಂಖ್ಯೆ: **22**
- ಬಸ್‌ಗೇಟ್‌ಗಳ ಸಂಖ್ಯೆ: **15**
- ವಲಸೆ ತಪಾಸಣೆ ಹಾಗೂ ಸಲಹಾ ಕೇಂದ್ರಗಳು: **95**
- ಪ್ರಯಾಣಿಕರ ತಪಾಸಣಾ ಸಾಲುಗಳು: **17**
- ಪ್ರವೇಶ ದ್ವಾರಗಳ ಸಂಖ್ಯೆ: ಸಾಮಾನ್ಯ **34**, ಇ–ಗೇಟ್ **6**, ವೀಸಾ **20**
- ನಿರ್ಗಮನ ದ್ವಾರಗಳ ಸಂಖ್ಯೆ: ಸಾಮಾನ್ಯ **30**, ಇ–ಗೇಟ್ **10**
- ಹ್ಯಾಂಡ್ ಬ್ಯಾಗ್ ಸ್ಕ್ರೀನಿಂಗ್: **9**
- ಲಾಂಜ್‌ನಲ್ಲಿ ಪ್ರಯಾಣಿಕರ ಸಾಮರ್ಥ್ಯ: **5,932**
- ಪ್ರಯಾಣಿಕರು ಲಗೇಜ್ ಪಡೆಯುವ ಸಾಧನಗಳು: **9**
- ಸಾಮರ್ಥ್ಯ: ವಾರ್ಷಿಕವಾಗಿ **2.5** ಕೋಟಿ ಪ್ರಯಾಣಿಕರು ಸಂಚಾರ ನಡೆಸಬಹುದು



'ಡೆಕ್ಕನ್ ಹೆರಾಲ್ಡ್' ಹಾಗೂ 'ಪ್ರಜಾವಾಣಿ' ಮಾಸ್ಟರ್ ಮೈಂಡ್ ವತಿಯಿಂದ ನಗರದ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಆಯೋಜಿಸಿದ್ದ ಭಾಷಣ ಸ್ಪರ್ಧೆಯಲ್ಲಿ (ಕನ್ನಡ ಭಾಷೆ) ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಹಿರಿಯರ ವಿಭಾಗ: (ನಿಂತವರು ಎಡದಿಂದ) ಹೊನಲ್ ಕೆ. ಗೌಡ– ವಿಡಿಯಾ ಪೂರ್ಣಪ್ರಜ್ಞಾ (ಐದನೇ ಬಹುಮಾನ), ವಿವೇಕ್– ಬಿಜಿಎಸ್ ಎನ್‌ಪಿಎಸ್ (ನಾಲ್ಕನೇ ಬಹುಮಾನ), ವೇದಾ– ಹೋಲಿ ಸ್ಪಿರಿಟ್ ಸ್ಕೂಲ್ (ಮೂರನೇ ಬಹುಮಾನ), ಮೈಸೂರು ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿನಿ ನಿಸರ್ಗಾ ಮಲ್ಲಿಗೆರೆ, ಟಿಪಿಎಂಎಲ್‌ನ ಲಿಸ್ಸಿ ಪ್ರಭಾಕರ್, ಇಮ್ತಿಯಾಜ್ ಅಹಮ್ಮದ್ ಶರೀಫ್, ನ್ಯಾಯಾಧೀಶರಾದ ಮನ್ವಿತಾ, ಪ್ರಣವ್– ಆಕ್ಸ್‌ಫರ್ಡ್ ಇಂಗ್ಲಿಷ್ ಸ್ಕೂಲ್ (ಎರಡನೇ ಬಹುಮಾನ), ಪರಿಣಿತಾ–ಐಟಿಐ ಸೆಂಟ್ರಲ್ ಸ್ಕೂಲ್ (ಪ್ರಥಮ ಬಹುಮಾನ). ಕಿರಿಯರ ವಿಭಾಗ: (ಕುಳಿತವರು ಎಡದಿಂದ) ಮೇರುಶ್ರೀ– ಆಕ್ಸ್‌ಫರ್ಡ್ ಇಂಗ್ಲಿಷ್ ಸ್ಕೂಲ್ (ಐದನೇ ಬಹುಮಾನ), ಅಜಿತ್ ಗೋವರ್ಧನ್; ದಿ ಕೇಂಬ್ರಿಡ್ಜ್ ಇಂಟರ್‌ನ್ಯಾಷನಲ್ ಸ್ಕೂಲ್ (ನಾಲ್ಕನೇ ಬಹುಮಾನ), ಶಶಾಂಕ್–ಐಟಿಐ ಸೆಂಟ್ರಲ್ ಸ್ಕೂಲ್ (ಮೂರನೇ ಬಹುಮಾನ), ಆರ್ಯಾ– ಮೌಂಟ್ ಕಾರ್ಮೆಲ್ (ಎರಡನೇ ಬಹುಮಾನ) ಹಾಗೂ ತನುಷಾ– ಬಿಜಿಎಸ್ ಎನ್‌ಪಿಎಸ್ (ಮೊದಲ ಬಹುಮಾನ) ಚಿತ್ರದಲ್ಲಿದ್ದಾರೆ.

ಅನರ್ಹರಿಗೆ ₹79 ಕೋಟಿ ಪರಿಹಾರ: ವರದಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಇಮ್ಮಾವು ಗ್ರಾಮದಲ್ಲಿ ಅನರ್ಹರಿಗೆ 54 ಎಕರೆ ಭೂಮಿಯನ್ನು ಖಾತೆ ಮಾಡಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ₹79.28 ಕೋಟಿ ಪರಿಹಾರವನ್ನು ನಿಯಮಬಾಹಿರವಾಗಿ ಪಾವತಿ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂರು ವಾರಗಳಲ್ಲಿ ಪ್ರಗತಿಯ ವರದಿ ನೀಡಬೇಕು ಎಂದು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ(ಪಿಎಸಿ) ಅಧಿಕಾರಿಗಳಿಗೆ ತಾಕೀತು ಮಾಡಿದೆ.

ಶಾಸಕ ಕೃಷ್ಣಬೈರೇಗೌಡ ಅವರ ಅಧ್ಯಕ್ಷತೆಯ ಸಮಿತಿ ಸಭೆಯ ಸೋಮವಾರ ನಡೆಯಿತು. ಈ ಪ್ರಕರಣದಲ್ಲಿ ಆರೋಪಿಗಳ ಆರೋಪ ಸಾಬೀತಾಗಿದ್ದರೂ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲು ಅಥವಾ ಶಿಕ್ಷೆಗೊಳಪಡಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಆಸಕ್ತಿ ವಹಿಸದೇ ಇರುವ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು ಎಂದು ಮೂಲಗಳು ತಿಳಿಸಿವೆ.

ಈಗಾಗಲೇ ಮೂರು ಸಭೆಗಳಲ್ಲಿ ಈ ವಿಷಯ ಚರ್ಚೆಗೆ ಬಂದಿದೆ. ಆ ಬಳಿಕವೇ ಪ್ರಕರಣ ದಾಖಲಾಗಿ ತನಿಖೆಗೆ ಚಾಲನೆ ಸಿಕ್ಕಿದೆ. ಆದರೆ ನಿರೀಕ್ಷಿತ ಪ್ರಗತಿ ಆಗಿಲ್ಲ. ಕೇಳಿದರೆ ಪ್ರಕರಣ ನ್ಯಾಯಾಲಯದಲ್ಲಿ ಇದೆ ಎಂದು ಅಧಿಕಾರಿಗಳು ಹೇಳುತ್ತಾರೆ. ಆದರೆ, ಈ ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ತಲುಪಿಸುವುದು ನಿಶ್ಚಿತ ಎಂದು ಕೃಷ್ಣಬೈರೇಗೌಡ ತಿಳಿಸಿದರು.

ಏನಿದು ಪ್ರಕರಣ: ಕೈಗಾರಿಕಾ ಪ್ರದೇಶ ಅಭಿವೃದ್ಧಿಗಾಗಿ ಅಡಕ್ಕನಹಳ್ಳಿ, ತಾಂಡವಪುರ ಹಾಗೂ ಇಮ್ಮಾವು ಗ್ರಾಮಗಳಲ್ಲಿ 1,123 ಎಕರೆ ಸ್ವಾಧೀನಕ್ಕೆ ಕೆಐಎಡಿಬಿ 2007ರಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿತ್ತು. ಬಳಿಕ 2008 ರಲ್ಲಿ 1,138 ಎಕರೆಗೆ ಅಂತಿಮ ಅಧಿಸೂಚನೆ ಹೊರಡಿಸಿ ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಇದರಲ್ಲಿ ಇಮ್ಮಾವು ಗ್ರಾಮದ 1,015 ಎಕರೆ ಸಹ ಸೇರಿದೆ.

ಭೂಸ್ವಾಧೀನಪಡಿಸಿಕೊಂಡ ಜಮೀನಿನ ಪೈಕಿ ಇಮ್ಮಾವು ಗ್ರಾಮದ ಹೊಸ ಸರ್ವೆ ಸಂಖ್ಯೆ 582, 583, 584, 585, 586, 587 ರ ಜಮೀನಿಗೆ ಕೆಐಎಡಿಬಿ ಮೈಸೂರು ವಲಯ ಕಚೇರಿಯ ವಿಶೇಷ ಭೂಸ್ವಾಧೀನಾಧಿಕಾರಿ (ಈಗ ನಿವೃತ್ತ) ಎಚ್.ಕೆ.ಕೃಷ್ಣಮೂರ್ತಿ ₹79.28 ಕೋಟಿ ಪರಿಹಾರ ಪಾವತಿಸಿದ್ದಾರೆ.

'ಎಲ್ಲ ಆರೋಪಗಳು ಸಾಬೀತಾಗಿವೆ. ಸತ್ತವರ ಹೆಸರಲ್ಲಿ ಪಹಣಿ ಸೃಷ್ಟಿ ಮಾಡಿದ್ದೂ ಅಲ್ಲದೇ, ನಕಲಿ ವಾರಸುದಾರರನ್ನು ಸೃಷ್ಟಿಸಿ ಅವರಿಗೆ ಅಕ್ರಮವಾಗಿ ಪರಿಹಾರವನ್ನೂ ವಿತರಿಸಲಾಗಿದೆ. ಕಂದಾಯ ಇಲಾಖೆ ಮತ್ತು ಕೈಗಾರಿಕಾ ಇಲಾಖೆಗಳು ಸೇರಿ ಪ್ರಕರಣದ ಬಗ್ಗೆ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಬೇಕು. ಆದರೆ ಯಾರೂ ಕೆಲಸ ಮಾಡದೇ ಇರುವ ಬಗ್ಗೆ ಸಭೆಯಲ್ಲಿ ಚರ್ಚೆ ಆಯಿತು. ತಪ್ಪಿತಸ್ಥ ಅಧಿಕಾರಿಗಳಿಗೆ ಶಿಕ್ಷೆಯೂ ಆಗಬೇಕು ಎಂಬ ಅಭಿಪ್ರಾಯ ವ್ಯಕ್ತವಾಯಿತು' ಎಂದು ಕೃಷ್ಣಬೈರೇಗೌಡ ಹೇಳಿದರು.

ಬಿಎಂಟಿಸಿ ಉಪಾಧ್ಯಕ್ಷರಾಗಿ ನವೀನ್ ಕಿರಣ್ ನೇಮಕ

ಬೆಂಗಳೂರು: ಬಿಎಂಟಿಸಿ (ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ) ಉಪಾಧ್ಯಕ್ಷರನ್ನಾಗಿ ಚಿಕ್ಕಬಳ್ಳಾಪುರದ ನವೀನ್ ಕಿರಣ್ ಅವರನ್ನು ನೇಮಿಸಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲ್ಲೂಕಿನ ತಿಮ್ಮಪ್ಪ ಶೆಟ್ಟಿ ಅವರನ್ನು ನೇಮಿಸಲಾಗಿದೆ. ಪ್ರಾಧಿಕಾರದ ಅಧ್ಯಕ್ಷರಾಗಿರುವ ಮಟ್ಟಾರು ರತ್ನಾಕರ ಹೆಗ್ಡೆ ಅವರ ನಾಮ ನಿರ್ದೇಶನವನ್ನು ರದ್ದುಪಡಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ತಿಮ್ಮಪ್ಪ ಶೆಟ್ಟಿ ಅವರು ನೇಮಿಸಲಾಗಿದೆ.

'ನಮ್ಮ ಮೆಟ್ರೊ'ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯುತ್ತಮ ಪ್ರಯಾಣಿಕ ಸೇವೆಗಾಗಿ 'ನಮ್ಮ ಮೆಟ್ರೊ'ಗೆ ರಾಷ್ಟ್ರೀಯ ಶ್ರೇಷ್ಠತಾ ಪ್ರಶಸ್ತಿ ಲಭಿಸಿದೆ.

ಕೇರಳದ ಕೊಚ್ಚಿಯಲ್ಲಿ ನಡೆದ 15ನೇ ಅರ್ಬನ್ ಮೊಬಿಲಿಟಿ ಇಂಡಿಯಾ ಕಾನ್ಫರೆನ್ಸ್‌ನಲ್ಲಿ ಕೇರಳದ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಅಡಿಕೆಗೆ ಎಲೆಚುಕ್ಕಿ ರೋಗ: ಹತೋಟಿಗೆ ₹ 10 ಕೋಟಿ– ಸಿಎಂ

ಕುಂದಾಪುರ (ಉಡುಪಿ): ಅಡಿಕೆ ಮರಗಳಿಗೆ ಬಾಧಿಸುತ್ತಿರುವ ಎಲೆಚುಕ್ಕಿ ರೋಗದ ಹತೋಟಿಗಾಗಿ ತುರ್ತು ₹ 10 ಕೋಟಿ ಒದಗಿಸಲಾಗುವುದು. ತಜ್ಞರ ವರದಿ ಪಡೆದು ಕೇಂದ್ರ ಸರ್ಕಾರದೊಂದಿಗೆ ಸಮನ್ವಯ ಸಾಧಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕ್ಷೇಮ ಕುಶಲ



ಅಧಿಕ ರಕ್ತದೊತ್ತಡಕ್ಕೆ ವ್ಯಾಯಾಮವೂ ಚಿಕಿತ್ಸೆ


ಸಹಜ ಮಟ್ಟದ ರಕ್ತದೊತ್ತಡ ಎಲ್ಲರಲ್ಲೂ ಇರುತ್ತದೆ. ಆದರೆ, ರಕ್ತದೊತ್ತಡ ಹೆಚ್ಚಲು ಅನೇಕ ಕಾರಣಗಳಿವೆ.

ಡಾ. ಕಿರಣ್ ವಿ. ಎಸ್.

ಅಧಿಕ ರಕ್ತದೊತ್ತಡ ಜಗದ್ವ್ಯಾಪಿ ಸಮಸ್ಯೆ. ಕೆಲವು ದಶಕಗಳ ಹಿಂದೆ ಬಹುತೇಕ ಹಿರಿಯ ನಾಗರಿಕರಲ್ಲಿ ಮಾತ್ರ ಕಾಣುತ್ತಿದ್ದ ಅಧಿಕ ರಕ್ತದೊತ್ತಡದ ಸಮಸ್ಯೆ ಈಗ ಮೂವತ್ತರ ಹರೆಯದವರನ್ನೂ ಕಾಡುತ್ತಿದೆ. ಜೀವನಶೈಲಿಯ ಬದಲಾವಣೆಗಳು, ಅನಿಯಂತ್ರಿತ ಆಹಾರಪದ್ಧತಿ, ಬೊಜ್ಜು, ವೃತ್ತಿಯ ಅಭದ್ರತೆ, ಮಾನಸಿಕ ಜಂಜಾಟಗಳು, ಹದಗೆಡುತ್ತಿರುವ ಕೌಟುಂಬಿಕ ಸಂಬಂಧಗಳು ಮೊದಲಾದ ಸಂಗತಿಗಳು ಅನೇಕ ಆರೋಗ್ಯಸಮಸ್ಯೆಗಳನ್ನು ಸೃಷ್ಟಿಸಿವೆ. ಅದರಲ್ಲಿ ಅಧಿಕ ರಕ್ತದೊತ್ತಡವೂ ಒಂದು.

ಅಧಿಕ ರಕ್ತದೊತ್ತಡ ಎಂದರೇನು?

ಇಡೀ ಶರೀರದ ಅಂಗಗಳಿಗೆ ರಕ್ತವನ್ನು ತಲುಪಿಸುವುದು ಹೃದಯದ ಹೊಣೆ. ರಕ್ತದ ಸರಬರಾಜು ಸರಾಗವಾಗಿ ಆಗಬೇಕೆಂದರೆ ಅದನ್ನು ಒಂದು ನಿರ್ದಿಷ್ಟ ಒತ್ತಡದಲ್ಲಿ ಹೃದಯ ಪಂಪ್ ಮಾಡಬೇಕು. ಹೀಗಾಗಿ, ಸಹಜ ಮಟ್ಟದ ರಕ್ತದೊತ್ತಡ ಎಲ್ಲರಲ್ಲೂ ಇರುತ್ತದೆ. ಈ ರಕ್ತದೊತ್ತಡ ಹೆಚ್ಚಲು ಅನೇಕ ಕಾರಣಗಳಿವೆ: ರಕ್ತನಾಳಗಳು ಪೆಡಸುಗಟ್ಟುವಿಕೆ, ಯಾವುದೋ ಒಂದು ಅಂಗದ ರಕ್ತನಾಳಗಳು ಕಿರಿದಾಗಿ, ಅದಕ್ಕೆ ಸಾಕಷ್ಟು ಪ್ರಮಾಣದ ರಕ್ತ ಹರಿಯಲು ಆಗುವ ಅಡ್ಡಿ, ಶರೀರದ ಚೋದಕಗಳಲ್ಲಿನ ವ್ಯತ್ಯಾಸ ಮೊದಲಾದುವು. ಯಾವುದೇ ಕಾರಣದಿಂದ ಒಂದು ಅಂಗಕ್ಕೆ ರಕ್ತದ ಸರಬರಾಜು ಕಡಿಮೆಯಾದರೆ ಆ ಅಂಗ ಮೆದುಳಿಗೆ ಸೂಚನೆ ಕಳಿಸುತ್ತದೆ. ಕೂಡಲೇ ಮೆದುಳು ಹೃದಯಕ್ಕೆ ಸಂಕೇತಗಳನ್ನು ಕಳಿಸಿ, ಹೆಚ್ಚು ರಕ್ತವನ್ನು ಒತ್ತುವಂತೆ ತಿಳಿಸುತ್ತದೆ. ಆಗ ಹೃದಯದ ಸ್ನಾಯುಗಳು ಹೆಚ್ಚು ಕೆಲಸ ಮಾಡಿ ಅಧಿಕ ಒತ್ತಡವನ್ನು ನಿರ್ಮಿಸುತ್ತವೆ. ಈ ಒತ್ತಡ ಇತರ ರಕ್ತನಾಳಗಳಿಗೂ ಹರಿಯುತ್ತದೆ. ಈ ಮೂಲಕ ಇತರ ಅಂಗಗಳು ಅಗತ್ಯಕ್ಕಿಂತ ಹೆಚ್ಚು ರಕ್ತವನ್ನು ಅಧಿಕ ಒತ್ತಡದಲ್ಲಿ ಪಡೆಯುತ್ತವೆ. ಅವುಗಳ ಕೆಲಸದಲ್ಲೂ ವ್ಯತ್ಯಾಸ ಬರುತ್ತದೆ. ಅಧಿಕ ರಕ್ತದೊತ್ತಡ ತಂತಾನೇ ಒಂದು ಕಾಯಿಲೆಯಲ್ಲ; ಬದಲಿಗೆ ಶರೀರದಲ್ಲಿ ಆಗುತ್ತಿರುವ ವ್ಯತ್ಯಾಸಗಳ ಸೂಚಕ.



ವ್ಯಾಯಾಮದ ಮಹತ್ವ

ಮೂಳೆಗಳ, ಕೀಲುಗಳ, ಸ್ನಾಯುಗಳ ಸರಾಗಚಲನೆಗೆ ವ್ಯಾಯಾಮ ಸಹಕಾರಿ. ನಿಯಮಿತ ವ್ಯಾಯಾಮದಿಂದ ಶರೀರದ ಮಾಂಸಖಂಡಗಳ ಬಿಗುವು ಸಡಿಲಗೊಳ್ಳುತ್ತದೆ; ರಕ್ತನಾಳಗಳ ಮೇಲಿನ ಒತ್ತಡ ಕಳೆದು ರಕ್ತಸಂಚಾರ ಸರಾಗವಾಗುತ್ತದೆ; ಹೃದಯದ ಸ್ನಾಯುಗಳು ಶಕ್ತಿಯುತವಾಗಿ, ಹೆಚ್ಚಿನ ಕಾರ್ಯಕ್ಷಮತೆ ಲಭಿಸುತ್ತದೆ; ರಕ್ತವನ್ನು ಒತ್ತುವ ಸಾಮರ್ಥ್ಯ ವೃದ್ಧಿಸುತ್ತದೆ. ವ್ಯಾಯಾಮ ಎರಡು ಬದಿಗಳಿಂದಲೂ ಆರೋಗ್ಯಕಾರಿ. ರಕ್ತದೊತ್ತಡ ಸಹಜ ಸ್ಥಿತಿಯಲ್ಲಿದ್ದರೆ ನಿಯಮಿತ ವ್ಯಾಯಾಮ ಅದನ್ನು ಹಾಗೆಯೇ ಉಳಿಸಿ, ಅಧಿಕವಾಗದಂತೆ ಸಹಕರಿಸುತ್ತದೆ. ಅಧಿಕ ರಕ್ತದೊತ್ತಡದ ಸಮಸ್ಯೆ ಇರುವವರು ನಿಯಮಿತ ವ್ಯಾಯಾಮದಿಂದ ಅದನ್ನು ನಿಯಂತ್ರಣದಲ್ಲಿ ಇಡಬಹುದು. ಇದರಿಂದ ಔಷಧಗಳ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆ.

ದೇಹತೂಕದ ನಿರ್ವಹಣೆಯಲ್ಲಿ ವ್ಯಾಯಾಮದ ಪಾತ್ರ ಮಹತ್ವದ್ದು. ಬೊಜ್ಜಿಗೂ ಅಧಿಕ ರಕ್ತದೊತ್ತಡಕ್ಕೂ ನೇರ ಸಂಬಂಧವಿದೆ. ನಿಯಮಿತ ವ್ಯಾಯಾಮದಿಂದ ಶರೀರದ ತೂಕ ಕಡಿಮೆಯಾಗುತ್ತದೆ. ಅಧಿಕ ರಕ್ತದೊತ್ತಡದ ನಿರ್ವಹಣೆಯಲ್ಲಿ ಬೊಜ್ಜನ್ನು ನಿಯಂತ್ರಿಸುವ ಪಾತ್ರ ಹಿರಿದು. ಇಂತಹವರಲ್ಲಿ ದೇಹದ ತೂಕ ಸುಮಾರು ಐದು ಪ್ರತಿಶತ ಕಡಿಮೆಯಾದರೂ ಹೃದಯದ ಕಾರ್ಯಕ್ಷಮತೆ ಸುಮಾರು ಪ್ರತಿಶತ ಹತ್ತರವರೆಗೆ ಸುಧಾರಿಸಬಲ್ಲದು. ಅಧಿಕ ರಕ್ತದೊತ್ತಡಕ್ಕೆ ಕಾರಣವಾಗುವ ಮಧುಮೇಹ, ನಿದ್ರಾಹೀನತೆ, ಖಿನ್ನತೆ, ಮುಂತಾದ ಕೆಲವು ಪ್ರತ್ಯಕ್ಷ ಮತ್ತು ಪರೋಕ್ಷ ಕಾರಣಗಳನ್ನು ವ್ಯಾಯಾಮ ನಿಯಂತ್ರಿಸಬಲ್ಲದು.

ಎಂತಹ ವ್ಯಾಯಾಮಗಳು ಸಹಕಾರಿ?

ಶರೀರಕ್ಕೆ ಆಕ್ಸಿಜನ್ ಪೂರೈಕೆಯನ್ನು ಹೆಚ್ಚಿಸುವ ವ್ಯಾಯಾಮಗಳನ್ನು ಮಾಡುವುದು ಸೂಕ್ತ. ಆರಂಭದಲ್ಲಿ ನಿಧಾನಗತಿಯಿಂದಲೇ ವ್ಯಾಯಾಮ ಸಾಗಬೇಕು. ಕಾಲಕ್ರಮೇಣ ನಮ್ಮ ಶರೀರಕ್ಕೆ ಒಗ್ಗುವಂತಹ ಸುರಕ್ಷಿತ ಗತಿಯಲ್ಲಿ ಪ್ರಯತ್ನವನ್ನು ಏರಿಸುತ್ತಾ ಹೋಗಬಹುದು. ಆರೋಗ್ಯವರ್ಧನೆಗಾಗಿ ಮಾಡುವ ವ್ಯಾಯಾಮದ ಪ್ರಕ್ರಿಯೆಯಲ್ಲಿ ಮುಖ್ಯವಾದದ್ದು ಎಷ್ಟು ನಿಯಮಿತವಾಗಿ, ರೂಢಿ ತಪ್ಪದಂತೆ, ನಿಧಾನವಾಗಿ ಪ್ರಮಾಣವನ್ನು ವೃದ್ಧಿಸುತ್ತಾ ಮಾಡುತ್ತೇವೆ ಎಂಬುದು. ಸರಳವಾದ ದೀರ್ಘ ಶ್ವಾಸದೊಡನೆ ಮಾಡುವ ಚುರುಕು ನಡಿಗೆ; ನುರಿತ ಯೋಗಪಟುಗಳಿಂದ ವೈಯಕ್ತಿಕವಾಗಿ ಕಲಿತ ನಂತರ ಮಾಡುವ ಯೋಗ ಮತ್ತು ಪ್ರಾಣಾಯಾಮ; ಆರಾಮದಾಯಕ ಈಜು; ಸರಾಗವಾದ ಬೈಸಿಕಲ್ ಸವಾರಿ; ಶ್ಲೋಕೋಚ್ಚಾರದ ಅವಧಿಗೆ ಅನುಸಾರವಾಗಿ ಮಾಡುವ ಸೂರ್ಯನಮಸ್ಕಾರ; ಗುರುಗಳಿಂದ ಸಾಕಷ್ಟು ಅವಧಿಗೆ ಕಲಿತ ನಂತರ ಮಾಡುವ ಶಾಸ್ತ್ರೀಯ ನೃತ್ಯದ ಅಭ್ಯಾಸ, ಸಪ್ರಮಾಣವಾಗಿ ಮಾಡುವ ತೋಟದ ಕೆಲಸ – ಇಂತಹ ಯಾವುದಾದರೂ ಆಗಬಹುದು. ಅಭ್ಯಾಸವಿರುವ ವಿವಿಧ ಬಗೆಯ ವ್ಯಾಯಾಮ ಶೈಲಿಗಳನ್ನು ಆಗಾಗ್ಗೆ ಬದಲಿಸುತ್ತಾ ವೈವಿಧ್ಯಗಳನ್ನು ರೂಢಿಸಿಕೊಳ್ಳಬಹುದು. ವ್ಯಾಯಾಮದ ಮುನ್ನ ಸ್ನಾಯುಗಳನ್ನು ಕ್ರಮವಾಗಿ ಹಿಗ್ಗಿಸುವ ಚರ್ಯೆಗಳು; ವ್ಯಾಯಾಮದ ನಂತರ ಶರೀರಕ್ಕೆ ಒಂದು ಕ್ರಮದಲ್ಲಿ ನೀಡಬೇಕಾದ ವಿಶ್ರಾಂತಿ ಬಹಳ ಮುಖ್ಯ. ಯಾವುದೇ ವ್ಯಾಯಾಮವನ್ನೂ ಏಕಾಏಕಿ ಮಾಡಲೂಬಾರದು; ನಿಲ್ಲಿಸಲೂಬಾರದು. ಆಗ ಮಾತ್ರ ಅದು ಆರೋಗ್ಯಕ್ಕೆ ಪೂರಕವಾಗುತ್ತದೆ. ಇಲ್ಲವಾದರೆ ವ್ಯಾಯಾಮವೇ ಸಮಸ್ಯೆಯಾದೀತು.

ವ್ಯಾಯಾಮದ ವೇಳೆ ಶರೀರಕ್ಕೆ ಹೆಚ್ಚಿನ ಆಕ್ಸಿಜನ್ ಅಗತ್ಯವಿದೆ. ಆದ್ದರಿಂದ ಉಸಿರುಗಟ್ಟಿ ಮಾಡುವ ಯಾವುದೇ ವ್ಯಾಯಾಮವೂ ಶರೀರಕ್ಕೆ ಸೂಕ್ತವಲ್ಲ. ವ್ಯಾಯಾಮದ ಜೊತೆಗೆ ಸರಿಯಾದ ರೀತಿಯಲ್ಲಿ ಉಸಿರಾಡುವುದು ಕೂಡ ಒಳ್ಳೆಯ ವ್ಯಾಯಾಮದ ಭಾಗವೇ ಆಗಿರುತ್ತದೆ. ಈ ಕಲೆಗಾರಿಕೆಯನ್ನು ಪ್ರತಿಯೊಂದು ವ್ಯಾಯಾಮದ ಜೊತೆಗೂ ಪ್ರಜ್ಞಾಪೂರ್ವಕವಾಗಿ ರೂಢಿಸಿಕೊಳ್ಳಬೇಕು. ಉದಾಹರಣೆಗೆ, ಯೋಗಾಭ್ಯಾಸ ಮಾಡುವಾಗ ನುರಿತ ತರಬೇತುದಾರರು ಯಾವ ಹಂತದಲ್ಲಿ ಉಸಿರು ಸೆಳೆದುಕೊಳ್ಳಬೇಕು, ಯಾವಾಗ ನಿಃಶ್ವಾಸ ಮಾಡಬೇಕು ಎಂಬುದನ್ನೂ ಹೇಳಿಕೊಡುತ್ತಾರೆ. ಇದನ್ನು ಸರಿಯಾಗಿ ಕಲಿಯುವುದೂ ಯೋಗಾಸನ ಮಾಡುವವರಿಗೆ ಬಹಳ ಮುಖ್ಯ. ಅಂತೆಯೇ, ವೇಗವಾದ ನಡಿಗೆಯ ವೇಳೆ ಮಾತನಾಡಬಾರದು; ಬದಲಿಗೆ ಉಸಿರನ್ನು ಸಾಧ್ಯವಾದಷ್ಟೂ ಬಿಟ್ಟು, ಅಷ್ಟೇ ದೀರ್ಘವಾಗಿ ಸೆಳೆದುಕೊಳ್ಳುವ ವಿಧಾನವನ್ನು ರೂಢಿಸಿಕೊಳ್ಳಬೇಕು. ಅಧಿಕ ರಕ್ತದೊತ್ತಡದ ನಿರ್ವಹಣೆಯಲ್ಲಿ ಇದು ಫಲಕಾರಿ.

ಯಾವ ರೀತಿಯ ವ್ಯಾಯಾಮಗಳನ್ನು ಮಾಡಬಾರದು?

ಕೆಲವು ತೀವ್ರಗತಿಯ ವ್ಯಾಯಾಮಗಳು ದೇಹದ ಆಕ್ಸಿಜನ್ ಅಗತ್ಯವನ್ನು, ರಕ್ತದೊತ್ತಡವನ್ನು ಏಕಾಏಕಿ ಹೆಚ್ಚಿಸುತ್ತವೆ. ಉದಾಹರಣೆಗೆ, ಅಧಿಕ ತೂಕಗಳನ್ನು ಎತ್ತುವ ವ್ಯಾಯಾಮ, ವೇಗವಾದ ಓಟ, ಸ್ಕ್ವಾಶ್‌ನಂತಹ ಹೆಚ್ಚಿನ ಬಲ ಮತ್ತು ವೇಗವನ್ನು ಬೇಡುವ ಕ್ರೀಡೆಗಳು, ಒಂದೇ ಸಮನೆ ದೋಣಿ ಹುಟ್ಟು ಹಾಕುವ ಕಯಾಕ್‌ನಂತಹ ಚಟುವಟಿಕೆಗಳು, ನೀರಿನಾಳಕ್ಕೆ ಜಿಗಿಯುವ ಕ್ರಿಯೆ, ಜಿಮ್‌ಗಳಲ್ಲಿ ಮಾಡುವ ತೀವ್ರ ದೇಹದಣಿವು ಮೊದಲಾದವು ನಾವು ಸೆಳೆದುಕೊಳ್ಳಲು ಸಾಧ್ಯವಾಗುವುದಕ್ಕಿಂತಲೂ ಹೆಚ್ಚಿನ ಆಕ್ಸಿಜನ್ ಬೇಡುತ್ತವೆ. ಇವು ಚೆನ್ನಾಗಿ ತರಬೇತಾದ ಕ್ರೀಡಾಪಟುಗಳು, ಕಸರತ್ತು ಮಾಡುವವರು ಮಾಡುವಂತಹ ವ್ಯಾಯಾಮಗಳು. ಆರೋಗ್ಯ ಕಾಪಾಡಿಕೊಳ್ಳುವ ದೃಷ್ಟಿಯಿಂದ ವ್ಯಾಯಾಮ ಮಾಡವವರು ಇಂತಹ ತೀವ್ರಗತಿಯ ಶರೀರದಂಡನೆ ಮಾಡಬಾರದು.

ಮುಖ್ಯವಾದ ಎಚ್ಚರಿಕೆ

ವ್ಯಾಯಾಮ ಆರಂಭಿಸಿದೆವು ಎನ್ನುವ ಒಂದೇ ಹಿನ್ನೆಲೆಯಲ್ಲಿ ಅಧಿಕ ರಕ್ತದೊತ್ತಡಕ್ಕೆ ಸೇವಿಸುತ್ತಿರುವ ಔಷಧಗಳನ್ನು ಯಾವುದೇ ಕಾರಣಕ್ಕೂ ನಿಲ್ಲಿಸಬಾರದು. ಅಧಿಕ ರಕ್ತದೊತ್ತಡ ಕಾಡಿದಾಗ ವ್ಯಾಯಾಮ ಆರಂಭಿಸುವವರು ಅಥವಾ ಈಗಾಗಲೇ ವ್ಯಾಯಾಮ ಮಾಡುತ್ತಿರುವವರು ತಮ್ಮ ವ್ಯಾಯಾಮ ವಿಧಾನಗಳ ಬಗ್ಗೆ ವೈದ್ಯರಲ್ಲಿ ಚರ್ಚೆ ಮಾಡಿ ಮುಂದುವರೆಯಬೇಕು. ದೀರ್ಘಕಾಲಿಕ ನಿಯಮಿತ ವ್ಯಾಯಾಮದಿಂದ ಔಷಧಗಳ ಮೇಲಿನ ಅವಲಂಬನೆ ಕಡಿಮೆಯಾಗಬಹುದು. ಆದರೆ, ಔಷಧದ ಪ್ರಮಾಣವನ್ನು ವೈದ್ಯರ ಸಲಹೆಯಿಲ್ಲದೇ ತಗ್ಗಿಸಬಾರದು. ನಿಯಮಿತ ವ್ಯಾಯಾಮವೆಂಬುದು ಆಯ್ಕೆಯಲ್ಲ; ಶರೀರದ ನಿರ್ವಹಣೆಯ ಕಡ್ಡಾಯ ಅಂಶ. 'ಎಂತಹ ವ್ಯಾಯಾಮ ಮಾಡಬೇಕು' ಎಂಬುದು ಮಾತ್ರ ವೈಯಕ್ತಿಕ ಆಯ್ಕೆ. ಇದನ್ನು ವೈಜ್ಞಾನಿಕವಾಗಿ ಅನುಸರಿಸಿದರೆ ಅಧಿಕ ರಕ್ತದೊತ್ತಡದ ನಿರ್ವಹಣೆಯಲ್ಲಿ, ಅಧಿಕ ರಕ್ತದೊತ್ತಡದ ಕಾರಣವಾಗಿ ಸಂಭವಿಸಬಹುದಾದ ಸಮಸ್ಯೆಗಳನ್ನು ತಡೆಗಟ್ಟುವಲ್ಲಿ ಬಹಳ ಸಹಕಾರಿಯಾಗುತ್ತದೆ. ಆರೋಗ್ಯವೆಂಬುದು ಚಟುವಟಿಕೆಯ ದೇಹದಲ್ಲಿರುತ್ತದೆ; ಅನಗತ್ಯ ಆರಾಮದಲ್ಲಿ ಇರುವುದಿಲ್ಲ. ನಿಯಮಿತ ವ್ಯಾಯಾಮ ಹೃದಯಕ್ಕೆ ನೀಡಬಹುದಾದ ಮಹತ್ವದ ಕೊಡುಗೆಗಳಲ್ಲಿ ಒಂದು.

ನಾಳೆಯ ಆತಂಕ ಬೇಡ




ರಘು ವಿ.

ಹಿಂದೊಮ್ಮೆ ಕೂಗುಮಾರಿಯ ಕಥೆ ಹುಟ್ಟಿ ಅನಕ್ಷರಸ್ಥರಿಂದ ಮೊದಲ್ಗೊಂಡು ಅತಿ ವಿದ್ಯಾವಂತರೂ ತಮ್ಮತಮ್ಮ ಮನೆಬಾಗಿಲುಗಳ ಮೇಲೆ 'ನಾಳೆ ಬಾ' ಎಂದು ಬರೆದುಕೊಂಡ ಪ್ರಸಂಗ ನೆನಪಿದೆಯಲ್ಲವೆ?

ನನಗೇಕೋ 'ಈಗಲೇ ಬಾ' ಎಂದು ಬರೆಯಬೇಕೆನಿಸಿತ್ತು. ವಠಾರದ ಮನೆಯಾದ್ದರಿಂದ ಉಳಿದವರ ನೆಮ್ಮದಿಗೆ ಭಂಗವಾದೀತೆಂದು ಏನೂ ಬರೆಯದೆ ಸುಮ್ಮನಾದೆ. ಇಲ್ಲಿ ಎದ್ದುಕಾಣುವ ಅಂಶ: ಕಾಣದ್ದನ್ನು ಊಹಿಸಿಕೊಂಡು ಭಯಪಡುವ ಅವಸ್ಥೆ. ಹುಟ್ಟಾಗಲೀ ಬದುಕಾಗಲೀ ಸಾವಾಗಲೀ ಸಾಕ್ಷಿಯಾಗಿ ಕುಳಿತಾಗಲೇ ಅರಿವಿನ ವಿಸ್ತಾರವಾಗುವುದು. ನನ್ನ ಮಿತ್ರರೊಬ್ಬರು, ಪ್ರಸೂತಿತಜ್ಞರೂ ಹೌದು. ಅವರೆನ್ನುತ್ತಾರೆ: 'ಭಾರತದಲ್ಲಿ ಜನಸಂಖ್ಯೆ ಕಡಿಮೆಯಾಗಬೇಕಾದರೆ ಪ್ರಸವಸಮಯದಲ್ಲಿ ಪತಿಯನ್ನು ಪ್ರಸೂತಿಕೋಣೆಯಲ್ಲಿ ಹಾಜರಿರುವಂತೆ ಮಾಡಬೇಕು.' ಹಾಗೇ ಮತ್ತೊಬ್ಬ ಪಶುವೈದ್ಯರು ಹೇಳುತ್ತಾರೆ: 'ಅನೇಕ ವರ್ಷ ಪ್ರೀತಿಯಿಂದ ಸಾಕಿದ ತಮ್ಮ ಸಾಕುಪ್ರಾಣಿಯ ಕೊನೆಯ ಕ್ಷಣಗಳಲ್ಲಿ ಅದರ ಮಾಲೀಕರು ಉಪಸ್ಥಿತರಿರಲು ಸಿದ್ಧರಿರುವುದಿಲ್ಲ. ಪಾಪ ಅದು ಅವರಿಗಾಗಿ ಕಣ್ಣಾಡಿಸುತ್ತ ಹತಾಶೆಯಿಂದ ಕೊನೆಯುಸಿರೆಳೆಯುತ್ತದೆ.' ಜೀವನದಿಂದ ಹಿಂದೆ ಸರಿಯುವ ಅಥವಾ ಅದರ ಅನುಭವದ ವಿಸ್ತಾರವನ್ನು ನಿರಾಕರಿಸುವ ಪ್ರಯತ್ನಗಳು ಇವು. ನಮ್ಮ ಜೀವನಕ್ರಮದಲ್ಲಿ ಮರೆಯಲಾಗದ ಅಂಶ ಮತ್ತು ಪಾತ್ರ ಕಾಲದ್ದು. ನಾವೆಲ್ಲ ಕಾಲವಶರು. ಹಿಂದಿನದರ ಮುಂದುವರಿಕೆ ಇಂದು, ಇಂದಿನ ಮುಂದುವರಿಕೆ ನಾಳೆಯು. ಈ ಚಕ್ರದಲ್ಲಿ ದುರದೃಷ್ಟವಶಾತ್ ಮಹತ್ವವಾದ ಇಂದನ್ನು ಕಡೆಗಣಿಸಿ ಹಿಂದುಮುಂದಿನದರಲ್ಲಿ ಸಿಲುಕಿ ಒದ್ದಾಡುತ್ತೇವೆ. ಬದುಕು ಕ್ಷಣಿಕವಲ್ಲ. ಬದುಕು ಆ ಕ್ಷಣದಲ್ಲಿದೆ. ಬದುಕಿನ ನಿಜವಾದ ಲಕ್ಷಣ ಈ ಕ್ಷಣ.

ಭವಿಷ್ಯದ ಭಯದ ಕಾರಣದಿಂದಾಗಿಯೇ ಮನುಷ್ಯ ಲೋಭಿಯಾಗುವುದು. ಲೋಭವೆಂದರೆ ಕೂಡಿಡುವ ಬುದ್ಧಿ. ನಾಳೆ ದೊರೆಯದಿದ್ದರೆ ನನಗೇನು ಗತಿ ಎಂಬ ಭಯವೇ ಲೋಭ. ಇದು ಬಡವ ಬಲ್ಲಿದರೆಂಬ ಭೇದವಿಲ್ಲದೆ ಎಲ್ಲರನ್ನೂ ಕಾಡುವಂತಹದ್ದು. ಸತ್ತ ಭಿಕ್ಷುಕನ ಜಂತೆ ಕೊಡವಿದಾಗ ಕಂತೆ ಕಂತೆ ಹಣ ದೊರೆತ ಪ್ರಸಂಗಗಳು ವರದಿಯಾಗಿವೆ. ಲೋಭವೇ ಇತರ ಕಾಮನೆಗಳಿಗೆ ಬೀಜ. ಇತಿಮಿತಿಯ ಬದುಕು ಕಟ್ಟಿಕೊಳ್ಳದೆ ಭವಿಷ್ಯದ ಸಂಕಟದಲ್ಲಿ ಬಾಳ್ವೆ ನಡೆಸುವುದು ಸರಿಯಲ್ಲ ಎಂದು ಧರ್ಮಗಳು ಸಾರುತ್ತವೆ. '... ಆದುದರಿಂದ ನಾನು ಹೇಳುತ್ತೇನೆ, ನಿಮ್ಮ ಬದುಕಿನ ಬಗ್ಗೆ ಆತಂಕಿತರಾಗದಿರಿ. ನಮಗೆ ತಿನ್ನಲು, ಕುಡಿಯಲು ದೊರೆಯುತ್ತದೋ ಇಲ್ಲವೋ ಎಂದು ಚಿಂತಿಸದಿರಿ, ನಿಮ್ಮ ದೇಹದ ಬಗೆಗೂ, ಅದಕ್ಕೆ ಬೇಕಾದ ದಿರಿಸನ್ನು ಹೊಂದಿಸುವ ಬಗೆಗೂ ಚಿಂತಿಸದಿರಿ. ಗಾಳಿಯಲ್ಲಿ ಹಾರಾಡುವ ಹಕ್ಕಿಗಳನ್ನು ನೋಡಿ. ಅವು ಬಿತ್ತಿ ಬೆಳೆಯುವುದಿಲ್ಲ, ಕಣಜಗಳಲ್ಲಿ ಕೂಡಿಡುವುದೂ ಇಲ್ಲ. ಆದರೆ ಅವುಗಳಿಗೆ ಸ್ವರ್ಗದಲ್ಲಿರುವ ತಂದೆಯು ಆಹಾರ ನೀಡುವುದಿಲ್ಲವೆ? ನೀವು ಅವುಗಳಿಗಿಂತ ಹೆಚ್ಚಿನವರಲ್ಲವೆ?' ಎನ್ನುತ್ತದೆ, ಬೈಬಲ್(ಮ್ಯಾಥ್ಯೂ: 6:25-6).



ಭಗವದ್ಗೀತೆಯ ಎರಡನೆಯ ಅಧ್ಯಾಯದ ಕೊನೆಯ ಶ್ಲೋಕವನ್ನು ಗಮನಿಸಿ: 'ವಿಹಾಯ ಕಾಮಾನ್ ಯಃ ಸರ್ವಾನ್ ಪುಮಾಂಶ್ಚರತಿ ನಿಸ್ಪ್ರಹಃ, ನಿರ್ಮಮೋ ನಿರಹಂಕಾರಃ ಸ ಶಾಂತಿಮಧಿಗಚ್ಛತಿ' – ಅಂದರೆ ಬದುಕುವ ರೀತಿಯಲ್ಲಿ, ಅಂದರೆ ಶೈಲಿಯಲ್ಲಿ ಬದಲಾವಣೆಯನ್ನು ಇದು ಬಯಸುತ್ತದೆ. ಜೀವನದ ವ್ಯಾಪಾರಗಳಲ್ಲಿ ನಮ್ಮ ಮನೋಧರ್ಮ ಹೇಗಿರಬೇಕು ಎಂಬುದನ್ನು ಅದು ಸೂಚಿಸುತ್ತದೆ. ಭೋಗದ ಬಯಕೆಯನ್ನು ಬದಿಗಿಟ್ಟು ಒದಗಿದುದನು ಸಂತೋಷದಿಂದ ಅನುಭವಿಸಬೇಕು. ಸೀಮಿತವಾದ ಇಂದ್ರಿಯ ವ್ಯಾಪಾರಗಳನ್ನು ನಡೆಸಿದಾಗ ಶಾಂತಿ ದೊರೆಯುವುದು ಎಂಬುದು ಇದರ ಸಾರಾಂಶ.

'ಕಗ್ಗ'ವಂತೂ ಇದನ್ನು ಎಷ್ಟು ಸೊಗಸಾಗಿ ಹೇಳುತ್ತದೆ ನೋಡಿ: 'ಮುಂದೇನೋ ಮತ್ತೇನೋ ಇಂದಿಗಾ ಮಾತೇಕೆ? ಸಂದರ್ಭ ಬರಲಿ, ಬಂದಾಗಳಾ ಚಿಂತೆ, ಹೊಂದಿಸುವನಾರೊ ನಿನ್ನಾಳಲ್ಲ ಬೇರಿಹನು, ಇಂದಿಗಿಂದಿನ ಬದುಕು – ಮಂಕುತಿಮ್ಮ.' ಭವಿಷ್ಯವು ನಮ್ಮ ಅಡಿಯಾಳಲ್ಲ, ಮುಂದೇನೋ ಮತ್ತೇನೋ ಎಂಬ ಚಿಂತೆ ಈಗ ಬೇಡ. ಸಂದರ್ಭ ಬಂದಾಗ ನೋಡಿದರಾಯಿತು. ಅದನ್ನು ಹೊಂದಿಸುವನು ಬೇರೆಯವನು. ಆದುದರಿಂದ ಇಂದಿನ ಬದುಕನ್ನಷ್ಟೇ ನೋಡು ಎನ್ನುತ್ತದೆ ಕಗ್ಗ. ಭವಿಷ್ಯದ ಬಗೆಗಿನ ಆಲೋಚನೆಯೇ ತಪ್ಪಲ್ಲ; ಆದರೆ ಅದರ ಬಗ್ಗೆ ಆತಂಕಿತರಾಗುವುದು ಒಳಿತಲ್ಲ. ಏಕೆಂದರೆ ಅದು ನಮ್ಮ ವರ್ತಮಾನವನ್ನು ಕಸಿದುಕೊಂಡುಬಿಡುತ್ತದೆ. ಗಿಬ್ರಾನ್ ಎನ್ನುತ್ತಾನೆ: 'ನಮ್ಮ ಆತಂಕಗಳು ಭವಿಷ್ಯದ ಬಗೆಗಿನ ಆಲೋಚನೆಗಳಿಂದ ಬರುವುದಿಲ್ಲ, ಆದರೆ ಅದನ್ನು ನಿಯಂತ್ರಿಸುವ ಅಪೇಕ್ಷೆಯಿಂದ ಬರುತ್ತದೆ.'

ಆತಂಕ, ಭವಿಷ್ಯದ ಬಗೆಗಿನ ಕಕ್ಕುಲಾತಿ ಬೇಡವೆಂದರೂ ಜೀವನ ಯೋಜಿತವಾಗಿ ನಡೆಯಬೇಕಾದ ಕಾರಣದಿಂದ ಭವಿಷ್ಯದ ಬಗೆಗಿನ ಆತಂಕ ಕಾಡದೆ ಇರದು. ಇಂತಹ ಸಂದರ್ಭ ಒದಗಿದಾಗ ಅಥವಾ ಇದು ಅತಿಯಾಗಿ ಕಾಡಿದಾಗ ಹೇಗೆ ಎದುರಿಸಬೇಕು ಎಂದೂ ಆಲೋಚಿಸೋಣ. ಮೊದಲನೆಯದಾಗಿ ಕೊಂಚ ಆತಂಕ ಅಥವಾ ಬದುಕಿನ ಬಗ್ಗೆ ಸ್ವಲ್ಪ ಒತ್ತಡ ಇರಬೇಕು. ಇಲ್ಲದಿದ್ದರೆ ಜೀವನದ ಚಟುವಟಿಕೆಗಳು ರಭಸದಿಂದ ಕೂಡಿರುವುದಿಲ್ಲ. ಫಲಿತಾಂಶ ಉತ್ತಮವಾಗಿ ಬರಬೇಕು ಎಂದಾದರೆ ವಿದ್ಯಾರ್ಥಿಗೆ ಕೊಂಚವಾದರು ಅದರ ಬಗ್ಗೆ ಆತಂಕವಿರಬೇಕು. ಇದು ಆರೋಗ್ಯಕರ ಆತಂಕ. ಆದರೆ ಇದು ಒಂದು ಮಟ್ಟ ಮೀರಿ ಅವನ ಸಾಮಾನ್ಯ ಸಾಧನೆಗೂ ತಡೆಯಾಗುವಷ್ಟರ ಮಟ್ಟಿಗೆ ಆತಂಕಿತನಾದಾಗ ಎಚ್ಚೆತ್ತುಕೊಳ್ಳಬೇಕು. ಏಕಾಗ್ರತೆಯ ಕೊರತೆ, ಭಾವನೆಗಳ ನಿಯಂತ್ರಣ ತಪ್ಪುವುದು, ಭಾವಶೂನ್ಯತೆ ಆವರಿಸುವುದು, ಪತರಗುಟ್ಟುವುದು, ದಿಢೀರನೆ ಕೋಪಗೊಳ್ಳುವುದು, ಸ್ನಾಯುಗಳು ಬಿಗಿಯಾಗುವುದು - ನೋಯುವುದು, ಹೊಟ್ಟೆತೊಳಸು, ಹಸಿವಿಲ್ಲದಿರುವುದು, ನಿದ್ರೆ ಬಾರದಿರುವುದು – ಇವೆಲ್ಲ ಆತಂಕದ ಲಕ್ಷಣಗಳು. ದಯವಿಟ್ಟು ಗಮನಿಸಿ: ಇವು ಆತಂಕದ ಲಕ್ಷಣಗಳೆ ಹೊರತು ರೋಗವಲ್ಲ. ಇದಕ್ಕೆ ಮದ್ದು ಮನಸ್ಸನ್ನು ಆ ಸ್ಥಿತಿಯಿಂದ ಹೊರತರುವುದು. ಮುಖ್ಯವಾಗಿ ವ್ಯಾಯಾಮ, ಯೋಗ, ಪ್ರಾಣಾಯಾಮ ಇತ್ಯಾದಿ ದೈಹಿಕವಾಗಿ ಕೊಂಚ ಶ್ರಮನೀಡುವ ಅಭ್ಯಾಸ ಬೆಳೆಸಬೇಕು. ಜೊತೆಗೆ ಆತಂಕಗಳು ಹೇಗೆ ತರ್ಕಹೀನ ಎಂಬುದನ್ನೂ ನಮಗೆ ನಾವೇ ಮನದಟ್ಟು ಮಾಡಿಕೊಳ್ಳಬೇಕು. ಅಲ್ಲದೆ ನಂಬಿಕಸ್ಥರಲ್ಲಿ ನಮ್ಮ ಆತಂಕವನ್ನು ತೋಡಿಕೊಳ್ಳುವುದೂ ಅದನ್ನು ಕಡಿಮೆ ಮಾಡಬಲ್ಲದು. ಕೆಲವು ಸಂದರ್ಭಗಳಲ್ಲಿ ವೈದ್ಯಕೀಯ ನೆರವು ಬೇಕಾದಾಗ ಸಂಕೋಚವಿಲ್ಲದೆ ಮನೋವೈದ್ಯರಲ್ಲಿ ಚಿಕಿತ್ಸೆ ಪಡೆದುಕೊಳ್ಳಬೇಕು. ಆರೋಗ್ಯವಾಗಿ ಸಂತೋಷದಿಂದ ಬಾಳುವುದು ಎಲ್ಲರ ಹಕ್ಕು. ಯಾವುದೇ ಕಾರಣಕ್ಕೂ ಇದರಿಂದ ನಾವು ವಂಚಿತರಾಗಬಾರದು; ಸೂಕ್ತಕ್ರಮಗಳನ್ನು ಅನುಸರಿಸಿ ಆತಂಕಗಳಿಂದ ಮುಕ್ತರಾಗಿ ಹರ್ಷಚಿತ್ತದಿಂದ ಬಾಳಬೇಕು.

ಕೊನೆಯದಾಗಿ, ಒಂದು ಆತಂಕದ ಬಗ್ಗೆ ಹೇಳಲೇಬೇಕು. ಅದು ಬದುಕಿನ ಬಗೆಗಿನ ಆತಂಕವಲ್ಲ. ಸಾವಿನ ಬಗೆಗಿನ ಆತಂಕ. ಆಶ್ಚರ್ಯವೆನಿಸಿದರೂ ವಯಸ್ಸಾದವರು ಮಾತ್ರ ಇದನ್ನು ಹೊಂದಿರುತ್ತಾರೆ ಎನ್ನಲಾಗದು. ಎಷ್ಟೋ ಬಾರಿ ಕಿರಿಯ ವಯಸ್ಸಿನವರಲ್ಲಿಯೂ ಇದು ಕಾಡುವ ಮಟ್ಟಕ್ಕೆ ಹೋಗುತ್ತದೆ. ಇದಕ್ಕೆ ಉತ್ತರದ ಕಗ್ಗ ಹೀಗಿದೆ: ಮರಣದಿಂ ಮುಂದೇನು? ಪ್ರೇತವೋ? ಭೂತವೋ? ಪರಲೋಕವೋ? ಪುನರ್ಜನ್ಮವೋ? ಅದೇನೋ! ತಿರುಗಿ ಬಂದವರಿಲ್ಲ, ವರದಿ ತಂದವರಿಲ್ಲ, ಧರೆಯ ಬಾಳ್ಗದರಿನೇಂ – ಮಂಕುತಿಮ್ಮ.' ಇಹದ ಜೀವನಕ್ಕೆ ಮರಣೋತ್ತರದ ತರ್ಕ ಬೇಡವೆನ್ನುತ್ತಾರೆ, ಗುಂಡಪ್ಪನವರು. ಇದನ್ನೇ ವೀರಭಾವದಲ್ಲಿ ಬಸವಣ್ಣನವರು, '... ನಾಳೆ ಬಪ್ಪುದು ನಮಗಿಂದೆ ಬರಲಿ, ಇಂದು ಬಪ್ಪುದು ನಮಗೀಗಲೆ ಬರಲಿ, ಇದಕಾರಂಜುವರು ಇದಕಾರಳುಕುವರು 'ಜಾತಸ್ಯ ಮರಣಂ ಧ್ರುವಂ' ಎಂಬುದಾಗಿ ನಮ್ಮ ಕೂಡಲಸಂಗಮದೇವರು ಬರೆದ ಬರಹವ ತಪ್ಪಿಸುವಡೆ ಹರಿಬ್ರಹ್ಮಾದಿಗಳಿಗಳವಲ್ಲ' ಎಂದಿದ್ದಾರೆ. ಮತ್ತೂ ಮುಂದುವರೆದು ಯಾವ ಸಾವನ್ನು ಮುಂದೂಡಲು ಎಲ್ಲ ಜೀವರೂ ಇಷ್ಟಪಡುತ್ತಾರೋ ಅಂತಹ ಸಾವನ್ನು ಮಹಾನವಮಿ ಎನ್ನುತ್ತಾರೆ ಬಸವಣ್ಣನವರು, 'ಜೋಳವಾಳಿಯಾನಲ್ಲ, ವೇಳೆವಾಳಿಯವ ನಾನಯ್ಯ, ಹಾಲುಗೆಟ್ಟೋಡುವ ಆಳು ನಾನಲ್ಲಯ್ಯಾ; ಕೇಳು ಕೂಡಲ ಸಂಗಮದೇವಾ, ಮರಣವೇ ಮಹಾನವಮಿ'.


ನಾಳಿನ ಬಗೆಗಿನ ಆತಂಕ ಬಿಟ್ಟು ಈ ಕ್ಷಣದ ಅರಿವಿನಲ್ಲಿ ಬದುಕಿನ ಸೊಗಸನ್ನು ಆಸ್ವಾದಿಸುವ ಪ್ರಯತ್ನ ನಮ್ಮಿಂದ ನಿರಂತರವಾಗಿ ನಡೆಯಲಿ.

ನಯನಗಳ ನಾಜೂಕು

ಆಧುನಿಕ ಜೀವನಶೈಲಿಯಲ್ಲಿ ನಾವು ಆಯಾಸಗೊಳಿಸುತ್ತಿರುವ ಪ್ರಮುಖ ಅಂಗಗಳಲ್ಲೊಂದು ಕಣ್ಣು. ಹೀಗೆ ದಣಿಯುವ ಕಣ್ಣುಗಳನ್ನು ಜೋಪಾನವಾಗಿ ನೋಡಿಕೊಳ್ಳಲು ನೆರವಾಗುವ ಕೆಲವು ವ್ಯಾಯಾಮಗಳನ್ನು ಅಕ್ಟೋಬರ್ 25ರ ಸಂಚಿಕೆಯಲ್ಲಿ ತಿಳಿಸಿಕೊಡಲಾಗಿತ್ತು. ಅದರ ಮುಂದುವರಿದ ಭಾಗ ಇಲ್ಲಿದೆ...

ಎನ್. ಎಸ್. ಓಂಕಾರ್

ಕ್ರಮ 4: ಓರೆಚಲನೆ





1. ಬಲಹಸ್ತವನ್ನು ಎಡಮಂಡಿಯ ಮೇಲೆ ಇರಿಸಿಕೊಳ್ಳಿ. ಬಲಹೆಬ್ಬೆಟ್ಟನ್ನು ಚಾಚಿ. ಮಿಕ್ಕ ಬೆರಳುಗಳನ್ನು ಮಡಿಚಿ.
2. ಎಡಹಸ್ತದಿಂದ ಗಂಟಲ ಭಾಗವನ್ನು ಮೃದುವಾಗಿ ಹಿಡಿಯಿರಿ. ಸ್ಪರ್ಶಸಂವೇದನಾ ಗ್ರಹಿಕೆಯಿಂದ ಕುತ್ತಿಗೆಯು ಚಲಿಸದಂತೆ ಗಮನಿಸಿ.
3. ಬಲಹೆಬ್ಬೆಟ್ಟನ್ನು ತದೇಕಚಿತ್ತದಿಂದ ರೆಪ್ಪೆಗಳನ್ನು ಅಲುಗಾಡಿಸದೇ ದೃಷ್ಟಿಸುತ್ತಾ ಹಸ್ತವನ್ನು ನಿಧಾನವಾಗಿ ಓರೆದಿಕ್ಕಿನಲ್ಲಿ ಚಲಿಸಿ.
4. ಹೆಬ್ಬೆಟ್ಟಿನ ತುದಿ ಕಾಣುವವರೆಗೂ ಬಲಗೈಯನ್ನು ಮೇಲಕ್ಕೆ ಚಲಿಸಿ.
5. ಉಸಿರನ್ನು ಬಿಡುತ್ತಾ ಬಲಹಸ್ತವನ್ನು ನಿಧಾನವಾಗಿ, ಅದೇ ಪಥದಲ್ಲಿ ಕೆಳಕ್ಕೆ ಚಲಿಸಿ.
6. ಈ ಕ್ರಮವನ್ನು ಸುಮಾರು 10-15 ಬಾರಿ ಪುನರಾವರ್ತಿಸಿ.
7. ಮತ್ತೊಂದು ಕಡೆ ಪುನರಾವರ್ತಿಸಿ.
8. ಕಣ್ಣುಗಳನ್ನು ಮುಚ್ಚಿ, ಕೈಗಳನ್ನು ವಿರಮಿಸಿ.

ಕ್ರಮ 5: ಹಸ್ತಕವಚ



1. ಕಣ್ಣುಗಳನ್ನು ಮುಚ್ಚಿ; ಹಸ್ತದ ಬುಡಗಳಿಂದ ಕಣ್ಣುಗಳನ್ನು ಮೃದುವಾಗಿ ಮುಚ್ಚಿ; ಕಣ್ಣುಗಳನ್ನು ಒತ್ತಬೇಡಿ.
2. ಕಣ್ಣಿನ ಮೇಲೆ ಬೆಳಕು ಬೀಳದಿದ್ದಷ್ಟೂ ಕತ್ತಲೆಯ ಗಾಢ ಹೆಚ್ಚುತ್ತದೆ.
3. ಭುಜಗಳು ಮತ್ತು ಮೊಣಕೈಗಳ ಮೇಲೆ ಒತ್ತಡ ಇರಬಾರದು.
4. ಸುಮಾರು 2-3 ನಿಮಿಷಗಳ ಕಾಲ ಈ ಸ್ಥಿತಿಯಲ್ಲಿರಿ.
5. ಕತ್ತಲಿದ್ದಷ್ಟೂ ಕಣ್ಣುಗಳಿಗೆ ವಿಶ್ರಾಂತಿ ದೊರೆಯುತ್ತದೆ.
6. ಕಣ್ಣುಗಳನ್ನು ತೆರೆಯಿರಿ, ಕೈಗಳನ್ನು ವಿರಮಿಸಿ.

ಕ್ರಮ 6 : ನಕ್ಷತ್ರವೀಕ್ಷಣೆ



ಮಾನವನ ಕಣ್ಣುಗಳು ಮೂಲಭೂತವಾಗಿ ದೂರವೀಕ್ಷಣೆಗೆ ಇರುವಂತಹುದು. ದೂರದ ವಸ್ತುಗಳನ್ನು ವೀಕ್ಷಿಸಿದಾಗ ಕಣ್ಣುಗಳು ಸಹಜವಾಗಿಯೇ ಒತ್ತಡರಹಿತವಾಗುತ್ತದೆ. ದೂರವೀಕ್ಷಣೆಯ ಉತ್ತಮ ವಿಧಾನವೆಂದರೆ ನಕ್ಷತ್ರವೀಕ್ಷಣೆ.

1. ಕತ್ತಲಾದ ನಂತರ ಕತ್ತನ್ನು ಸ್ವಲ್ಪ ಮೇಲಕ್ಕೆತ್ತಿ ಅಕಾಶದಲ್ಲಿರುವ ನಕ್ಷತ್ರವೊಂದರಲ್ಲಿ ದೃಷ್ಟಿಯನ್ನು ಇರಿಸಿ.
2. ಆ ನಕ್ಷತ್ರವನ್ನು ಸುಮಾರು 2 ನಿಮಿಷಗಳ ಕಾಲ ಎವೆಯಿಕ್ಕದೆ ದೃಷ್ಟಿಸಿ ನೋಡಿ.
3. ನಂತರ ಕತ್ತನ್ನು ವಿರಮಿಸಿ ಕಣ್ಣುಗಳನ್ನು ಮುಚ್ಚಿ.
4. ಈ ಕ್ರಮವನ್ನು 2-3 ಬಾರಿ ಪುನರಾವರ್ತಿಸಿ.

ಕ್ರಮ 7: ತ್ರಾಟಕ

1. ಸಾಧ್ಯವಾದಷ್ಟು ಗಾಳಿ ಬೀಸದ ಕೋಣೆಯಲ್ಲಿ ಒಂದು ನಂದಾದೀಪವನ್ನು ಇಟ್ಟುಕೊಳ್ಳಿ.
2. ದೀಪವನ್ನು ಸುಮಾರು 6 ಅಡಿಗಳಷ್ಟು ದೂರ ಕತ್ತಿಗೆ ಶ್ರಮವಾಗದಂತೆ ಇಟ್ಟುಕೊಳ್ಳಿ.
3. ನೇರವಾಗಿ ಕುಳಿತುಕೊಳ್ಳಿ. ನಿಮ್ಮ ಅಸ್ಥಿ-ಸ್ನಾಯು ವ್ಯವಸ್ಥೆಯ ಸಮಗ್ರ ಅರಿವಿರಲಿ.
4. ಹಸ್ತಗಳನ್ನು ಮೇಲ್ಮುಖವಾಗಿರಿಸಿ ಮಂಡಿಗಳ ಮೇಲೆ ವಿರಮಿಸಿ.
5. ಜ್ಯೋತಿಯನ್ನು ನೇರವಾಗಿ ದೃಷ್ಟಿಸಿ ನೋಡಿ.
6. ಕಣ್ಣುಗಳನ್ನು ಹೆಚ್ಚಾಗಿ ಮಿಟುಕಿಸಬೇಡಿ.
7. ಆರಂಭಿಕ ಹಂತದಲ್ಲಿ ಸುಮಾರು 1-2 ನಿಮಿಷಗಳ ಕಾಲ ದೃಷ್ಟಿಸಿ ನೋಡಿ
8. ನಂತರ ಕಣ್ಣುಗಳನ್ನು ಮೃದುವಾಗಿ ಮುಚ್ಚಿ ಒಂದು ನಿಮಿಷದಷ್ಟು ಕಾಲ ವಿರಮಿಸಿ; ಪುನರಾವರ್ತಿಸಿ.



ನಾಲ್ಕು ವರ್ಷದ ಹೆಣ್ಣು ಮಗು ದ್ವಿತಿಯನ್ನು ಕೊಲೆ ಮಾಡಿದ್ದ ತಾಯಿ ಹೇಳಿಕೆ

‘ಜೀವನವೇ ಬೇಜಾರಾಗಿ ಕೊಂದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಪಂಗಿರಾಮನಗರ ಠಾಣೆ ವ್ಯಾಪ್ತಿಯಲ್ಲಿ ನಾಲ್ಕು ವರ್ಷದ ಹೆಣ್ಣು ಮಗು ದ್ವಿತಿಯನ್ನು ಕೊಲೆ ಮಾಡಿದ್ದ ಆರೋಪದಡಿ ಬಂಧಿಸಲಾಗಿದ್ದ ತಾಯಿ ಸುಷ್ಮಾ ವಿರುದ್ಧ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

‘ಅದ್ವಿತ್ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಲ್ಲಿ ವಾಸವಿದ್ದ ಸುಷ್ಮಾ, ಆಗಸ್ಟ್ 4ರಂದು ದ್ವಿತಿಯನ್ನು ನಾಲ್ಕನೇ ಮಹಡಿಯಿಂದ ಎಸೆದು ಕೊಲೆ ಮಾಡಿದ್ದರು. ಪತಿ ಕಿರಣ್ ನೀಡಿದ್ದ ದೂರು ಆಧರಿಸಿ ಸುಷ್ಮಾ ಅವರನ್ನು ಬಂಧಿಸಲಾಗಿತ್ತು. ಕೃತ್ಯದ ಬಗ್ಗೆ ತನಿಖೆ ಪೂರ್ಣಗೊಳಿಸಿ 193 ಪುಟಗಳ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮಗುವನ್ನು ಮಹಡಿಯಿಂದ ಬಿಸಾಕಿದ್ದನ್ನು ನೋಡಿದ್ದ ಮೂವರು ಪ್ರತ್ಯಕ್ಷದರ್ಶಿಗಳು ಹಾಗೂ 34 ಸಾಕ್ಷಿದಾರರ ಹೇಳಿಕೆಯನ್ನು ಪಟ್ಟಿಯೊಂದಿಗೆ ಲಗತ್ತಿಸಲಾಗಿದೆ’ ಎಂದು ತಿಳಿಸಿವೆ.

ತಾಯಿ ಹೇಳಿಕೆ: ಮಗುವನ್ನು ಕೊಂದಿರುವ ಆರೋಪಿ ಸುಷ್ಮಾ ಸಹ ಹೇಳಿಕೆ ನೀಡಿದ್ದು, ಅದನ್ನೂ ಪಟ್ಟಿಯೊಂದಿಗೆ ಲಗತ್ತಿಸಲಾಗಿದೆ.

‘ಮಗಳು ದ್ವಿತಿ, ಆಟಿಸಂ ಕಾಯಿಲೆಯಿಂದ ಬಳಲುತ್ತಿದ್ದಳು. ಚಿಕಿತ್ಸೆಗಾಗಿ ಆಕೆಯನ್ನು ನಿತ್ಯವೂ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಬರಬೇಕಿತ್ತು. ಆಕೆಯ ಆರೈಕೆ ಮಾಡುವುದರಲ್ಲೇ ನಾನು ಹೈರಾಣಾಗಿದ್ದೆ. ಮಗುವಿನಿಂದಾಗಿ ಜೀವನವೇ ಬೇಜಾರಾಯಿತು. ಎಲ್ಲಿಯೂ ಹೋಗದಂತಾಯಿತು. ಸ್ನೇಹಿತರು, ಸಂಬಂಧಿಕರು ಹಾಗೂ ಆತ್ಮೀಯರೊಂದಿಗೆ ಬೆರೆಯದಂತಾಯಿತು. ಇದರಿಂದ ಬೇಸತ್ತು ಮಗುವನ್ನು ಕೊಲೆ ಮಾಡಿದೆ’ ಎಂಬುದಾಗಿ ಸುಷ್ಮಾ ಹೇಳಿಕೆ ನೀಡಿರುವುದಾಗಿ ಗೊತ್ತಾಗಿದೆ.

ಅಪರಾಧ ಸುದ್ದಿಗಳು

ರಸ್ತೆಗುಂಡಿ ಅಪಘಾತ: ₹ 7.5 ಲಕ್ಷ ಆಸ್ಪತ್ರೆ ವೆಚ್ಚ

ಬೆಂಗಳೂರು: ರಸ್ತೆ ಅಪಘಾತಕ್ಕೆ ಈಡಾಗಿದ್ದ ನಗರದ ಮಹಿಳೆ 15 ದಿನಗಳ ಆಸ್ಪತ್ರೆ ಚಿಕಿತ್ಸೆಗೆ ₹ 7.5 ಲಕ್ಷ ಶುಲ್ಕ ಭರಿಸಬೇಕಾಗಿ ಬಂದಿದ್ದೇ ಅಲ್ಲದೆ, ಆರು ವಾರ ವಿಶ್ರಾಂತಿ ಪಡೆಯಬೇಕಾದ ಸ್ಥಿತಿ ತಲುಪಿದ್ದಾರೆ.

ಪೀಣ್ಯ 2ನೇ ಹಂತದ ನಿವಾಸಿ ಎಸ್.ಸುಗುಣ ಅಕ್ಟೋಬರ್ 16ರಂದು ನಂದಿನಿ ಲೇಔಟ್‌ನಿಂದ ಮರಳುತ್ತಿದ್ದಾಗ, ತಮ್ಮ ಮನೆಯಿಂದ ಒಂದೂವರೆ ಕಿ.ಮೀ. ದೂರದಲ್ಲಿನ 14ನೇ ಕ್ರಾಸ್‌ನಲ್ಲಿ ದೊಡ್ಡ ರಸ್ತೆಗುಂಡಿಗೆ ದ್ವಿಚಕ್ರ ವಾಹನದ ಚಕ್ರ ಇಳಿದಿದ್ದರಿಂದ ಆಯತಪ್ಪಿ ಬಿದ್ದಿದ್ದರು. ರಸ್ತೆಗುಂಡಿಯಲ್ಲಿ ಮಳೆನೀರು ತುಂಬಿದ್ದರಿಂದ ಅವರಿಗೆ ಗುಂಡಿಯ ಆಳ ಎಷ್ಟಿದೆ ಎನ್ನುವುದು ಗೊತ್ತಾಗಿರಲಿಲ್ಲ.

‘ನನ್ನ ಹೆಂಡತಿಯು ನಾಲ್ಕು ವರ್ಷಗಳಿಂದ ಮನೆ ಹಾಗೂ ಕಚೇರಿಯ ನಡುವೆ ಓಡಾಡಲು ದ್ವಿಚಕ್ರವಾಹನ ಬಳಸುತ್ತಿದ್ದಳು. ಅವಳು ನಿಧಾನಕ್ಕೆ ಗಾಡಿ ಓಡಿಸುತ್ತಿದ್ದರೂ ರಸ್ತೆ ಗುಂಡಿ ಆಳವಿದ್ದಿದ್ದರಿಂದ ಆಯತಪ್ಪಿ ಬಿದ್ದಳು. ಆರೋಗ್ಯ ವಿಮೆ ಮಾಡಿಸಿದ್ದರಿಂದ ತಕ್ಷಣಕ್ಕೆ ₹ 5.6 ಲಕ್ಷ ಸಿಕ್ಕಿತು. ಉಳಿದ ₹ 2 ಲಕ್ಷವನ್ನು ಹೊಂದಿಸಬೇಕಾಯಿತು. ಇನ್ನೂ ಆರು ವಾರ ಅವಳಿಗೆ ವೈದ್ಯರು ವಿಶ್ರಾಂತಿ ಸೂಚಿಸಿದ್ದು, ಫಿಸಿಯೊಥೆರಪಿ ಮಾಡಿಸಬೇಕಿದೆ’ ಎಂದು ಸುಗುಣ ಅವರ ಪತಿ ಮಹೇಶ್ ತಿಳಿಸಿದರು.

‘ಮನೆಯಲ್ಲಿ ಆರು ವರ್ಷದ ಮಗ ಇದ್ದಾನೆ. ವಯಸ್ಸಾದ ತಾಯಿ ಕೂಡ ಇರುವರು. ಅಪಘಾತವಾದ ನಂತರ ಪೊಲೀಸ್ ಠಾಣೆಗೆ ಹೋಗಿ ರಸ್ತೆಗುಂಡಿಯ ಕಾರಣಕ್ಕೇ ಅಪಘಾತವಾಯಿತು ಎಂದು ತಿಳಿಸಿದರೂ ಪೊಲೀಸರು ದೂರು ದಾಖಲಿಸಿಕೊಳ್ಳಲು ನಿರಾಕರಿಸಿದರು. ಮಳೆ ಬರುವಾಗ ಇನ್ನು ಮುಂದೆ ದ್ವಿಚಕ್ರವಾಹನ ಓಡಿಸಕೂಡದು ಎಂದು ತೀರ್ಮಾನಿಸಿದ್ದೇನೆ’ ಎಂದು ಅವರು ಭಾವುಕರಾದರು.

‘ಬೆಂಗಳೂರು ಒನ್’ ನೌಕರ ಬಂಧನ

ಬೆಂಗಳೂರು: ದೇಶದೊಳಗೆ ಅಕ್ರಮವಾಗಿ ನುಸುಳಿದ್ದ ಬಾಂಗ್ಲಾದೇಶದ ಪ್ರಜೆಗಳಿಗೆ ಆಧಾರ್ ಮಾಡಿಸಿಕೊಡುತ್ತಿದ್ದ ಆರೋಪದಡಿ ‘ಬೆಂಗಳೂರು ಒನ್’ ಕೇಂದ್ರದ ಗುತ್ತಿಗೆ ನೌಕರ ಸೇರಿ ಮೂವರನ್ನು ಮಾದನಾಯಕನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಸಿದ್ದನಹೊಸಹಳ್ಳಿಯ ‘ಒನ್ ಸ್ಟಾಪ್-ಆಲ್ ಸಲ್ಯೂಷನ್ಸ್’ ಹೆಸರಿನ ಸೈಬರ್ ಕೇಂದ್ರದಲ್ಲಿ ಆಧಾರ್ ಮಾಡಿಕೊಡುತ್ತಿದ್ದ ಮಾಹಿತಿ ಲಭ್ಯವಾಗಿತ್ತು. ಬಾಂಗ್ಲಾ ಪ್ರಜೆಗಳ ಸೋಗಿನಲ್ಲಿ ಕಾರ್ಯಾಚರಣೆ ನಡೆಸಿ ಜಾಲವನ್ನು ಭೇದಿಸಲಾಗಿದೆ. ಸೈಬರ್ ಕೇಂದ್ರದ ಮಾಲೀಕ ವಿಜಯ್‌ಕುಮಾರ್ ಸಿಂಗ್ (34) ಹಾಗೂ ಅಕ್ರಮವಾಗಿ ಆಧಾರ್ ಪಡೆದಿದ್ದ ಬಾಂಗ್ಲಾ ಪ್ರಜೆ ಜುವೇಲ್ ರಾಣಾ (22) ಅವರನ್ನು ಬಂಧಿಸಲಾಗಿತ್ತು. ಇವರು ಮತ್ತಷ್ಟು ಆರೋಪಿಗಳ ಹೆಸರು ಬಾಯ್ಬಿಟ್ಟಿದ್ದರು. ನಂತರವೇ, ಪಾದರಾಯನಪುರದ ನೌಷದ್ ಪಾಷಾನನ್ನು (24) ಬಂಧಿಸಲಾಯಿತು. ಈತ, ಬನಶಂಕರಿ ಶ್ರೀನಿವಾಸನಗರದ ಬೆಂಗಳೂರು ಒನ್ ಕೇಂದ್ರದ ಗುತ್ತಿಗೆ ನೌಕರ’ ಎಂದು ಪೊಲೀಸರು ತಿಳಿಸಿದರು.

ವಂಚನೆ: ಎಜಿಎಸ್ ಇನ್ಫೋಟೆಕ್ ವಿರುದ್ಧ ಆರೋಪಪಟ್ಟಿ

ಬೆಂಗಳೂರು: ಹಿಂದಿನ ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾಗೆ ₹ 23.73 ಕೋಟಿ ವಂಚಿಸಿದ ಆರೋಪದ ಮೇಲೆ ನಗರದ ಎಜಿಎಸ್ ಇನ್ಫೋಟೆಕ್ ಪ್ರೈವೇಟ್ ಲಿಮಿಟೆಡ್ ಮತ್ತು ಆ ಕಂಪನಿಯ ನಿರ್ದೇಶಕ ಜಿ. ಧನಂಜಯ ರೆಡ್ಡಿ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ವಿಶೇಷ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದೆ.

ಎಜಿಎಸ್ ಇನ್ಫೋಟೆಕ್, ನಕಲಿ ದಾಖಲೆ ಸಲ್ಲಿಸಿ ಬ್ಯಾಂಕ್‌ನಿಂದ ₹ 23.73 ಕೋಟಿ ಸಾಲ ಪಡೆದಿತ್ತು. ಅದನ್ನು ಬೇರೆ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿ, ಅನ್ಯ ಉದ್ದೇಶಕ್ಕೆ ಬಳಸಿಕೊಂಡಿತ್ತು. ಈ ಸಂಬಂಧ ಸಿಬಿಐ ಪ್ರಕರಣ ದಾಖಲಿಸಿ ತನಿಖೆ ನಡೆಸಿತ್ತು.

ಲಂಚ: ಎಸ್‌ಡಿಎ ಬಂಧನ

ಬೆಂಗಳೂರು: ಕಚೇರಿಗೆ ಹವಾ ನಿಯಂತ್ರಕಗಳನ್ನು (ಎ.ಸಿ) ಅಳವಡಿಸಿದ್ದ ಗುತ್ತಿಗೆದಾರರಿಗೆ ಬಿಲ್ ಮೊತ್ತ ಪಾವತಿಗೆ ಕ್ರಮ ಕೈಗೊಳ್ಳಲು ₹ 50,000 ಲಂಚ ಪಡೆಯುತ್ತಿದ್ದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಆಯುಕ್ತಾಲಯದ ದ್ವಿತೀಯ ದರ್ಜೆ ಸಹಾಯಕ (ಎಸ್‌ಡಿಎ) ಶಶಿಕುಮಾರ್ ಎಂಬುವವರನ್ನು ಲೋಕಾಯುಕ್ತ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಇ.ಡಿ ವಿಚಾರಣೆ ಎದುರಿಸಿದ ಡಿ.ಕೆ. ಸುರೇಶ್

ನವದೆಹಲಿ: ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ.) ಅಧಿಕಾರಿಗಳು ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ಅವರನ್ನು ಸೋಮವಾರ ಸುಮಾರು 5 ತಾಸು ವಿಚಾರಣೆ ನಡೆಸಿದರು.

ಈ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಡಿ.ಕೆ.ಸುರೇಶ್ ಅವರಿಗೆ ಇ.ಡಿ.ಸಮನ್ಸ್ ನೀಡಿತ್ತು. ವಿಚಾರಣೆಗೆ ಹಾಜರಾಗಲು ಮೂರು ವಾರಗಳ ಕಾಲಾವಕಾಶ ನೀಡಬೇಕು ಎಂದು ಶಿವಕುಮಾರ್ ಕೋರಿದ್ದರು. ಹಾಗಾಗಿ, ಅವರು ಸೋಮವಾರ ವಿಚಾರಣೆಗೆ ಹಾಜರಾಗಿಲ್ಲ. ಅವರಿಗೆ ಇ.ಡಿ. ಮತ್ತೆ ಸಮನ್ಸ್ ನೀಡಲಿದೆ.

ನ್ಯಾಷನಲ್ ಹೆರಾಲ್ಡ್‌ನ ಮಾತೃ ಸಂಸ್ಥೆಯಾದ ಯಂಗ್ ಇಂಡಿಯಾ ಲಿಮಿಟೆಡ್‌ಗೆ ಶಿವಕುಮಾರ್ ಮತ್ತು ಸುರೇಶ್ ದೇಣಿಗೆ ನೀಡಿರುವ ಪ್ರಕರಣ ಇದಾಗಿದೆ. ಸುರೇಶ್ ಅವರು ಯಂಗ್ ಇಂಡಿಯಾ ಸಂಸ್ಥೆಗೆ ಈ ವರ್ಷ ₹25 ಲಕ್ಷ ದೇಣಿಗೆ ನೀಡಿದ್ದಾರೆ.

ವಿಚಾರಣೆ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಡಿ.ಕೆ. ಸುರೇಶ್, ‘ಇ.ಡಿ. ಅಧಿಕಾರಿಗಳು ಯಂಗ್ ಇಂಡಿಯಾಗೆ ಸಂಬಂಧಿಸಿದ ಮಾಹಿತಿ ಕೇಳಿದ್ದಾರೆ. ದೇಣಿಗೆ ಹಣ ಯಾಕೆ ಪಾವತಿ ಮಾಡಿದ್ದೀರಿ ಹಾಗೂ ಹಣದ ಮೂಲದ ಬಗ್ಗೆ ಮಾಹಿತಿ ಕೇಳಿದ್ದಾರೆ. ಎಲ್ಲ ಮಾಹಿತಿ ನೀಡಿದ್ದೇನೆ. ಕೆಲವು ದಾಖಲೆಗಳನ್ನು ಕೇಳಿದ್ದಾರೆ. ಎಲ್ಲ ದಾಖಲೆಗಳನ್ನು 3–4 ದಿನಗಳಲ್ಲಿ ನೀಡುವುದಾಗಿ ಹೇಳಿದ್ದೇನೆ’ ಎಂದರು.

ಮಹಿಳೆ ಕೊಲೆ: ಜೀವಾವಧಿ ಶಿಕ್ಷೆ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒಂಟಿ ಮಹಿಳೆಯ ಕೊಲೆ ಮಾಡಿ ಒಡವೆ ದೋಚಿದ್ದ ಆರೋಪದಲ್ಲಿ ಸೆಷನ್ಸ್ ನ್ಯಾಯಾಲಯದಿಂದ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಅಪರಾಧಿಯನ್ನು ಸಾಕ್ಷ್ಯಾಧಾರದ ಕೊರತೆ ಕಾರಣಕ್ಕೆ ಹೈಕೋರ್ಟ್ ಖುಲಾಸೆಗೊಳಿಸಿದೆ.

ಈ ಸಂಬಂಧ ಅಪರಾಧಿ ಕೃಷ್ಣ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಬಿ.ವೀರಪ್ಪ ಮತ್ತು ಕೆ.ಎಸ್. ಹೇಮಲೇಖಾ ಅವರಿದ್ದ ವಿಭಾಗೀಯ ನ್ಯಾಯಪೀಠ ಪುರಸ್ಕರಿಸಿದೆ.

ವಿಚಾರಣೆ ವೇಳೆ ಕೃಷ್ಣ ಪರ ವಕೀಲ ಸಿ.ಎಚ್.ಹನುಮಂತರಾಯ ಅವರು, ‘ಈ ಪ್ರಕರಣದಲ್ಲಿ ಯಾವುದೇ ಪ್ರತ್ಯಕ್ಷ ಸಾಕ್ಷಿದಾರರಿಲ್ಲ. ಗುರುತಿಸಲಾಗಿರುವ ಒಡವೆಗಳು ಮೃತ ಮಹಿಳೆಯದ್ದೇ ಎಂದು ಸೂಚಿಸಲೂ ಯಾವುದೇ ಆಧಾರವಿಲ್ಲ. ಕೇವಲ ಮೃತ ಮಹಿಳೆಯ ಸಂಬಂಧಿಗಳು ಅನುಮಾನ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಆರೋಪಿಗೆ ಶಿಕ್ಷೆ ವಿಧಿಸಲಾಗಿದೆ. ಪ್ರಮುಖವಾಗಿ ಪ್ರಕರಣದ ಪ್ರಾಥಮಿಕ ತನಿಖೆಯನ್ನು ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ನಡೆಸಿರುವುದು ಕರ್ನಾಟಕ ಪೊಲೀಸ್ ಕೈಪಿಡಿಯಲ್ಲಿ ಸೂಚಿಸಲಾಗಿರುವ ನಿಯಮಗಳಿಗೆ ವಿರುದ್ಧವಾಗಿದೆ’ ಎಂದು ವಾದ ಮಂಡಿಸಿದ್ದರು.

ಈ ವಾದಾಂಶವನ್ನು ಮಾನ್ಯ ಮಾಡಿರುವ ನ್ಯಾಯಪೀಠ, ಒಂಬತ್ತು ವರ್ಷ 9 ತಿಂಗಳು 11 ದಿವಸಗಳ ಕಾಲ ಜೈಲಿನಲ್ಲಿದ್ದ ಅಪರಾಧಿಯ ಬಿಡುಗಡೆಗೆ ಆದೇಶಿಸಿದೆ.

ಪ್ರಕರಣವೇನು?: ಕನಕಾಂಬರಂ ಎನ್ನುವ ಮಹಿಳೆಯ ಕೊಲೆ ಪ್ರಕರಣದಲ್ಲಿ ಕೃಷ್ಣ ಎನ್ನುವವರನ್ನು ಚೆನ್ನಮ್ಮನಕೆರೆ ಅಚ್ಚುಕಟ್ಟು ಠಾಣೆ ಪೊಲೀಸರು ಬಂಧಿಸಿದ್ದರು. ಕೃಷ್ಣ ಕೊಲೆಯಾಗಿದ್ದ ಕನಕಾಂಬರಂ ಅವರ ಪತಿಯ ಅಣ್ಣನ ಮಗ. ಕನಕಾಂಬರಂ ಅವರ ಪತಿ 2013ಕ್ಕೂ ಮೊದಲೇ ಸುಮಾರು 17 ವರ್ಷಗಳ ಹಿಂದೆ ತೀರಿಕೊಂಡಿದ್ದರು. ಅವರಿಗೆ ಸ್ವಂತ ಮಕ್ಕಳಿಲ್ಲದ ಕಾರಣ ಅಂದಿನಿಂದ ಕೃಷ್ಣ ಮೃತರಿಗಾಗಿ ಒಂದು ಮನೆಯನ್ನು ಭೋಗ್ಯಕ್ಕೆ ಪಡೆದು ಅವರನ್ನು ನೋಡಿಕೊಳ್ಳುತ್ತಿದ್ದರು.

ಕನಕಾಂಬರಂ 2013ರ ಜನವರಿ 21ರಂದು ಮನೆಯಲ್ಲಿ ಒಬ್ಬರೇ ಇದ್ದಾಗ ಅವರನ್ನು ಕೊಲೆ ಮಾಡಿ, ಅವರ ಮೈಮೇಲಿನ ಒಡವೆಗಳನ್ನು ದೋಚಲಾಗಿತ್ತು. ಮೃತ ಮಹಿಳೆಯ ಅಣ್ಣ ಹಾಗೂ ಸಂಬಂಧಿಗಳು, ‘ಕೃಷ್ಣ ಒಡವೆಗಾಗಿ ಕೊಲೆ ಮಾಡಿದ್ದಾನೆ’ ಎಂದು ದೂರು ನೀಡಿದ್ದರು.

ಈ ದೂರಿನ ಆಧಾರದ ಮೇಲೆ, ಕೃಷ್ಣನನ್ನು ಬಂಧಿಸಲಾಗಿತ್ತು. ತನಿಖೆ ಪೂರ್ಣಗೊಳಿಸಿದ್ದ ಪೊಲೀಸರು ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ್ದ 51ನೇ ಸೆಷನ್ಸ್ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿತ್ತು.

‘ಅತ್ಯಾಚಾರ: ವಯಸ್ಸಿನ ದೃಢೀಕರಣಕ್ಕೆ ಶಾಲಾ ದಾಖಲೆ ಮುಖ್ಯ’

ಬೆಂಗಳೂರು: ‘ಅತ್ಯಾಚಾರ ಪ್ರಕರಣದ ಸಂತ್ರಸ್ತ ಬಾಲಕಿಯ ವಯಸ್ಸು ನಿರ್ಧರಿಸುವ ವಿಚಾರದಲ್ಲಿ ವೈದ್ಯರು ನೀಡಿದ ವೈದ್ಯಕೀಯ ಅಭಿಪ್ರಾಯಕ್ಕಿಂತ ಶಾಲಾ ಪ್ರಾಧಿಕಾರಗಳು ವಿತರಿಸಿದ ಪ್ರಮಾಣಪತ್ರವೇ ಹೆಚ್ಚು ಪ್ರಾಮುಖ್ಯ ಹೊಂದಿರುತ್ತದೆ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಕ್ರಿಮಿನಲ್ ಮೇಲ್ಮನವಿಯೊಂದರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಡಾ.ಎಚ್.ಬಿ. ಪ್ರಭಾಕರ ಶಾಸ್ತ್ರಿ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ವೈದ್ಯಕೀಯ ದಾಖಲೆಗಳಿಗಿಂತ ಶಾಲಾ ಪ್ರಾಧಿಕಾರವು ನೀಡಿರುವ ಪ್ರಮಾಣ ಪತ್ರವು ಹೆಚ್ಚಿನ ಆದ್ಯತೆ ಹೊಂದಿರುತ್ತದೆ’ ಎಂದು ಹೇಳಿದೆ.

‘ಘಟನೆ ನಡೆದಾಗ ಸಂತ್ರಸ್ತೆ ವಯಸ್ಕಳಾಗಿದ್ದಳು’ ಎಂಬ ಆರೋಪಿಯ ವಾದಕ್ಕೆ ಪ್ರತಿಕ್ರಿಯಿಸಿರುವ ನ್ಯಾಯಪೀಠ, ‘ಮೆಟ್ರಿಕ್ಯುಲೇಷನ್ ಅಥವಾ ತತ್ಸಮಾನ ಪ್ರಮಾಣಪತ್ರ ಅಥವಾ ಶಾಲೆ, ನಗರ ಪಾಲಿಕೆ, ಪೌರಾಡಳಿತ ಪ್ರಾಧಿಕಾರ ಅಥವಾ ಪಂಚಾಯಿತಿ ನೀಡುವ ಜನನ ಪ್ರಮಾಣಪತ್ರ ಲಭ್ಯವಿಲ್ಲದ ಸಂದರ್ಭದಲ್ಲಿ ಕಾನೂನಿನ ಸಂಘರ್ಷಕ್ಕೆ ಒಳಗಾಗಿರುವ ಅಪ್ರಾಪ್ತ ವಯಸ್ಸಿನವರ ನಿಜವಾದ ವಯಸ್ಸು ಯಾವುದು ಎಂದು ನಿರ್ಧರಿಸಲು ವೈದ್ಯಕೀಯ ಅಭಿಪ್ರಾಯ ಕೋರಲಾಗುತ್ತದೆ. ಆಸ್ಪತ್ರೆಯಲ್ಲಿ ವೈದ್ಯಕೀಯ ದಾಖಲೆಗಳಲ್ಲಿ ಆಕೆ ನಮೂದಿಸಿರುವ ಹೆಸರು ಹಾಗೂ ವಯಸ್ಸನ್ನು ಸತ್ಯ ಎಂಬುದಾಗಿ ಒಪ್ಪಬೇಕಿದೆ’ ಎಂದು ತಿಳಿಸಿದೆ.

ಹೈಕೋರ್ಟ್ ಸುದ್ದಿಗಳು

ಬಿಡದಿಯ ಮಿಟ್ಸುಬಿಷಿ ಎಲೆಕ್ಟ್ರಿಕ್ ಕಂಪನಿಗೆ ಬೀಗ!

ಬಿಡದಿ: ಬಿಡದಿ ಕೈಗಾರಿಕಾ ಪ್ರದೇಶದಲ್ಲಿರುವ ಮಿಟ್ಸುಬಿಷಿ ಎಲೆಕ್ಟ್ರಿಕ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿ ಯಾವುದೇ ಮುನ್ಸೂಚನೆ ನೀಡದೆ ಏಕಾಏಕಿ ಲಾಕ್ ಔಟ್ ಘೋಷಿಸಿದ್ದು, ನೂರಾರು ಕಾರ್ಮಿಕರು ಅತಂತ್ರರಾಗಿದ್ದಾರೆ. ಬೆಮೆಲ್ ಹಾಗೂ ಮೆಟ್ರೊಗೆ ಅಗತ್ಯವಾದ ಎಲೆಕ್ಟ್ರಾನಿಕ್ ವಸ್ತುಗಳನ್ನು ಈ ಕಂಪನಿ ಸರಬರಾಜು ಮಾಡುತಿತ್ತು.

ಈ ಘಟಕದಲ್ಲಿ ಕೆಲಸ ಮಾಡುತ್ತಿದ್ದ 54 ಕಾಯಂ ನೌಕರರು ಶುಕ್ರವಾರ ಸಂಜೆ ಕೆಲಸ ಮುಗಿಸಿ ತೆರಳಿದ್ದಾರೆ. ಕಂಪನಿ ಶನಿವಾರ ಕಾರ್ಮಿಕರ ಬ್ಯಾಂಕ್ ಖಾತೆಗೆ ₹4 ಲಕ್ಷ ಪರಿಹಾರ ಹಣ ಹಾಕಿದೆ. ಇದು ಗಮನಕ್ಕೆ ಬರುತ್ತಿದ್ದಂತೆಯೇ ನೌಕರರು ಕಂಪನಿಯ ಮಾನವ ಸಂಪನ್ಮೂಲ ವಿಭಾಗವನ್ನು (ಎಚ್.ಆರ್) ಸಂಪರ್ಕಿಸಿದ್ದಾರೆ.

ಶನಿವಾರ ಮತ್ತು ಭಾನುವಾರ ರಜೆ ಇದ್ದ ಕಾರಣ ಎಚ್.ಆರ್ ಸಿಬ್ಬಂದಿ ಸಂಪರ್ಕಕ್ಕೆ ಸಿಕ್ಕಿರಲಿಲ್ಲ. ಸೋಮವಾರ ಕೆಲಸಕ್ಕೆ ಕರೆತರಲು ಕಂಪನಿಯ ವಾಹನ (ಕ್ಯಾಬ್) ಕೂಡ ಬಂದಿರಲಿಲ್ಲ. ಸ್ವಂತ ವಾಹನದಲ್ಲಿ ಬಂದ ನೌಕರರನ್ನು ಭದ್ರತಾ ಸಿಬ್ಬಂದಿ ಪ್ರವೇಶ ದ್ವಾರದಲ್ಲಿಯೇ ತಡೆದು ನಿಲ್ಲಿಸಿದ್ದಾರೆ. ಗೇಟ್‌ಗೆ ಬೀಗ ಜಡಿದು ನೌಕರರನ್ನು ಮರಳಿ ಕಳಿಸಿದ್ದಾರೆ.

‘ಪೂರ್ವಾನುಮತಿ ಇಲ್ಲದೆ ಯಾರೂ ಕಂಪನಿಯ ಆವರಣ ಪ್ರವೇಶಿಸುವಂತಿಲ್ಲ’ ಎಂದು ಪ್ರವೇಶ ದ್ವಾರದಲ್ಲಿ ಕಂಪನಿಯು ನೋಟಿಸ್ ಅಂಟಿಸಿದೆ. ಶೀಘ್ರದಲ್ಲಿಯೇ ಕಂಪನಿಯ ಪ್ರತಿನಿಧಿಗಳು ನೌಕರರೊಂದಿಗೆ ಮಾತನಾಡಲಿದ್ದಾರೆ ಎಂದು ಕಾರ್ಮಿಕರಿಗೆ ಮೌಖಿಕವಾಗಿ ತಿಳಿಸಲಾಗಿದೆ. ಬಿಡದಿ ಕೈಗಾರಿಕಾ ಪ್ರದೇಶದಲ್ಲಿರುವ ಬ್ರಿಟಾನಿಯ ಬಿಸ್ಕೆಟ್ ಕಾರ್ಖಾನೆ ವಾರದ ಹಿಂದೆ ಗುತ್ತಿಗೆ ನೌಕರರನ್ನು ಕೆಲಸದಿಂದ ತೆಗೆದು ಹಾಕಿತ್ತು. ಬ್ರಿಟಾನಿಯಾ ಗುತ್ತಿಗೆ ನೌಕರರು ಮುಷ್ಕರ ನಡೆಸುತ್ತಿದ್ದಾರೆ.

ರಾಜಭವನದ ಗಾಜಿನ ಮನೆಯಲ್ಲಿ ನಡೆದ ಸಮಾರಂಭ

61 ಮಂದಿಗೆ ರಾಷ್ಟ್ರಪತಿ ಪದಕ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೃಹರಕ್ಷಕ ದಳ, ಪೌರ ರಕ್ಷಣೆ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿ ಅತ್ಯುತ್ತಮ ಕೆಲಸ ಮಾಡಿದ 61 ಮಂದಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ರಾಷ್ಟ್ರಪತಿ ಪದಕ ಪ್ರದಾನ ಮಾಡಿದರು.

ರಾಜಭವನದ ಗಾಜಿನ ಮನೆಯಲ್ಲಿ ಸೋಮವಾರ ಆಯೋಜಿಸಿದ್ದ ಸಮಾರಂಭದಲ್ಲಿ 2022ನೇ ಸಾಲಿನ ಪದಕ ಪ್ರದಾನ ಮಾಡಿ ಪುರಸ್ಕೃತರನ್ನು ಅಭಿನಂದಿಸಲಾಯಿತು.



ರಾಷ್ಟ್ರಪತಿ ಪದಕ ಪುರಸ್ಕೃತ ಅಧಿಕಾರಿಗಳು ಹಾಗೂ ಸಿಬ್ಬಂದಿ, ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರೊಂದಿಗೆ ಫೋಟೊ ತೆಗೆಸಿಕೊಂಡರು. ಗೃಹ ಸಚಿವ ಆರಗ ಜ್ಞಾನೇಂದ್ರ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಡಿಜಿಪಿ ಅಮರ್‌ಕುಮಾರ್ ಪಾಂಡೆ ಹಾಗೂ ಇತರರು ಇದ್ದರು — ಪ್ರಜಾವಾಣಿ ಚಿತ್ರ

ರಾಜ್ಯಪಾಲ ಥಾವರಚಂದ್ ಗೆಹಲೋತ್, ‘ದೇಶದ ಭದ್ರತೆ, ಏಕತೆ ಮತ್ತು ಸಮಗ್ರತೆಯನ್ನು ಕಾಪಾಡುವ ಕೆಲಸವನ್ನು ಗೃಹರಕ್ಷಕ ದಳ, ಪೌರ ರಕ್ಷಣೆ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಮಾಡುತ್ತಿದೆ. ಇಲಾಖೆಯ ಅಧಿಕಾರಿ–ಸಿಬ್ಬಂದಿ ಇಂದಿನ ಯುವಜನತೆಗೆ ಸ್ಫೂರ್ತಿ’ ಎಂದರು.

‘ಕೋವಿಡ್, ಪ್ರವಾಹ, ಬೆಂಕಿ ಅವಘಡ, ವಾಯು ಅವಘಡ ಹಾಗೂ ನೈಸರ್ಗಿಕ ವಿಕೋಪಗಳು ಸಂಭವಿಸಿದಾಗ ಇಲಾಖೆಯ ಸಿಬ್ಬಂದಿ ಅತ್ಯುತ್ತಮ ಕೆಲಸ ಮಾಡಿದ್ದಾರೆ. ಮುಂದಿನ ದಿನಗಳಲ್ಲೂ ಅತ್ಯುತ್ತಮ ಕೆಲಸ ಮಾಡುವಂತಾಗಲಿ’ ಎಂದು ಅವರು ಹೇಳಿದರು.

‘ಅತ್ಯಾಧುನಿಕ ತಂತ್ರಜ್ಞಾನದ ಸಂಶೋಧನೆಗೆ ಇಸ್ರೊ ಆದ್ಯತೆ’

ಆರ್‌ಆರ್‌ಐ ಅಮೃತ ಮಹೋತ್ಸವದಲ್ಲಿ ಅಧ್ಯಕ್ಷ ಎಸ್‌. ಸೋಮನಾಥ್ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಧುನಿಕ ಬಾಹ್ಯಾಕಾಶ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಲು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಮುಂದಿನ ದಿನಗಳಲ್ಲಿ ಸಂಶೋಧನಾ ಚಟುವಟಿಕೆಗೆ ಆದ್ಯತೆ ನೀಡಲಿದೆ.

ಸೋಮವಾರ ನಗರದಲ್ಲಿ ನಡೆದ ರಾಮನ್ ಸಂಶೋಧನಾ ಸಂಸ್ಥೆಯ (ಆರ್‌ಆರ್‌ಐ) ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್, ‘ಇದುವರೆಗೆ ಉಪಗ್ರಹಗಳ ನಿರ್ಮಾಣ, ಉಡಾವಣೆ, ನಿರ್ವಹಣೆ ಸೇರಿದಂತೆ ವಿವಿಧ ಮಹತ್ವದ ಯೋಜನೆಗಳನ್ನು ಇಸ್ರೊ ಕೈಗೊಂಡಿದೆ. ಈ ಕಾರ್ಯಗಳನ್ನು ಮತ್ತಷ್ಟು ವಿಸ್ತರಿಸಲಾಗುತ್ತಿದ್ದು, ಸರ್ಕಾರದ ಸೂಚನೆಯಂತೆ ಬದಲಾವಣೆಗಳನ್ನು ತರಲಾಗುತ್ತಿದೆ’ ಎಂದು ತಿಳಿಸಿದರು.

‘ಇಸ್ರೊದ ನಿಯಮಿತ ಕಾರ್ಯಚಟುವಟಿಕೆ ಕೈಗೊಳ್ಳಲು ಬಾಹ್ಯಾಕಾಶ ಇಲಾಖೆಯ ಅಡಿಯಲ್ಲಿ ‘ನ್ಯೂ ಸ್ಪೇಸ್ ಇಂಡಿಯಾ ಲಿಮಿಟೆಡ್’ (ಎನ್‌ಎಸ್‌ಐಎಲ್) ಸ್ಥಾಪಿಸಲಾಗಿದೆ’ ಎಂದರು.

‘ಇಸ್ರೊ ಕೈಗೊಳ್ಳಲಿರುವ ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆ ಮುಂದಿನ ದಿನಗಳಲ್ಲಿ ಭಾರಿ ಬದಲಾವಣೆಗಳನ್ನು ತರಲಿದೆ. ಈ ಕಾರ್ಯದಲ್ಲಿ ರಾಮನ್ ಸಂಶೋಧನಾ ಸಂಸ್ಥೆಯಂತಹ ಮಹತ್ವದ ವೈಜ್ಞಾನಿಕ ಸಂಸ್ಥೆಗಳು ಕೈಜೋಡಿಸಬೇಕು. ಈ ಮೂಲಕ ವಿಜ್ಞಾನದ ಮೂಲ ಸಂಶೋಧನೆಯಲ್ಲಿ ಹೆಚ್ಚು ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ. ಇಸ್ರೊ ಅಭಿವೃದ್ಧಿಪಡಿಸಿರುವ ಅತ್ಯುತ್ತಮ ಪ್ರಯೋಗಾಲಯಗಳನ್ನು ವಿಜ್ಞಾನಿಗಳು ಸದುಪಯೋಗಪಡಿಸಿಕೊಳ್ಳಬೇಕು’ ಎಂದು ಹೇಳಿದರು.



ಬೆಂಗಳೂರಿನ ರಾಮನ್ ಸಂಶೋಧನಾ ಸಂಸ್ಥೆಯ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಇಸ್ರೊ ಅಧ್ಯಕ್ಷ ಎಸ್‌. ಸೋಮನಾಥ್ ಅವರು ಮಾಜಿ ಪ್ರಾಧ್ಯಾಪಕ ಪ್ರೊ. ರಾಜಾರಾಂ ನಿತ್ಯಾನಂದ (ಬಲತುದಿ) ಅವರಿಗೆ ಹಸ್ತಲಾಘವ ಮಾಡಿದರು. ಇಸ್ರೊ ಮಾಜಿ ಅಧ್ಯಕ್ಷ ಎ.ಎಸ್‌. ಕಿರಣ್‌ಕುಮಾರ್, ಆರ್‌ಆರ್‌ಐ ಅಧ್ಯಕ್ಷ ಪ್ರೊ. ತರುಣ್ ಸೌರದೀಪ್, ಇಸ್ರೊ ಮಾಜಿ ಅಧ್ಯಕ್ಷ ಕೆ. ಕಸ್ತೂರಿರಂಗನ್ ಇದ್ದರು. –ಪ್ರಜಾವಾಣಿ ಚಿತ್ರ

ವರ್ಚುವಲ್ ವ್ಯವಸ್ಥೆ ಮೂಲಕ ರಾಮನ್ ಸಂಶೋಧನಾ ಸಂಸ್ಥೆ ನಡೆದು ಬಂದ ದಾರಿ ಮತ್ತು ಭವಿಷ್ಯದಲ್ಲಿ ಕೈಗೊಳ್ಳಬೇಕಾದ ಸಂಶೋಧನಾ ಚಟುವಟಿಕೆಗಳನ್ನು ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಡಾ. ಶ್ರೀವರಿ ಚಂದ್ರಶೇಖರ್ ವಿಶ್ಲೇಷಿಸಿದರು.

‘ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ರಾಮನ್ ಸಂಶೋಧನಾ ಸಂಸ್ಥೆ ಪ್ರಮುಖ ಪಾತ್ರ ವಹಿಸಿದೆ. ಭವಿಷ್ಯದಲ್ಲಿಯೂ ಭಾರತೀಯ ವಿಜ್ಞಾನ ಕ್ಷೇತ್ರದ ಹಿರಿಮೆಯನ್ನು ಈ ಸಂಸ್ಥೆ ಹೆಚ್ಚಿಸುವ ವಿಶ್ವಾಸವಿದೆ’ ಎಂದರು.

‘ಆರೋಗ್ಯ ಕ್ಷೇತ್ರ ಸೇರಿ ಸಮಾಜಕ್ಕೆ ನೇರ ಪ್ರಯೋಜನವಾಗುವ ಸಂಶೋಧನಾ ಕಾರ್ಯಗಳನ್ನು ಆರ್‌ಆರ್‌ಐ ಕೈಗೊಳ್ಳಬೇಕು. ಈ ಮೂಲಕ ಸಂಶೋಧನೆ ಮತ್ತು ಆವಿಷ್ಕಾರದ ಕ್ಷೇತ್ರದಲ್ಲಿ ಆರ್‌ಆರ್‌ಐ ಜಾಗತಿಕ ಕೇಂದ್ರವಾಗಬೇಕು’ ಎಂದು ಹೇಳಿದರು.

ಆರ್‌ಆರ್‌ಐ ನಿರ್ದೇಶಕ ಪ್ರೊ. ತರುಣ್ ಸೌರದೀಪ್ ಮಾತನಾಡಿ, ’ಸಂಸ್ಥೆಗೆ ಸುದೀರ್ಘ ಇತಿಹಾಸವಿದೆ. ಈ ಬುನಾದಿ ಮೇಲೆ ಹೊಸ ಭವಿಷ್ಯವನ್ನು ನಿರ್ಮಿಸಬೇಕಾಗಿದೆ’ ಎಂದರು.

ಆರ್‌ಆರ್‌ಐನ ಮಾಜಿ ಪ್ರಾಧ್ಯಾಪಕ ಪ್ರೊ. ರಾಜಾರಾಮ್ ನಿತ್ಯಾನಂದ ಅವರು, ಸಂಸ್ಥೆಯು ಬೆಳೆದ ಬಂದ ದಾರಿ ಮತ್ತು ಸಂಶೋಧನಾ ಚಟುವಟಿಕೆಗಳ ಬಗ್ಗೆ ವಿವರಿಸಿದರು.

ಸಿ.ವಿ. ರಾಮನ್ ಸಂಸ್ಥೆಗೆ ಅಮೃತ ಮಹೋತ್ಸವ

ನೊಬೆಲ್ ಪ್ರಶಸ್ತಿ ಪುರಸ್ಕೃತ ವಿಜ್ಞಾನಿ ಸಿ.ವಿ. ರಾಮನ್ ಅವರು 1948ರಲ್ಲಿ ಸ್ಥಾಪಿಸಿರುವ ರಾಮನ್ ಸಂಶೋಧನಾ ಸಂಸ್ಥೆ ಇದೀಗ 75ನೇ ವರ್ಷಕ್ಕೆ ಕಾಲಿರಿಸಿದೆ. ಭೌತ ವಿಜ್ಞಾನದ ಕ್ಷೇತ್ರದಲ್ಲಿ ಮಹತ್ವದ ಸಂಶೋಧನೆಗಳನ್ನು ಈ ಸಂಸ್ಥೆ ನಿರಂತರವಾಗಿ ಕೈಗೊಳ್ಳುತ್ತಿದೆ. ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ 1971ರಿಂದ ಈ ಸಂಸ್ಥೆಗೆ ಅನುದಾನ ಒದಗಿಸುತ್ತಿದೆ.

ಅಮೃತ ಮಹೋತ್ಸವ ಅಂಗವಾಗಿ ಇಡೀ ಒಂದು ವರ್ಷದ ಅವಧಿಯಲ್ಲಿ ಐದು ಪ್ರಮುಖ ಅಂತರ-ರಾಷ್ಟ್ರೀಯ ಸಮ್ಮೇಳನಗಳು ಮತ್ತು ಭಾರತೀಯ ಮಹಿಳಾ ವಿಜ್ಞಾನಗಳ ಕುರಿತಾದ ಒಂದು ರಾಷ್ಟ್ರೀಯ ಸಮ್ಮೇಳನ ಹಾಗೂ ಉಪನ್ಯಾಸ ಸರಣಿಗಳನ್ನು ಸಂಸ್ಥೆ ಹಮ್ಮಿಕೊಳ್ಳಲಿದೆ.



‘ಫ್ಲೂಟ್ ಎನ್ ಫೀಟ್’ ಅಕಾಡೆಮಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾಸ್ಟರ್ ಪ್ರದ್ಯುಮ್ನ ಪ್ರಮೋದ್ ಕೊಳಲು ವಾದನ ನಡೆಸಿಕೊಟ್ಟರು. ವಿದ್ವಾನ್ ವಿವೇಕ ವಿ.ಕೃಷ್ಣ ಅವರ ಬಳಿ ಪ್ರದ್ಯುಮ್ನ ಕೊಳಲು ವಾದನ ಅಭ್ಯಾಸ ಮಾಡುತ್ತಿದ್ದಾರೆ.

ಆ್ಯಪ್ ಆಧಾರಿತ ಆಟೊರಿಕ್ಷಾ ಸೇವೆ

‘ನಾಲ್ಕು ವಾರ ಅವಕಾಶ ಕೊಡಿ’

ಬೆಂಗಳೂರು: ‘ಆ್ಯಪ್ ಆಧಾರಿತ ಆಟೊರಿಕ್ಷಾ ಸೇವೆಗೆ ನ್ಯಾಯಯುತ ದರ ವಿಧಿಸಬೇಕು ಎಂಬ ಬೇಡಿಕೆಗೆ ಸಂಬಂಧಿಸಿದಂತೆ ಓಲಾ ಮತ್ತು ಉಬರ್ ಕಂಪನಿಗಳ ಜೊತೆ ಸಹಮತ ಸಾಧಿಸಲು ಇನ್ನಷ್ಟು ಕಾಲಾವಕಾಶ ಬೇಕು’ ಎಂಬ ರಾಜ್ಯ ಸರ್ಕಾರದ ಮನವಿಯನ್ನು ಹೈಕೋರ್ಟ್ ಮಾನ್ಯ ಮಾಡಿದೆ.

‘ಆ್ಯಪ್ ಆಧಾರಿತ ಓಲಾ ಮತ್ತು ಉಬರ್ ಆಟೊರಿಕ್ಷಾ ಸೇವೆ ಸ್ಥಗಿತಗೊಳಿಸಬೇಕು ಎಂದು ರಾಜ್ಯ ಸರ್ಕಾರದ ಆದೇಶ ರದ್ದುಪಡಿಸಬೇಕು’ ಎಂದು ಕೋರಿ ಎಎನ್‌ಐ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಮತ್ತು ಉಬರ್ ಇಂಡಿಯಾ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಸಲ್ಲಿಸಿರುವ ಪ್ರತ್ಯೇಕ ಅರ್ಜಿಗಳನ್ನು ನ್ಯಾಯಮೂರ್ತಿ ಸಿ.ಎಂ. ಪೂಣಚ್ಚ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, ‘ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಪ್ರಕ್ರಿಯೆ ಆರಂಭಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದ ಎಲ್ಲರೊಂದಿಗೆ ಸಮಾಲೋಚನಾ ಸಭೆ ನಡೆಸಲಾಗಿದೆ. ಆದರೆ, ಒಮ್ಮತದ ನಿಲುವಿಗೆ ಬರಲಾಗಿಲ್ಲ. ಇದೇ 14 ಮತ್ತು 15ರಂದು ಸಂಚಾರಿ ಪೊಲೀಸರ ಜೊತೆ ಸಭೆ ನಡೆಸಲಾಗುತ್ತಿದೆ. ಇದಕ್ಕಾಗಿ 4 ವಾರ ಕಾಲಾವಕಾಶ ನೀಡಬೇಕು’ ಎಂದು ಕೋರಿದರು. ಏತನ್ಮಧ್ಯೆ, ಭಾರತ್ ಮೋಟಾರು ಸಾರಿಗೆ ಚಾಲಕರ ಸಂಘದ ಪರ ವಕೀಲ ಎನ್.ಪಿ. ಅಮೃತೇಶ್ ಹಾಜರಾಗಿ, ‘ಅರ್ಜಿ ಕುರಿತಂತೆ ನ್ಯಾಯಾಲಯ ನಿರ್ದೇಶನ ನೀಡಿತ್ತು. ಅದರಂತೆ ಸಾರಿಗೆ ಆಯುಕ್ತರು ಸಭೆ ಕರೆದಿದ್ದರು. ಆದರೆ, ಸಭೆಯಲ್ಲಿ ಓಲಾ, ಉಬರ್, ರೋಪ್ಪನ್ ಸರ್ವೀಸ್ ಸೇರಿದಂತೆ ಐವರು ಮಾತ್ರ ಭಾಗಿಯಾಗಿದ್ದರು. ಬೆಂಗಳೂರು ನಗರದಲ್ಲಿ 16 ಚಾಲಕ ಒಕ್ಕೂಟಗಳಿವೆ. ಸಮಾಲೋಚನಾ ಸಭೆಯಲ್ಲಿ ಸಾರ್ವಜನಿಕರನ್ನೂ ಭಾಗಿದಾರರನ್ನಾಗಿಸಬೇಕು. ಅದರಂತೆ ಅರ್ಜಿಯಲ್ಲಿ ತಮ್ಮ ಸಂಘವನ್ನು ಪ್ರತಿವಾದಿ ಮಾಡಬೇಕು’ ಎಂದು ಕೋರಿದರು.

‘ವಿವಾದ ಇತ್ಯರ್ಥಪಡಿಸಲು ಓಲಾ ಮತ್ತು ಉಬರ್ ಕಂಪನಿಗಳೊಂದಿಗೆ ಸಭೆ ನಡೆಸಿ ಒಮ್ಮತ ಸಾಧಿಸಿ ನವೆಂಬರ್ 7ರೊಳಗೆ ವರದಿ ಸಲ್ಲಿಸಿ’ ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಕಳೆದ ತಿಂಗಳ 13ರಂದು ನಿರ್ದೇಶಿಸಿತ್ತು. ವಿಚಾರಣೆಯನ್ನು ಇದೇ 16ಕ್ಕೆ ಮುಂದೂಡಲಾಗಿದೆ.

ಸಂಕ್ಷಿಪ್ತ ಸುದ್ದಿ

ಭಾಗೀರಥಿ ಹೆಗಡೆಗೆ ‘ಸರಳಾ ರಂಗನಾಥ ರಾವ್’ ಪ್ರಶಸ್ತಿ



ಬೆಂಗಳೂರು: 2021ನೇ ಸಾಲಿನ ‘ಸರಳಾ ರಂಗನಾಥ ರಾವ್ ಪ್ರಶಸ್ತಿ’ಗೆ ಶಿರಸಿಯ ಲೇಖಕಿ ಭಾಗೀರಥಿ ಹೆಗಡೆ ಆಯ್ಕೆಯಾಗಿದ್ದಾರೆ.

ಸರಳಾ ರಂಗನಾಥ ರಾವ್ ಸ್ಮಾರಕ ಪ್ರತಿಷ್ಠಾನವು ಈ ಪ್ರಶಸ್ತಿಯನ್ನು ನೀಡುತ್ತಿದೆ. ಸಾಹಿತ್ಯ, ಕಲೆಗಳಲ್ಲಿ ಮಹಿಳೆಯರನ್ನು ಪ್ರೋತ್ಸಾಹಿಸುವ ಉದ್ದೇಶದ ಈ ಪ್ರಶಸ್ತಿಯು ₹10 ಸಾವಿರ ನಗದು, ಶಾಲು ಮತ್ತು ಸ್ಮರಣ ಫಲಕಗಳನ್ನು ಒಳಗೊಂಡಿದೆ.

ಭಾಗೀರಥಿ ಅವರ ಕಾಲಾಂತರ (ಕಾದಂಬರಿ) ಪ್ರಶಸ್ತಿಗೆ ಭಾಜನವಾಗಿದೆ. ವಿಮರ್ಶಕಿ ಎಲ್.ಜಿ.ಮೀರಾ, ಕವಿ ಡಾ.ಎಚ್.ಎಸ್.ವೆಂಕಟೇಶ ಮೂರ್ತಿ ಮತ್ತು ಜಿ.ಎನ್.ರಂಗನಾಥ ರಾವ್ ತೀರ್ಪುಗಾರರಾಗಿದ್ದರು.

ಪ್ರಶಸ್ತಿಯನ್ನು 2023ರ ಜನವರಿ ತಿಂಗಳಿನಲ್ಲಿ ಪ್ರದಾನ ಮಾಡಲಾಗುವುದು ಎಂದು ಪ್ರತಿಷ್ಠಾನದ ಕಾರ್ಯಾಧ್ಯಕ್ಷ ರಂಗನಾಥರಾವ್ ತಿಳಿಸಿದ್ದಾರೆ.

ಅಪಘಾತ: ಭಾಸ್ಕರ ದಾಸ್ ಎಕ್ಕಾರು ಸಾವು



ಮೂಲ್ಕಿ (ದಕ್ಷಿಣ ಕನ್ನಡ): ಅಲೆಮಾರಿ ಸಮುದಾಯಗಳ ಹೋರಾಟಗಾರ, ಆರ್‌ಎಸ್‌ಎಸ್ ದಕ್ಷಿಣ ಪ್ರಾಂತ್ಯದ ಧರ್ಮ ಜಾಗರಣದ ಸಮನ್ವಯ ಪರಿಯೋಜನಾ ಪ್ರಮುಖ ಭಾಸ್ಕರ ದಾಸ್ ಎಕ್ಕಾರು (66) ಕುಣಿಗಲ್‌ನಲ್ಲಿ ಸಂಭವಿಸಿದ್ದ ಅಪಘಾತದಲ್ಲಿ ಸಾವಿಗೀಡಾಗಿದ್ದಾರೆ. ಅವರಿಗೆ ತಾಯಿ, ಪತ್ನಿ ಮತ್ತು ಮೂವರು ಪುತ್ರರು ಇದ್ದಾರೆ.

ಶನಿವಾರ ಕಾರಿನಲ್ಲಿ ಮಂಗಳೂರಿಗೆ ಬರುವಾಗ ಕುಣಿಗಲ್‌ನಲ್ಲಿ ಅಪಘಾತವಾಗಿತ್ತು. ಗಂಭೀರ ಗಾಯಗೊಂಡ ಭಾಸ್ಕರ ದಾಸ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಭಾನುವಾರ ಸಂಜೆ ಅವರು ಕೊನೆಯುಸಿರೆಳೆದರು.

ಕೊಂಬೊಡಿಯ ಗದ್ದೆಯಲ್ಲಿ ಅಂತ್ಯಸಂಸ್ಕಾರ ನಡೆಯಿತು.

‘ವಂದೇ ಭಾರತ್’ ಎಕ್ಸ್‌ಪ್ರೆಸ್‌ಗೆ ಸ್ವಾಗತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರೀಕ್ಷಾರ್ಥ ಸಂಚಾರ ಆರಂಭಿಸಿರುವ ‘ವಂದೇ ಭಾರತ್’ ಎಕ್ಸ್‌ಪ್ರೆಸ್ ಸೋಮವಾರ ಬೆಳಿಗ್ಗೆ 10.21ಕ್ಕೆ ಬೆಂಗಳೂರಿಗೆ ಬಂದಿತು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ(-ಕೆಎಸ್‌ಆರ್) ರೈಲು ನಿಲ್ದಾಣಕ್ಕೆ ಬಂದ ರೈಲನ್ನು ಪ್ರಯಾಣಿಕರು ಮತ್ತು ಸಿಬ್ಬಂದಿ ಕರತಾಡನದೊಂದಿಗೆ ಸ್ವಾಗತಿಸಿದರು.

5.50ಕ್ಕೆ ಚೆನ್ನೈನಿಂದ ಹೊರಟ ರೈಲು, ಕಟ್ಪಾಡಿಯಲ್ಲಿ ನಿಲುಗಡೆಯಾಗಿ ಅಲ್ಲಿಂದ ನೇರವಾಗಿ ಕೆಎಸ್‌ಆರ್ ರೈಲು ನಿಲ್ದಾಣಕ್ಕೆ ಬಂದಿತು. ರೈಲಿನೊಳಗೆ ಪ್ರವೇಶಿಸಲು ಅಧಿಕಾರಿಗಳಿಗೆ ಮಾತ್ರ ಅವಕಾಶ ಇತ್ತು. ನೆರೆದಿದ್ದ ಪ್ರಯಾಣಿಕರು ರೈಲಿನೊಂದಿಗೆ ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು.

10.30ಕ್ಕೆ ಮೈಸೂರು ಕಡೆಗೆ ರೈಲು ಪ್ರಯಾಣ ಬೆಳೆಸಿತು. ಮಧ್ಯಾಹ್ನ ಮೈಸೂರಿನಿಂದ ಹೊರಟ ರೈಲು, 2.45ಕ್ಕೆ ಮತ್ತೆ ಕೆಎಸ್‌ಆರ್ ನಿಲ್ದಾಣ ಪ್ರವೇಶಿಸಿತು. 15 ನಿಮಿಷ ನಿಲುಗಡೆಯಾಗಿ ಮಧ್ಯಾಹ್ನ 3 ಗಂಟೆಗೆ ಚೆನ್ನೈನತ್ತ ಪ್ರಯಾಣ ಬೆಳೆಸಿತು.



ಚೆನ್ನೈ – ಬೆಂಗಳೂರು – ಮೈಸೂರು ವಂದೇಭಾರತ್ ಎಕ್ಸ್‌ಪ್ರೆಸ್ ಸೋಮವಾರ ಮಧ್ಯಾಹ್ನ 12.13ಕ್ಕೆ ಮೈಸೂರಿಗೆ ಆಗಮಿಸಿತು – ಪ್ರಜಾವಾಣಿ ಚಿತ್ರ

ಡಾ.ಚಂದ್ರಶೇಖರ ಕಂಬಾರ ಅಭಿಮತ

ಇಂಗ್ಲಿಷ್‌ನಿಂದ 128 ಭಾಷೆಗಳ ಆಪೋಷನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಲಿತರೂ ಸೇರಿದಂತೆ ಎಲ್ಲ ವರ್ಗದ ಜನರಿಗೆ ಅಕ್ಷರ ಕಲಿಯುವ ಅವಕಾಶ ಕಲ್ಪಿಸಿದ್ದು ಮೆಕಾಲೆ ಶಿಕ್ಷಣ ನೀತಿಯ ಹೆಗ್ಗಳಿಕೆಯಾದರೂ, ದೇಶದ 128 ಭಾಷೆಗಳ ಅಸ್ಮಿತೆಯನ್ನೇ ಆಪೋಷನ ತೆಗೆದುಕೊಂಡಿದ್ದು ಕಳವಳಕಾರಿ ವಿಚಾರ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಚಂದ್ರಶೇಖರ ಕಂಬಾರ ಹೇಳಿದರು.

ಬಿಎಂಎಸ್ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಸೋಮವಾರ ಹಮ್ಮಿಕೊಂಡಿದ್ದ ನುಡಿ ಸಂಭ್ರಮ–ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದೇಶದಲ್ಲಿ ಎರಡು ಕ್ರಾಂತಿಗಳಾಗಿವೆ. ಒಂದು ವಚನ ಕ್ರಾಂತಿ, ಮತ್ತೊಂದು ಮೆಕಾಲೆ ಶಿಕ್ಷಣ ಕ್ರಾಂತಿ. ಮೊದಲು ದೇವರನ್ನು ಸಂಸ್ಕೃತದಲ್ಲೇ ಮಾತನಾಡಿಸುವ ಪರಿಪಾಟವಿತ್ತು. ಸ್ಥಳೀಯ ಭಾಷೆಯಲ್ಲೇ ದೇವರ ಜತೆ ಸಂಭಾಷಣೆ ನಡೆಸುವ ಸಾಮರ್ಥ್ಯವನ್ನು ವಚನ ಚಳವಳಿ ಸಾಮಾನ್ಯರಿಗೂ ನೀಡಿತು. ಮೆಕಾಲೆ ಶಿಕ್ಷಣ ನೀತಿ ಕೋಟ್ಯಂತರ ಅನಕ್ಷರಸ್ಥರಿಗೆ ಅಕ್ಷರ ಜ್ಞಾನ ನೀಡಿತು. ಜನ್ಮವೃತ್ತಾಂತದ ಸುತ್ತ ಇದ್ದ ಜ್ಞಾನವನ್ನು ಇತಿಹಾಸದತ್ತ ತಿರುಗಿಸಿತು. ಎಲ್ಲ ಭಾಷೆಯ ಜನರೂ ಇಂಗ್ಲಿಷ್ ದಾಸರಾಗಿದ್ದಾರೆ. ಪ್ರಾದೇಶಿಕ ಭಾಷೆಗಳ ವಿನಾಶಕ್ಕೂ ಕಾರಣರಾಗುತ್ತಿದ್ದಾರೆ ಎಂದು ವಿಶ್ಲೇಷಿಸಿದರು.

ಭಾರತದಂತಹ ವೈವಿಧ್ಯದ ರಾಷ್ಟ್ರವನ್ನು ಜಗತ್ತಿನ ಎಲ್ಲೂ ಕಾಣಲು ಸಾಧ್ಯವಿಲ್ಲ. 33 ಕೋಟಿ ದೇವರು, 64 ಸಾವಿರ ಜಾತಿಗಳು, 128 ಭಾಷೆಗಳು, 8 ಕ್ಯಾಲೆಂಡರ್ ಒಳಗೊಂಡ ಈ ನೆಲದಲ್ಲಿ ಎಲ್ಲರೂ ಆನಂದಮಯವಾಗಿ ಬದುಕುತ್ತಿರುವುದೇ ದೊಡ್ಡ ಪವಾಡ. ಇಂತಹ ಪವಾಡವನ್ನು ಪ್ರತ್ಯಕ್ಷವಾಗಿ ಕಾಣಲು ವಿದೇಶಗಳ ಹಲವರು ದೇಶಕ್ಕೆ ಬಂದಿದ್ದಾರೆ. ಉಳಿದ ಎಲ್ಲ ವೈವಿಧ್ಯ ಇಂದು ಜೀವಂತವಾಗಿದ್ದರೂ, ಭಾಷಾ ವೈವಿಧ್ಯ ವಿನಾಶದತ್ತ ಸಾಗಿದೆ ಎಂದರು.

ಕವಿ ಎಚ್.ಎಸ್.ವೆಂಕಟೇಶ ಮೂರ್ತಿ, ‘ಬಿಎಂಎಸ್ ಕಾಲೇಜಿನಲ್ಲಿ ಇಂದಿಗೂ ಕನ್ನಡದ ವಾತಾವರಣ ಜೀವಂತವಾಗಿರುವುದು ಸಂತಸದ ವಿಷಯ. ಕವಿತೆಗಳಿಗೆ ಎಲ್ಲ ಕಾಲಮಾನವನ್ನೂ ಒಗ್ಗೂಡಿಸುವ ಶಕ್ತಿ ಇದೆ. ಕನ್ನಡದ ಭಾವಗೀತೆ, ಸ್ವರಸಂಪತ್ತು ಹೃದಯ ತಣಿಸುತ್ತದೆ. ಮನಸ್ಸಿಗೆ ಆಹ್ಲಾದ ಮೂಡಿಸುತ್ತದೆ’ ಎಂದರು.

ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್, ಬಿಎಂಎಸ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಅವಿರಾಮ್ ಶರ್ಮ, ಪ್ರಾಂಶುಪಾಲ ಪಂಕಜ್ ಚೌದರಿ, ಬಿ.ಎಸ್.ರಾಗಿಣಿ ನಾರಾಯಣ್, ಪ್ರಾಧ್ಯಾಪಕಿ ಸೌಮ್ಯಾ ಉಪಸ್ಥಿತರಿದ್ದರು.

ತಾವೇ ಬರೆದ ಹಾಡಿಗೆ ತಲೆದೂಗಿದ ಕವಿ

ಎಚ್.ಎಸ್.ವೆಂಕಟೇಶಮೂರ್ತಿ ಅವರು ಬರೆದ ‘ಲೋಕದ ಕಣ್ಣಿಗೆ ರಾಧೆಯು ಕೂಡ ಎಲ್ಲರಂತೆ ಒಂದು ಹೆಣ್ಣು’ ಹಾಡನ್ನು ವಿದ್ಯಾರ್ಥಿನಿ ಸುನಿಧಿ ಹಾಡಿದರು. ಅವರ ಹಾಡು ಮುಗಿಯುವವರೆಗೂ, ಧ್ಯಾನಸ್ಥ ಸ್ಥಿತಿಯಲ್ಲಿ ಆಲಿಸಿದ ಕವಿ ಎಚ್‌ಎಸ್‌ವಿ ಭಾವುಕರಾದರು.

‘ಬರೆಯುವಾಗ ಸಾಮಾನ್ಯ ಕವಿತೆಯಾಗಿರುತ್ತದೆ. ಭಾವ, ಸಂಗೀತ ಬೆರೆತು ಹಾಡಾಗಿ ಹೊಮ್ಮಿದಾಗ ಆಗುವ ಆನಂದವೇ ಬೇರೆ. ಇದು ಒಂದು ರೀತಿ ಕವಿಯ ಸ್ವಾರ್ಥವೂ ಹೌದು’ ಎಂದು ಪ್ರತಿಕ್ರಿಯಿಸಿದರು. ಕಾಲೇಜಿನ ವಿದ್ಯಾರ್ಥಿಗಳು ಪ್ರದರ್ಶಿಸಿದ ಡೊಳ್ಳುಕುಣಿತ, ಡಿ.ಎಸ್.ಕರ್ಕಿ ಅವರ ಹಚ್ಚೇವು ಕನ್ನಡದ ದೀಪ, ಕಂಬಾರರು ಬರೆದ ಕವಿತೆಯ ಹಾಡುಗಳು ಗಮನ ಸೆಳೆದವು.

ಅಭಿನಂದನೆ ನೆಪದಲ್ಲಿ ಕಾಂಗ್ರೆಸ್ ಟಿಕೆಟ್‌ಗೆ ಆಕಾಂಕ್ಷಿಗಳ ದುಂಬಾಲು

ಖರ್ಗೆ ನಿವಾಸಕ್ಕೆ ನಾಯಕರ ದಂಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಕಾರ್ಯಕರ್ತರು, ವಿಧಾನಸಭೆ ಚುನಾವಣೆಯ ಟಿಕೆಟ್ ಆಕಾಂಕ್ಷಿಗಳ ದಂಡು ಮಲ್ಲಿಕಾರ್ಜುನ ಖರ್ಗೆ ಅವರ ಸದಾಶಿವನಗರದಲ್ಲಿರುವ ನಿವಾಸಕ್ಕೆ ಸೋಮವಾರ ಹರಿದು ಬಂತು. ಎಐಸಿಸಿ ಚುಕ್ಕಾಣಿ ಹಿಡಿದ ಬಳಿಕ ಮೊದಲ ಬಾರಿಗೆ ರಾಜ್ಯಕ್ಕೆ ಭಾನುವಾರ ಬಂದಿದ್ದ ಖರ್ಗೆ ಅವರನ್ನು ಅಭಿನಂದಿಸುವ ನೆಪದಲ್ಲಿ ಭೇಟಿ ಮಾಡಿದ ನಾಯಕರ ಪೈಕಿ ಕೆಲವರು ಮುಂದಿನ ಚುನಾವಣೆಯಲ್ಲಿ ಟಿಕೆಟ್ ನೀಡುವಂತೆ ದುಂಬಾಲು ಬಿದ್ದರು.

ಮಾಜಿ ವಿಧಾನಸಭಾಧ್ಯಕ್ಷ ಕೆ.ಬಿ. ಕೋಳಿವಾಡ ಅವರು ಪುತ್ರ ಪ್ರಕಾಶ್ ಜೊತೆ ಖರ್ಗೆ ಅವರನ್ನು ಭೇಟಿ ಮಾಡಿದರು. ಈ ವೇಳೆ ಮಾತನಾಡಿದ ಕೋಳಿವಾಡ, 'ಎಐಸಿಸಿ ಅಧ್ಯಕ್ಷರಾದ ಬಳಿಕ ರಾಜ್ಯ ಕಾಂಗ್ರೆಸ್‌ಗೆ ಹೆಚ್ಚಿನ ಶಕ್ತಿ ಬಂದಿದೆ. ನಮ್ಮ ಪಕ್ಷ 2023ರ ಚುನಾವಣೆಯಲ್ಲಿ ಖಂಡಿತವಾಗಿಯೂ ಬಹುಮತ ಪಡೆಯಲಿದೆ. 2024ರಲ್ಲಿ ರಾಷ್ಟ್ರದಲ್ಲಿಯೂ ಅಧಿಕಾರಕ್ಕೆ ಬರುವ ನಿರೀಕ್ಷೆ ಇದೆ. ನಮ್ಮಲ್ಲಿ ಯಾವ ಬಣ ರಾಜಕೀಯವೂ ಇಲ್ಲ' ಎಂದರು.

'ಯುವಕರಿಗೆ, ಮಹಿಳೆಯರಿಗೆ ಟಿಕೆಟ್ ಕೊಡೋಣ ಎಂದೂ ಹೇಳಿದ್ದಾರೆ. ಯುವಕರು ರಾಜಕೀಯಕ್ಕೆ ಬಂದರೆ ತಪ್ಪೇನಿದೆ? ಹಿರಿಯರಿಗೆ ಟಿಕೆಟ್ ತಪ್ಪ ಬಹುದು ಅಷ್ಟೆ. ನಾನು ಅಥವಾ ನನ್ನ ಮಗನಿಗೆ ಟಿಕೆಟ್ ಕೇಳುತ್ತೇನೆ. ಇಬ್ಬರಲ್ಲಿ ಯಾರಿಗೆ ಕೊಡುತ್ತಾರೋ ನೋಡೋಣ' ಎಂದರು.

150 ಸ್ಥಾನಗಳ ಗುರಿ: ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಮಾತನಾಡಿ, '2023ರ ಚುನಾವಣೆಯಲ್ಲಿ 150 ಸ್ಥಾನ ಗೆಲ್ಲಬೇಕೆಂದು ರಾಜ್ಯ ನಾಯಕರಿಗೆ ರಾಹುಲ್ ಗಾಂಧಿ ಗುರಿ ನೀಡಿದ್ದಾರೆ. ಎಐಸಿಸಿ ಅಧ್ಯಕ್ಷರು ಕೂಡಾ ಇದೇ ಗುರಿ ನೀಡಿದ್ದಾರೆ. ಪಕ್ಷವನ್ನು ಅಧಿಕಾರಕ್ಕೆ ತರುವಂತೆ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಇಬ್ಬರಿಗೂ ಮಲ್ಲಿಕಾರ್ಜುನ ಖರ್ಗೆ ಸೂಚನೆ ನೀಡಿದ್ದಾರೆ. ಸಣ್ಣಪುಟ್ಟ ಭಿನ್ನಾಭಿಪ್ರಾಯ ಇರುವುದು ಸಹಜ. ಅದನ್ನು ಸರಿಪಡಿಸಿಕೊಂಡು ಪಕ್ಷ ಅಧಿಕಾರಕ್ಕೆ ತರುತ್ತೇವೆ' ಎಂದು ಅವರು ಹೇಳಿದರು.

'ಮಲ್ಲಿಕಾರ್ಜುನ ಖರ್ಗೆ ಕೇವಲ ದಲಿತ ಸಮುದಾಯದ ನಾಯಕರಲ್ಲ. ಆದರೆ, ಅವರ ನೇತೃತ್ವದಿಂದ ಮುಂದಿನ ಚುನಾವಣೆಯಲ್ಲಿ ದಲಿತ ಮತಗಳು ಪಕ್ಷಕ್ಕೆ ಹೆಚ್ಚು ಬರುವ ನಿರೀಕ್ಷೆ ಇದೆ. ಕಾಂಗ್ರೆಸ್ ಪಕ್ಷದಿಂದ ಸಮಾವೇಶ ಆಯೋಜಿಸುವ ಬಗ್ಗೆ ಚರ್ಚೆ ನಡೆಯುತ್ತಿದೆ' ಎಂದು ಅವರು ತಿಳಿಸಿದರು.

ಅಲ್ಲಂ ವೀರಭದ್ರಪ್ಪ, ಮಾರ್ಗರೇಟ್ ಆಳ್ವಾ, ಬಿ.ಎಲ್. ಶಂಕರ್, ಮಲ್ಲಾಜಮ್ಮ ಸೇರಿದಂತೆ ಹಲವರು ಖರ್ಗೆ ಅವರನ್ನು ಭೇಟಿ ಮಾಡಿ ಹೂಗುಚ್ಛ ನೀಡಿ ಅಭಿನಂದಿಸಿದರು.

ಒಗ್ಗಟ್ಟಿನಿಂದ ಕೆಲಸ– ಖರ್ಗೆ ವಿಶ್ವಾಸ

ದೆಹಲಿಗೆ ಸೋಮವಾರ ಸಂಜೆ ತೆರಳುವ ಮೊದಲು ಸುದ್ದಿಗಾರರ ಜೊತೆ ಮಾತನಾಡಿದ ಮಲ್ಲಿಕಾರ್ಜುನ ಖರ್ಗೆ, 'ರಾಜ್ಯದಲ್ಲಿ ಪಕ್ಷದ ನಾಯಕರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಒಗ್ಗಟ್ಟಿನ ಹೋರಾಟ ಮಾಡುವಂತೆ ಎಲ್ಲ ನಾಯಕರಿಗೂ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಪಕ್ಷಕ್ಕಾಗಿ ಎಲ್ಲರೂ ಕೆಲಸ ಮಾಡುತ್ತೇವೆಂದು ಹೇಳಿದ್ದಾರೆ. ಎಲ್ಲರೂ ಸಹಕಾರ ನೀಡುತ್ತಾರೆಂಬ ವಿಶ್ವಾಸವಿದೆ' ಎಂದರು.

ಬಾಲ ಮಂದಿರದಲ್ಲಿ ತಬ್ಬಲಿ ಬಾಲಕಿಗೆ ಆಶ್ರಯ

ಪ್ರಜಾವಾಣಿ ವಾರ್ತೆ

ತುಮಕೂರು: ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಸಿಗದೆ ಹೆರಿಗೆ ವೇಳೆ ಸಾವನ್ನಪ್ಪಿದ ತಮಿಳುನಾಡು ಮೂಲದ ಕಸ್ತೂರಿ ಎಂಬ ಮಹಿಳೆಯ ಆರು ವರ್ಷದ ಅನಾಥ ಹೆಣ್ಣು ಮಗಳಿಗೆ ನಗರದ ಬಾಲಕಿಯರ ಬಾಲಮಂದಿರದಲ್ಲಿ ಆಶ್ರಯ ನೀಡಲಾಗಿದೆ.

ತಮಿಳುನಾಡಿನಿಂದ ಬಂದಿದ್ದ ಮಹಿಳೆಯ ಸಂಬಂಧಿಕರು ನಗರದಲ್ಲೇ ಅಂತ್ಯಕ್ರಿಯೆ ನೆರವೇರಿಸಿ ತೆರಳಿದ್ದಾರೆ. ಅಂತ್ಯಕ್ರಿಯೆ ಸಮಯದಲ್ಲಿ ಬಾಲ ಮಂದಿರದಿಂದ ಬಾಲಕಿಯನ್ನು ಕರೆತರಲಾಗಿತ್ತು. ಬಾಲಕಿ ಜತೆ ಮಾತನಾಡಿದ್ದ ಸಂಬಂಧಿಕರು ತಮ್ಮೊಂದಿಗೆ ಆಕೆಯನ್ನು ಕರೆದುಕೊಂಡು ಹೋಗುವ ಇಚ್ಛೆ ವ್ಯಕ್ತಪಡಿಸಿದ್ದರು.

ಕೆಲವು ಪ್ರಕ್ರಿಯೆ ಪೂರ್ಣಗೊಂಡ ನಂತರವಷ್ಟೇ ಬಾಲಕಿಯನ್ನು ಕಳುಹಿಸಿ ಕೊಡಲಾಗುವುದು ಎಂದು ಅಧಿಕಾರಿಗಳು ಹೇಳಿದ್ದರು. ನಿಯಮದ ಪ್ರಕಾರ ಅನಾಥ ಬಾಲಕಿಯನ್ನು ಮಕ್ಕಳ ಕಲ್ಯಾಣ ಸಮಿತಿ (ಸಿಡಬ್ಲ್ಯುಸಿ) ಮುಂದೆ ಮಕ್ಕಳ ರಕ್ಷಣಾಧಿಕಾರಿ ಹಾಜರು ಪಡಿಸುತ್ತಾರೆ. ವಿಚಾರಣೆ ನಂತರ ಸಮಿತಿಯು ಮಗುವಿನ ಪೋಷಣೆಯ ಜವಾಬ್ದಾರಿಯನ್ನು ಬಾಲ ಮಂದಿರಕ್ಕೆ ವಹಿಸುತ್ತದೆ. ಸಂಬಂಧಿಕರು ಮಗುವನ್ನು ಸುಪರ್ದಿಗೆ ಪಡೆಯಲು ಸಮಿತಿಗೆ ಅರ್ಜಿ ಸಲ್ಲಿಸಬೇಕು. ಮಗುವಿನ ಸುರಕ್ಷತೆ ಸಮಿತಿಗೆ ಖಾತರಿಯಾದ ನಂತರವಷ್ಟೇ ಸಂಬಂಧಿಗಳ ಸುಪರ್ದಿಗೆ ಒಪ್ಪಿಸಲಾಗುತ್ತದೆ. ಆ ನಂತರವೂ ಕೆಲ ವರ್ಷ ಸಮಿತಿಯು ಮಗುವಿನ ಸುರಕ್ಷತೆ ನಿಗಾ ವಹಿಸುತ್ತದೆ.

ಬಾಲಕಿ ಹೊರ ರಾಜ್ಯವಳಾದ ಕಾರಣ ಅಲ್ಲಿನ ಅಧಿಕಾರಿಗಳಿಗೆ ಸಮಿತಿ ಪತ್ರ ಬರೆದಿದೆ. ಅಧಿಕಾರಿಗಳು ಸಂಬಂಧಿಕರನ್ನು ಪತ್ತೆಮಾಡಿ ಖಚಿತ ಪಡಿಸಿಕೊಳ್ಳುತ್ತಾರೆ. ಮಗುವಿನ ಸುರಕ್ಷಿತೆ ಬಗ್ಗೆ ಮನದಟ್ಟಾದ ನಂತರ ವರದಿ ಕಳುಹಿಸುತ್ತಾರೆ. ವರದಿ ನಂತರ ಮಕ್ಕಳ ಕಲ್ಯಾಣ ಸಮಿತಿ ಮುಂದಿನ ನಿರ್ಧಾರ ಕೈಗೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ.

'ದಾಳಿಗೆ ಯತ್ನಿಸಿದರೆ ಆನೆಗೆ ಗುಂಡು ಹೊಡೆಯುವೆ'

ಉನ್ನತ ಮಟ್ಟದ ಸಮಿತಿ ಎದುರು ವಿಶ್ವನಾಥ್ ಆಕ್ರೋಶ



ಕಾಡಾನೆ ಹಾವಳಿ ಬಾಧಿತ ಸಕಲೇಶಪುರ ತಾಲ್ಲೂಕಿನ ಗ್ರಾಮಗಳಿಗೆ ಸೋಮವಾರ ಭೇಟಿ ನೀಡಿದ ಉನ್ನತ ಮಟ್ಟದ ಸಮಿತಿಯ ನೇತೃತ್ವ ವಹಿಸಿರುವ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರಾಜ್‌ಕಿಶೋರ್ ಸಿಂಗ್ ಅವರು ಗ್ರಾಮಸ್ಥರಿಂದ ಮಾಹಿತಿ ಪಡೆದರು.

ಪ್ರಜಾವಾಣಿ ವಾರ್ತೆ

ಸಕಲೇಶಪುರ (ಹಾಸನ): 'ಕಾಡಾನೆಗಳು ತೋಟಕ್ಕೆ ಬಂದು, ನನ್ನ ಮೇಲೆ ದಾಳಿಗೆ ಯತ್ನಿಸಿದರೆ, ಡಬಲ್ ಬ್ಯಾರೆಲ್ ಬಂದೂಕಿನಿಂದ ನೇರವಾಗಿ ಗುಂಡು ಹೊಡೆಯುತ್ತೇನೆ...'

–ಕಾಡಾನೆ ಸಮಸ್ಯೆ ಪರಿಹಾರ ಕುರಿತು ಪರಿಶೀಲನೆಗೆ ಬಂದಿದ್ದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರಾಜ್‌ಕಿಶೋರ್ ಸಿಂಗ್ ನೇತೃತ್ವದ ಉನ್ನತ ಮಟ್ಟದ ಸಮಿತಿಯ ಎದುರು ಬಿಜೆಪಿ ಮುಖಂಡ ಎಚ್.ಎಂ.ವಿಶ್ವನಾಥ್ ಹೀಗೆ ಆಕ್ರೋಶ ವ್ಯಕ್ತಪಡಿಸಿದರು.

ಎಂಟು ಸದಸ್ಯರುಳ್ಳ ಸಮಿತಿಯು ತಾಲ್ಲೂಕಿನ ಬೆಳಗೋಡು ಗ್ರಾಮದ ಸಾರ್ವಜನಿಕರ ಜೊತೆ ನಡೆಸಿದ ಸಭೆಯಲ್ಲಿ ಮಾತನಾಡಿದ ಅವರು, 'ಆನೆಗಳಿಗೆ ರೇಡಿಯೊ ಕಾಲರ್ ಅಳವಡಿಸುವುದು, ದಾಳಿಯಿಂದ ಮೃತಪಟ್ಟವರಿಗೆ, ಬೆಳೆ ಹಾನಿಯಾದವರಿಗೆ ಹೆಚ್ಚಿನ ಪರಿಹಾರ ಕೊಡುವ ಕಥೆಯನ್ನೆಲ್ಲ ಮತ್ತೆ ಹೇಳಬೇಡಿ. ಎಲ್ಲ ಆನೆಗಳನ್ನು ಕೂಡಲೇ ಸ್ಥಳಾಂತರಿಸಬೇಕು ಎಂಬ ಒಂದೇ ಶಿಫಾರಸಿನ ವರದಿಯನ್ನು ಸರ್ಕಾರಕ್ಕೆ ನೀಡಬೇಕು' ಎಂದು ಒತ್ತಾಯಿಸಿದರು.

'ಪ್ರತಿ ತಿಂಗಳೂ ಕಾಡಾನೆಗಳ ದಾಳಿಯಿಂದ ಅಮಾಯಕರು ಜೀವ ಕಳೆದುಕೊಳ್ಳುತ್ತಿದ್ದರೂ ಅವರ ಸಂಖ್ಯೆಯನ್ನು ಎಣಿಸುತ್ತ, ಜೀವ ಭಯದಲ್ಲೇ ಜೀವನ ನಡೆಸಬೇಕಾ? ಮಲೆನಾಡಿನ ಜನರ ತಾಳ್ಮೆ ಪರೀಕ್ಷಿಸಬೇಡಿ' ಎಂದರು.

ಶಾಸಕ ಎಚ್.ಕೆ.ಕುಮಾರಸ್ವಾಮಿ ಮಾತನಾಡಿ, 'ಮಲೆನಾಡಿನಲ್ಲಿ ಕಾಡಾನೆಗಳ ಸಮಸ್ಯೆ ಈ ಮಟ್ಟಕ್ಕೆ ಉಲ್ಬಣಿಸಲು ಅಧಿಕಾರಿಗಳೇ ನೇರ ಹೊಣೆ. ಗಂಭೀರತೆಯನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಡುವಲ್ಲಿ ವಿಫಲರಾಗಿದ್ದಾರೆ' ಎಂದು ಆರೋಪಿಸಿದರು.

'ಮನೆಯ ಸುತ್ತ ಎಂಟು ಕಾಡಾನೆಗಳು ಅಡ್ಡಾಡುತ್ತಿವೆ. ಹೊರಗೆ ಬರುವುದಕ್ಕೆ ಆಗುತ್ತಿಲ್ಲ. ಕಾಫಿ ಕೊಯ್ಲಿಗೆ ಕಾರ್ಮಿಕರು ಬರುತ್ತಿಲ್ಲ. ನಮಗೆ ರಕ್ಷಣೆ ನೀಡಿ. ಇಲ್ಲವೇ ದಯಾಮರಣ ನೀಡಿ' ಎಂದು ಬೆಳೆಗಾರರು ಆಕ್ರೋಶ ವ್ಯಕ್ತಪಡಿಸಿದರು.

ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಜಿ.ವಿ. ರಂಗರಾವ್, ಭಾರತೀಯ ವಿಜ್ಞಾನ ಸಂಸ್ಥೆಯ ಪ್ರೊ.ನಿಶಾಂತ್ ಸೇರಿ ಎಂಟು ಮಂದಿ ಜಿಲ್ಲೆಗೆ ಭೇಟಿ ನೀಡಿದ್ದಾರೆ. ಅಹವಾಲು ಆಲಿಸುವ ಸಂದರ್ಭದಲ್ಲಿ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಆನೆ ಯೋಜನೆ) ಶಾಶ್ವತಿ ಮಿಶ್ರಾ, ಹೆಚ್ಚುವರಿ ಜಿಲ್ಲಾಧಿಕಾರಿ ಕವಿತಾ ರಾಜಾರಾಂ, ಎಸ್ಪಿ ಹರಿರಾಂ ಶಂಕರ್ ಇದ್ದರು.

ಎಂ.ಆರ್. ಚಂದ್ರಶೇಖರ್ ಸಾವಿನ ಪ್ರಕರಣ

ವಿನಯ್ ಗುರೂಜಿ ಆಶ್ರಮದಲ್ಲಿ ಮಾಹಿತಿ ಸಂಗ್ರಹ

ಚಿಕ್ಕಮಗಳೂರು/ದಾವಣಗೆರೆ: ಹೊನ್ನಾಳಿ ಶಾಸಕ ರೇಣುಕಾಚಾರ್ಯ ಅವರ ತಮ್ಮನ ಮಗ ಎಂ.ಆರ್. ಚಂದ್ರಶೇಖರ್ ಸಾವಿನ ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರ ತಂಡ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಗೌರಿಗದ್ದೆಗೆ ಭಾನುವಾರ ಭೇಟಿ ನೀಡಿ ವಿನಯ್ ಗುರೂಜಿ ಆಶ್ರಮದಲ್ಲಿ ಮಾಹಿತಿ ಕಲೆ ಹಾಕಿದೆ.

ಚನ್ನಗಿರಿ ಠಾಣೆ ಪೊಲೀಸರು ಮಾಹಿತಿ ಕಲೆ ಹಾಕಿದ್ದಾರೆ. ಚಂದ್ರಶೇಖರ್ ಅವರು ಗೌರಿಗದ್ದೆಗೆ ಬಂದುಹೋಗಿದ್ದ ಕುರಿತು ವಿವರ ಪಡೆದಿದ್ದಾರೆ. ಸಿ.ಸಿ. ಟಿವಿ ಕ್ಯಾಮೆರಾ ಫೂಟೇಜ್ ಸಂಗ್ರಹಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

'ಗುರೂಜಿ ಮತ್ತು ನಮ್ಮನ್ನು ಪೊಲೀಸರು ವಿಚಾರಿಸಿದರು. ಮಾಹಿತಿ ನೀಡಿದ್ದೇವೆ' ಎಂದು ವಿನಯ್ ಗುರೂಜಿ ಆಪ್ತರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ವಿಧಿವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ವರದಿ ನಿರೀಕ್ಷೆಯಲ್ಲಿದ್ದೇವೆ. ವರದಿ ಬಂದ ನಂತರವೇ ತನಿಖೆ ಚುರುಕುಗೊಳ್ಳಲಿದೆ' ಎಂದು ಅಧಿಕಾರಿಗಳು ತಿಳಿಸಿದ್ದರು.

ಸಂಕ್ಷಿಪ್ತ ಸುದ್ದಿ

'ಜಾರಕಿಹೊಳಿ ಕ್ಷಮೆ ಕೇಳಲಿ'

ಶಿರಸಿ: 'ಹಿಂದೂ ಪದ ಅಶ್ಲೀಲ, ಹೊಲಸು ಎಂದು ಜರಿದಿರುವ ಸತೀಶ ಜಾರಕಿಹೊಳಿ ಹಿಂದೂ ಧರ್ಮೀಯರ ಕ್ಷಮೆ ಕೇಳಬೇಕು' ಎಂದು ಶ್ರೀರಾಮ ಸೇನೆ ಅಧ್ಯಕ್ಷ ಪ್ರಮೋದ ಮುತಾಲಿಕ್ ಆಗ್ರಹಿಸಿದ್ದಾರೆ.

ನಗರದಲ್ಲಿ ಸೋಮವಾರ ಮಾಧ್ಯಮದವರ ಜತೆ ಮಾತನಾಡಿದ ಅವರು, 'ಸ್ಮಶಾನದಲ್ಲಿ ಪೂಜೆ, ಮದುವೆ ಮಾಡುವ ಸತೀಶ್ ಒಬ್ಬ ನಾಸ್ತಿಕವಾದಿ. ಅವರಿಗೆ ಹಿಂದೂ, ಹಿಂದುತ್ವದ ಬಗ್ಗೆ ಮಾತನಾಡುವ ಯಾವುದೇ ನೈತಿಕತೆ ಇಲ್ಲ. ಅವರ ಹೇಳಿಕೆ ಕಾಂಗ್ರೆಸ್ಸಿನವರ ಹಿಂದೂ ವಿರೋಧಿ ಭಾವನೆಯನ್ನು ಬಹಿರಂಗಪಡಿಸಿದೆ' ಎಂದು ಆರೋಪಿಸಿದರು.

'ಹಿಂದೂ ಎಂಬುದು ಯಾವುದೇ ಪಂಥ ಅಥವಾ ಜಾತಿಯ ಸೂಚಕವಲ್ಲ. ಅದೊಂದು ಜೀವನ ಪದ್ಧತಿ. ಸುಪ್ರಿಂ ಕೋರ್ಟ್ ಕೂಡ ಇದನ್ನು ಸ್ಪಷ್ಟಪಡಿಸಿದೆ. ಹಿಂದೂ ಶಬ್ದಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಇವನ್ನೆಲ್ಲ ಸತೀಶ್ ತಿಳಿದುಕೊಳ್ಳಬೇಕು' ಎಂದರು.

ಕಾಂಗ್ರೆಸ್ ಹಿಂದೂ ವಿರೋಧಿ: ಬಿಜೆಪಿ

ಬೆಂಗಳೂರು: ಕಾಂಗ್ರೆಸ್ ಹಿಂದೂ ವಿರೋಧಿ ಪಕ್ಷ ಎಂಬುದಕ್ಕೆ ಸತೀಶ ಜಾರಕಿಹೊಳಿ ಅವರ ಹೇಳಿಕೆಯೇ ಸಾಕ್ಷಿ ಎಂದು ಬಿಜೆಪಿ ಟ್ವೀಟ್ ಮಾಡಿದೆ.

'ಹಿಂದೂ ಧರ್ಮದ ವಿರುದ್ಧ ಮಾತನಾಡುವ ಮೂಲಕ ಮತಬ್ಯಾಂಕ್ ಗಟ್ಟಿಗೊಳಿಸುವ ಹುನ್ನಾರ ನಡೆಸುತ್ತಿದೆಯೇ' ಎಂದು ಪ್ರಶ್ನಿಸಿರುವ ಬಿಜೆಪಿ, 'ಸತೀಶ ಜಾರಕಿಹೊಳಿ ಅವರ ಹೇಳಿಕೆ ಕಾಂಗ್ರೆಸ್ ಪಕ್ಷದ ಹೇಳಿಕೆಯೇ' ಎಂದು ಡಿ.ಕೆ.ಶಿವಕುಮಾರ್ ಅವರನ್ನು ಪ್ರಶ್ನಿಸಿದೆ.

₹ 2.45 ಕೋಟಿ ಮೌಲ್ಯದ ಚಿನ್ನ ವಶ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಅಕ್ರಮವಾಗಿ ಟ್ರೆಡ್ ಮಿಲ್ ಮೂಲಕ ಚಿನ್ನ ಕಳ್ಳ ಸಾಗಣೆ ಮಾಡುತ್ತಿದ್ದ ಪ್ರಕರಣ ಬೆಳಕಿಗೆ ಬಂದಿದ್ದು, ಆರೋಪಿಯಿಂದ ₹2.45 ಕೋಟಿ ಮೌಲ್ಯದ ಚಿನ್ನವನ್ನು ಕಸ್ಟಮ್ಸ್ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಕಸ್ಟಮ್ಸ್ ಗುಪ್ತಚರ ದಳದ ಖಚಿತ ಮಾಹಿತಿ ಮೇರೆಗೆ ದುಬೈನಿಂದ ಬೆಂಗಳೂರಿಗೆ ಕಳುಹಿಸಲಾಗಿದ್ದ 5 ಎಚ್‌ಪಿಯ ಟ್ರೆಡ್ ಮಿಲ್‌ನಲ್ಲಿ 4.72 ಕೆ.ಜಿ ತೂಕದ ಚಿನ್ನವನ್ನು ಕಳ್ಳ ಸಾಗಣೆ ಮಾಡಲಾಗುತ್ತಿತ್ತು. ಟ್ರೆಡ್ ಮಿಲ್‌ನ ಕಬ್ಬಿಣದ ಸರಳುಗಳ ಒಳಗೆ ಚಿನ್ನ ಇರಿಸಿ ರಫ್ತು ಮಾಡಲಾಗಿದೆ.

ಟ್ರೆಡ್ ಮಿಲ್ ಅನ್ನು ಬೆಂಗಳೂರಿಗೆ ರಫ್ತು ಮಾಡಿದ್ದ ವ್ಯಕ್ತಿ ಹಾಗೂ ಅದನ್ನು ಇಲ್ಲಿ ಪಡೆಯಲು ಮುಂದಾಗಿದ್ದ ವ್ಯಕ್ತಿ ಕುರಿತು ಅನುಮಾನ ವ್ಯಕ್ತವಾದ ಹಿನ್ನೆಲೆಯಲ್ಲಿ ಏರ್ ಕಾರ್ಗೋ ಕಮಿಷನರೇಟ್ ವಿಭಾಗದಿಂದ ಕಾರ್ಯಾಚರಣೆ ನಡೆಸಿದಾಗ ಚಿನ್ನ ಕಳ್ಳ ಸಾಗಣೆ ಮಾಡುತ್ತಿರುವುದು ತಿಳಿದುಬಂದಿದೆ.

ಟ್ರೆಡ್ ಮಿಲ್ ಆಮದು ಮಾಡಿಕೊಳ್ಳುತ್ತಿದ್ದ ವ್ಯಕ್ತಿಯನ್ನು ಕಸ್ಟಮ್ಸ್ ಅಧಿಕಾರಿಗಳು ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

ಕೋಳಿ ಸಾಕಣೆಯ ಕೃಷಿ ಭೂಮಿಗೆ ವಿನಾಯಿತಿ

ಬೆಂಗಳೂರು: ಕೋಳಿ ಸಾಕಣೆಗೆ ಬಳಕೆ ಮಾಡುವ ಕೃಷಿ ಭೂಮಿಗೆ ಭೂ ಪರಿವರ್ತನೆಯಿಂದ ವಿನಾಯಿತಿ ನೀಡಿ ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿದೆ.

ಕೋಳಿ ಸಾಕಣೆಯನ್ನು 'ಕೃಷಿ' ಎಂದು ವ್ಯಾಖ್ಯಾನಿಸಲಾಗಿದೆ. ಹೀಗಾಗಿ, ಕೋಳಿ ಸಾಕಣೆಗೆ ಬಳಸುವ ಭೂಮಿಯನ್ನು ಕೃಷಿಯೇತರ ಭೂಮಿಯಾಗಿ ಪರಿವರ್ತಿಸುವ ಅಗತ್ಯ ಇಲ್ಲ ಎಂದು ಕಂದಾಯ ಇಲಾಖೆ ತಿಳಿಸಿದೆ. ಕೃಷಿಯೇತರ ಉದ್ದೇಶಕ್ಕೆ ಕೃಷಿ ಭೂಮಿಯನ್ನು ಬಳಕೆ ಮಾಡಲು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 95ರ ಅಡಿ ಅನುಮತಿಗೆ ಜಿಲ್ಲಾಧಿಕಾರಿಗೆ ಅರ್ಜಿ ಸಲ್ಲಿಸಬೇಕು. ಆದರೆ, ಕೋಳಿ ಸಾಕಣೆಗೆ ಉಪಯೋಗಿಸುವ ಕೃಷಿ ಭೂಮಿಗೆ ಈ ನಿಯಮ ಅನ್ವಯಿಸುವುದಿಲ್ಲ ಎಂದೂ ವಿವರಿಸಲಾಗಿದೆ.

ಕಲ್ಯಾಣರಾವ್‌ಗೆ ಕಲಬುರ್ಗಿ ಸಂಶೋಧನಾ ಪ್ರಶಸ್ತಿ



ಬಸವಕಲ್ಯಾಣ (ಬೀದರ್ ಜಿಲ್ಲೆ): ಸಾಹಿತಿ, ಸಂಶೋಧಕ ಡಾ. ಕಲ್ಯಾಣರಾವ್ ಪಾಟೀಲ ಅವರು ಪ್ರಸಕ್ತ ಸಾಲಿನ ಡಾ.ಎಂ.ಎಂ.ಕಲಬುರ್ಗಿ ರಾಷ್ಟ್ರೀಯ ಸಾಹಿತ್ಯ ಸಂಶೋಧನಾ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ವಿಶ್ವ ಬಸವಧರ್ಮ ವಿಶ್ವಸ್ಥ ಮಂಡಳಿ ಅಧ್ಯಕ್ಷ ಭಾಲ್ಕಿಯ ಬಸವಲಿಂಗ ಪಟ್ಟದ್ದೇವರ ಅಧ್ಯಕ್ಷತೆಯಲ್ಲಿ ಆಯ್ಕೆ ಮಾಡಲಾಗಿದೆ. ₹50 ಸಾವಿರ ನಗದು, ಫಲಕ ಒಳಗೊಂಡಿರುವ ಪ್ರಶಸ್ತಿಯನ್ನು ನ. 26ರಂದು ಬಸವಕಲ್ಯಾಣದಲ್ಲಿ ನಡೆಯುವ ಶರಣ ಕಮ್ಮಟ ಉತ್ಸವದಲ್ಲಿ ಪ್ರದಾನ ಮಾಡಲಾಗುವುದು.

ನಿವೃತ್ತ ಪ್ರಾಧ್ಯಾಪಕ ಕಲ್ಯಾಣರಾವ್ ಅವರು ಕಲಬುರಗಿ ಜಿಲ್ಲೆಯ ಕಮಲಾಪುರ ತಾಲ್ಲೂಕಿನ ಕಿಣಗಿಯವರು. ಎಂ.ಎಂ.ಕಲಬುರ್ಗಿ ಅವರ ಮಾರ್ಗ ಸಂಪುಟಗಳ ಪರಾಮರ್ಶೆಯ ಸಂಶೋಧನಾ ಮಹಾ ಪ್ರಬಂಧ ರಚಿಸಿ ಡಾಕ್ಟರೇಟ್ ಪದವಿ ಪಡೆದಿದ್ದಾರೆ. 51ಕ್ಕೂ ಹೆಚ್ಚು ಕೃತಿ ರಚಿಸಿದ್ದಾರೆ. ಅಧ್ಯಯನ, ಅಧ್ಯಾಪನ, ಸಂಶೋಧನೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ನಿಧನ ವಾರ್ತೆ

ಸುಶೀಲಾ ಶಿವಪ್ಪ



ಸಕಲೇಶಪುರ: ಮಾಜಿ ಶಾಸಕ ದಿವಂಗತ ಬಿ.ಬಿ.ಶಿವಪ್ಪ ಅವರ ಪತ್ನಿ, ಬಿಜೆಪಿ ಮಹಿಳಾ ಮೋರ್ಚಾ ರಾಜ್ಯ ಘಟಕದ ಮಾಜಿ ಅಧ್ಯಕ್ಷೆ ಸುಶೀಲಾ ಶಿವಪ್ಪ (87) ಅವರು ಅನಾರೋಗ್ಯದಿಂದ ಸೋಮವಾರ ನಿಧನರಾದರು. ಅವರಿಗೆ ಮೂವರು ಪುತ್ರರಿದ್ದಾರೆ.

ಹಾಸನ ಲೋಕಸಭಾ ಕ್ಷೇತ್ರದಿಂದ ಜೆಡಿಎಸ್‌ನ ಎಚ್.ಡಿ.ದೇವೇಗೌಡ ವಿರುದ್ಧ ಸ್ಪರ್ಧಿಸಿದ್ದ ಅವರು, ಮಹಿಳಾ ಮೋರ್ಚಾ ಸೇರಿದಂತೆ ಬಿಜೆಪಿ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದರು.

ಮಂಗಳವಾರ ಮಧ್ಯಾಹ್ನ 3ಕ್ಕೆ ತಾಲ್ಲೂಕಿನ ಕುಂಬ್ರಳ್ಳಿ ತೋಟದಲ್ಲಿ ಅಂತ್ಯ ಕ್ರಿಯೆ ನಡೆಯಲಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿ.ಎಸ್. ಯಡಿಯೂರಪ್ಪ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಭಾಗವಹಿಸಲಿದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಸುಭಾಷಿತ

ಜನ ನಡೆದಿದ್ದಾರೆ ಎಂಬ ಕಾರಣಕ್ಕೆ ಸವೆದ ಹಾದಿಯಲ್ಲಿ ಹೋಗದಿರಿ, ನಿಮ್ಮದೇ ಹೊಸ ಹಾದಿಯನ್ನು ಸೃಷ್ಟಿಸಿಕೊಂಡು ಮುನ್ನಡೆಯಿರಿ.

–ಗೌತಮ ಬುದ್ಧ

ರಾಜ್ಯಪಾಲರ ಅಧಿಕಾರ ವ್ಯಾಪ್ತಿ ಸಂಹಿತೆ ರೂಪಿಸುವುದಕ್ಕೆ ಸಕಾಲ

ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅವರನ್ನು ಹಿಂದಕ್ಕೆ ಕರೆಸಿಕೊಳ್ಳಬೇಕು ಎಂಬ ಆಗ್ರಹವನ್ನು ಅಲ್ಲಿನ ಡಿಎಂಕೆ ನೇತೃತ್ವದ ಸರ್ಕಾರವು ಗಟ್ಟಿಗೊಳಿಸಿದೆ. ರವಿ ಅವರು, ಸಾಂವಿಧಾನಿಕವಾಗಿ ತಮಗೆ ಇರುವ ನಿಬಂಧನೆಗಳನ್ನು ಮೀರಿ ವರ್ತಿಸುತ್ತಿದ್ದಾರೆ ಎಂಬುದು ಸರ್ಕಾರದ ಆರೋಪ. ಸರ್ಕಾರವು ಬೆಂಬಲ ಯಾಚಿಸಿ ಸಮಾನಮನಸ್ಕ ಪಕ್ಷಗಳನ್ನು ಸಂಪರ್ಕಿಸಿದೆ. 2021ರ ಸೆಪ್ಟೆಂಬರ್‌ನಲ್ಲಿ ರಾಜ್ಯಪಾಲರಾಗಿ ಅಧಿಕಾರ ಸ್ವೀಕರಿಸಿದಾಗಿನಿಂದ ರವಿ ಅವರು ಎಂ.ಕೆ.ಸ್ಟಾಲಿನ್ ನೇತೃತ್ವದ ತಮಿಳುನಾಡು ಸರ್ಕಾರದ ಜೊತೆ ಸಂಘರ್ಷದಲ್ಲಿ ತೊಡಗಿರುವ ಆರೋಪ ಹೊತ್ತಿದ್ದಾರೆ. ಅವರು ಆಡಳಿತಕ್ಕೆ ಸಂಬಂಧಿಸಿದಂತೆ ಸರ್ಕಾರದ ಚಟುವಟಿಕೆಗಳಲ್ಲಿ ಹಸ್ತಕ್ಷೇಪ ನಡೆಸುತ್ತಿದ್ದಾರೆ ಎಂದು ಕೂಡ ಆರೋಪಿಸಲಾಗಿದೆ. ಇಂತಹ ಆರೋಪ ಇರುವುದು ತಮಿಳುನಾಡಿನ ರಾಜ್ಯಪಾಲರ ವಿರುದ್ಧ ಮಾತ್ರವೇ ಅಲ್ಲ. ರಾಜ್ಯಪಾಲರಾಗಿ ಅಧಿಕಾರ ಸ್ವೀಕರಿಸಿದ ಹಲವರು ಆಯಾ ಕಾಲಘಟ್ಟದಲ್ಲಿ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಪಕ್ಷದ ಆಜ್ಞಾನುವರ್ತಿಗಳಂತೆ ನಡೆದುಕೊಂಡ ನಿದರ್ಶನಗಳು ಹಲವು ಇವೆ. ಪ್ರಸ್ತುತ ಕಾಲಘಟ್ಟದಲ್ಲಿ ಬಿಜೆಪಿಯ ವಿರೋಧ ಪಕ್ಷಗಳ ಆಡಳಿತ ಇರುವ ಬಹುತೇಕ ರಾಜ್ಯಗಳಲ್ಲಿ, ಅಲ್ಲಿನ ರಾಜ್ಯಪಾಲರು ರಾಜ್ಯ ಸರ್ಕಾರದ ಜೊತೆ ಸಂಘರ್ಷದಲ್ಲಿ ತೊಡಗಿದ್ದಾರೆ. ರಾಜ್ಯಪಾಲರ ಕಚೇರಿಯನ್ನು ದುರ್ಬಳಕೆ ಮಾಡಿಕೊಳ್ಳುವ ಪ್ರವೃತ್ತಿಯು ಪಿ.ವಿ. ನರಸಿಂಹ ರಾವ್ ಆಡಳಿತದ ನಂತರದಲ್ಲಿ, ಅಟಲ್ ಬಿಹಾರಿ ವಾಜಪೇಯಿ ಹಾಗೂ ಮನಮೋಹನ ಸಿಂಗ್ ಆಡಳಿತದ ಅವಧಿಯಲ್ಲಿ ಕಡಿಮೆ ಆಗಿತ್ತು. ಆದರೆ ಈಗ ರಾಜಭವನಗಳು ರಾಜಕೀಯವಾಗಿ ಬಹಳ ಸಕ್ರಿಯವಾಗಿವೆ, ಚುನಾಯಿತ ಸರ್ಕಾರಗಳ ಪಾಲಿಗೆ ವಿರೋಧಿಗಳಂತೆ ಬಹಿರಂಗವಾಗಿ ವರ್ತಿಸುತ್ತಿವೆ.



ರಾಜ್ಯಪಾಲರ ಅಧಿಕಾರವನ್ನು ಸಂಹಿತೆಯ ರೂಪದಲ್ಲಿ ವ್ಯಾಖ್ಯಾನಿಸುವುದರಿಂದ ಆ ಅಧಿಕಾರ ದುರ್ಬಳಕೆ ಆಗುವುದಿಲ್ಲ, ಅಪವ್ಯಾಖ್ಯಾನಕ್ಕೆ ತುತ್ತಾಗುವುದಿಲ್ಲ

ರಾಜ್ಯಪಾಲರ ಹುದ್ದೆಯಲ್ಲಿ ಇರುವವರು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ವರ್ತಿಸುತ್ತಿರುವುದರ ವಿರುದ್ಧ ಮುಖ್ಯಮಂತ್ರಿಗಳು ಧ್ವನಿ ಎತ್ತಿರುವುದರ ವಿಚಾರವಾಗಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮೌನವಾಗಿರುವುದು, ರಾಜ್ಯಪಾಲರಿಗೆ ಕೇಂದ್ರದ ಅವ್ಯಕ್ತ ಬೆಂಬಲ ಇರುವುದನ್ನು ಸೂಚಿಸುತ್ತದೆ.

ಪುದುಚೇರಿಯಲ್ಲಿ ಕಿರಣ್ ಬೇಡಿ, ಮಹಾರಾಷ್ಟ್ರದಲ್ಲಿ ಬಿ.ಎಸ್. ಕೋಶಿಯಾರಿ, ದೆಹಲಿಯಲ್ಲಿ ಅನಿಲ್ ಬೈಜಲ್ ಮತ್ತು ವಿ.ಕೆ.ಸಕ್ಸೇನಾ, ಪಶ್ಚಿಮ ಬಂಗಾಳದ ಹಿಂದಿನ ರಾಜ್ಯಪಾಲ ಜಗದೀಪ್ ಧನಕರ್ (ಈಗ ಇವರು ಉಪ ರಾಷ್ಟ್ರಪತಿ), ಕೇರಳದಲ್ಲಿ ಆರಿಫ್ ಮಹಮ್ಮದ್ ಖಾನ್, ತೆಲಂಗಾಣದಲ್ಲಿ ತಮಿಳಿಸಾಯಿ ಸೌಂದರರಾಜನ್, ಪಂಜಾಬ್‌ನಲ್ಲಿ ಭಂವರಿಲಾಲ್ ಪುರೋಹಿತ್ ಅವರು ರಾಜ್ಯಪಾಲರಾಗಿ ಚುನಾಯಿತ ಸರ್ಕಾರಕ್ಕೆ ಕಿರಿಕಿರಿ ಉಂಟುಮಾಡುವ ಇರಾದೆ ತಮಗೆ ಇದೆ ಎಂಬುದು ಎದ್ದು ಕಾಣುವಂತೆ ನಡೆದುಕೊಂಡಿದ್ದಾರೆ. ಕೆಲವು ಸಂದರ್ಭಗಳಲ್ಲಿ ಅವರು ಸಾಂವಿಧಾನಿಕ ಸನ್ನಡತೆಯನ್ನು ಉಲ್ಲಂಘಿಸುವ ಹಂತಕ್ಕೆ ಹೋಗಿದ್ದೂ ಇದೆ. ಬಿಜೆಪಿಯ ವಿರೋಧ ಪಕ್ಷಗಳ ಆಡಳಿತ ಇರುವ ಬಹುತೇಕ ರಾಜ್ಯಗಳು ತಮ್ಮ ರಾಜ್ಯಪಾಲರನ್ನು ಹಿಂದಕ್ಕೆ ಕರೆಸಿಕೊಳ್ಳಬೇಕು ಎಂದು ಆಗ್ರಹಿಸಿವೆ. ಕೇಂದ್ರದಲ್ಲಿ ಆಡಳಿತದ ಚುಕ್ಕಾಣಿ ಹಿಡಿದಿರುವ ಬಿಜೆಪಿಯ ಹಾಗೂ ಕೆಲವು ಸಂದರ್ಭಗಳಲ್ಲಿ ಆರ್‌ಎಸ್‌ಎಸ್ ಮತ್ತು ಅದರ ಅಂಗಸಂಸ್ಥೆಗಳ ಆಜ್ಞೆಯಂತೆ ರಾಜಭವನ ವರ್ತಿಸಿದೆ ಎಂದು ಆರೋಪಿಸಿವೆ.

ಶಾಸನ ರಚನೆ ಹಾಗೂ ಆಡಳಿತದ ವಿಚಾರದಲ್ಲಿ ಇಲ್ಲದ ಅಧಿಕಾರ ಇದೆ ಎಂದು ರಾಜ್ಯಪಾಲರು ಭಾವಿಸುವುದಕ್ಕೆ ಒಂದು ಕಾರಣ ಇದೆ. ಸಂವಿಧಾನವು ರಾಜ್ಯಪಾಲರ ಅಧಿಕಾರ ವ್ಯಾಪ್ತಿಯನ್ನು ನಿಖರವಾಗಿ ಗುರುತಿಸಿಲ್ಲ. ಆದರೆ, ರಾಜ್ಯಪಾಲರ ಬಳಿ ಹೆಚ್ಚಿನ ಅಧಿಕಾರ ಇಲ್ಲ ಎಂಬುದು ಈಗ ಒಪ್ಪಿತ ಸಂಗತಿ. ಸರ್ಕಾರಿಯಾ ಆಯೋಗದ ಶಿಫಾರಸುಗಳನ್ನು ಗಾಳಿಗೆ ತೂರಿ, ಸಕ್ರಿಯ ರಾಜಕಾರಣಿಗಳನ್ನು ರಾಜ್ಯಪಾಲರನ್ನಾಗಿ ನೇಮಕ ಮಾಡಲಾಗುತ್ತಿದೆ. ಹೀಗೆ ನೇಮಕ ಆದವರು ತಮ್ಮ ರಾಜಕೀಯ ನಾಯಕರನ್ನು ಖುಷಿಪಡಿಸಲು ಹೆಚ್ಚು ಗಮನ ನೀಡುತ್ತಾರೆ. ವಿಕಾಸ ಹೊಂದಿರುವ ಪ್ರಜಾತಂತ್ರ ವ್ಯವಸ್ಥೆಯು ಸಂವಿಧಾನದ ಆಶಯಕ್ಕೆ ಅನುಗುಣವಾಗಿ, ಆರೋಗ್ಯಕರ ಪೂರ್ವನಿದರ್ಶನಗಳಿಗೆ ಮತ್ತು ಸಂಪ್ರದಾಯಗಳಿಗೆ ಅನುಗುಣವಾಗಿ ಕೆಲಸ ಮಾಡುತ್ತದೆ. ಅದು ಲಿಖಿತ ಕಾನೂನು ಒಂದನ್ನೇ ಗಮನಿಸುವುದಿಲ್ಲ. ಆದರೆ ಈ ಬಗೆಯ ವರ್ತನೆಗಳನ್ನು ರಾಜಕೀಯ ಕಾರಣಗಳಿಗಾಗಿ ನೇಮಕ ಆದವರಿಂದ ಬಯಸಲು ಆಗುವುದಿಲ್ಲ. ರಾಜ್ಯಪಾಲರ ಅಧಿಕಾರ ಏನು ಹಾಗೂ ಅವರ ಹೊಣೆಗಾರಿಕೆಗಳು ಏನು ಎಂಬುದನ್ನು ಸಂಹಿತೆಯ ರೂಪದಲ್ಲಿ ವ್ಯಾಖ್ಯಾನಿಸಬೇಕಾದ ಅಗತ್ಯ ಇದೆ. ಆಗ ಅವರ ಅಧಿಕಾರವು ದುರ್ಬಳಕೆ ಆಗುವುದಿಲ್ಲ, ಅಪವ್ಯಾಖ್ಯಾನಕ್ಕೆ ತುತ್ತಾಗುವುದಿಲ್ಲ. ‘ರಾಜ್ಯಪಾಲ ಹುದ್ದೆಯಲ್ಲಿರುವವರು ನಿಷ್ಪಕ್ಷಪಾತಿ ಆಗಿರಬೇಕು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಸುಮಧುರ ಬಾಂಧವ್ಯ ಇರುವಂತೆ ನೋಡಿಕೊಳ್ಳಬೇಕು. ಅವರು ಕೇಂದ್ರದ ಏಜೆಂಟ್ ರೀತಿಯಲ್ಲಿ ವರ್ತಿಸಬಾರದು’ ಎಂದು ಸರ್ಕಾರಿಯಾ ಆಯೋಗ ಹೇಳಿರುವುದು ಇಲ್ಲಿ ಉಲ್ಲೇಖಾರ್ಹ.

ನಾವು ಬ್ರಿಟನ್ನಿನಿಂದ ಕಲಿಯಬೇಕು ಎಂಬುದು ವಾಸ್ತವ ಮರೆತ ಭಾವಾವೇಶದ ಮಾತು

ಸುನಕ್ ಆಯ್ಕೆ: ಭಾರತದಿಂದ ಕಲಿತ ಬ್ರಿಟನ್



ಸೂರ್ಯ-ನಮಸ್ಕಾರ

ಎ. ಸೂರ್ಯಪ್ರಕಾಶ್

ರಿಷಿ ಸುನಕ್ ಅವರು ಬ್ರಿಟನ್ನಿನ ರಾಜಕಾರಣದಲ್ಲಿ ಮೇಲಕ್ಕೆ ಬಂದಿದ್ದನ್ನು, ಅಲ್ಲಿನ ಪ್ರಧಾನಿಯಾಗಿ ನೇಮಕ ಆಗಿದ್ದನ್ನು ವಿಶ್ವದ ಎಲ್ಲೆಡೆ ಪ್ರಶಂಸಿಸಲಾಗುತ್ತಿದೆ. ಆದರೆ, ಭಾರತದಲ್ಲಿ ಕಾಂಗ್ರೆಸ್ ಮಾದರಿಯ ಕೆಲವು ರಾಜಕಾರಣಿಗಳು, ವಿಶ್ವದ ಅತ್ಯಂತ ವೈವಿಧ್ಯಮಯ ದೇಶವಾದ ಭಾರತದ ಪ್ರಜೆಗಳಿಗೆ ಬಹುತ್ವದ ಗುಣಗಳ ಕುರಿತು ಪ್ರವಚನ ನೀಡುವ ಪ್ರಯತ್ನ ನಡೆಸಿದ್ದಾರೆ. ಪಿ.ಚಿದಂಬರಂ ಮತ್ತು ಶಶಿ ತರೂರ್ ಈ ಬಗೆಯ ಇಬ್ಬರು ವ್ಯಕ್ತಿಗಳು. ಚಿದಂಬರಂ ಅವರು ಟ್ವೀಟ್ ಮಾಡಿ, ಅಮೆರಿಕ (ಕಮಲಾ ಹ್ಯಾರಿಸ್ ಅವರು ಅಲ್ಲಿ ಉಪಾಧ್ಯಕ್ಷೆ ಆಗಿದ್ದಾರೆ) ಮತ್ತು ಬ್ರಿಟನ್ ದೇಶಗಳು ತಮ್ಮಲ್ಲಿ ಬಹುಸಂಖ್ಯಾತ ಸಮುದಾಯಕ್ಕೆ ಸೇರಿಲ್ಲದವರನ್ನು ಉನ್ನತ ಸ್ಥಾನಕ್ಕೆ ಆಯ್ಕೆ ಮಾಡಿವೆ ಮತ್ತು ‘ಇದರಲ್ಲಿ ಭಾರತ ಕಲಿಯಬೇಕಾದ ಪಾಠ ಇದೆ’ ಎಂದು ಹೇಳಿದ್ದಾರೆ.

ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರನ್ನು ಅತ್ಯಂತ ಶಕ್ತಿಶಾಲಿ ಹುದ್ದೆಯಲ್ಲಿ ಕೂರಿಸುವ ಮೂಲಕ ಬ್ರಿಟನ್ನಿನ ಜನ ವಿಶ್ವದಲ್ಲಿ ಅತ್ಯಂತ ಅಪರೂಪದ ಕೆಲಸವೊಂದನ್ನು ಮಾಡಿದ್ದಾರೆ ಎಂಬುದನ್ನು ನಾವೆಲ್ಲ ಒಪ್ಪಿಕೊಳ್ಳಬೇಕು ಎಂದು ತರೂರ್ ಟ್ವೀಟ್ ಮೂಲಕ ಹೇಳಿದ್ದಾರೆ. ‘ರಿಷಿ ಸುನಕ್ ಅವರು ಉನ್ನತ ಸ್ಥಾನಕ್ಕೆ ಏರುವುದನ್ನು ಸಂಭ್ರಮದಿಂದ ಕಾಣುತ್ತಲೇ, ನಮ್ಮಲ್ಲಿ ಇಂಥದ್ದೊಂದು ಸಾಧ್ಯವಾಗಬಹುದೇ ಎಂಬುದನ್ನು ನಾವು ಪ್ರಾಮಾಣಿಕವಾಗಿ ಕೇಳಿಕೊಳ್ಳಬೇಕಿದೆ’ ಎಂದು ಅವರು ಹೇಳಿದ್ದಾರೆ.


ಬ್ರಿಟನ್ನಿನ ಕನ್ಸರ್ವೇಟಿವ್ ಪಕ್ಷದ ಸದಸ್ಯರ ನಡೆ ಅಪರೂಪದ್ದು ಎಂಬುದು ನಿಜ. ಆದರೆ ನಾವು ಅದರಿಂದಾಗಿ ಭಾವಾವೇಶದಲ್ಲಿ ತೇಲಿಹೋಗುವುದು ಬೇಡ. ನಾವು ಈ 75 ವರ್ಷಗಳಲ್ಲಿ ಧರ್ಮನಿರಪೇಕ್ಷ ಹಾಗೂ ಪ್ರಜಾತಾಂತ್ರಿಕ ಗಣರಾಜ್ಯವಾಗಿ ಸಾಧಿಸಿದ್ದನ್ನು ಮರೆಯುವುದೂ ಬೇಡ. ನಮ್ಮಲ್ಲಿ ರಾಷ್ಟ್ರಪತಿ ಸ್ಥಾನಕ್ಕೆ ಮೂರು ಬಾರಿ ಮುಸ್ಲಿಮರು ಆಯ್ಕೆಯಾಗಿದ್ದರು (ಝಾಕಿರ್ ಹುಸೇನ್, ಫಕ್ರುದ್ದೀನ್ ಅಲಿ ಅಹಮದ್ ಮತ್ತು ಎ.ಪಿ.ಜೆ. ಅಬ್ದುಲ್ ಕಲಾಂ), ಒಂದು ಬಾರಿ ಸಿಖ್ ಸಮುದಾಯದವರು (ಜೈಲ್ ಸಿಂಗ್) ಆಯ್ಕೆಯಾಗಿದ್ದರು.

ಸಿಖ್ ಸಮುದಾಯಕ್ಕೆ ಸೇರಿದ ಮನಮೋಹನ ಸಿಂಗ್ ಅವರು ಹತ್ತು ವರ್ಷ ಪ್ರಧಾನಿಯಾಗಿದ್ದರು. ಇಲ್ಲಿ ಮಹಿಳೆಯರು ಪ್ರಧಾನಿಯಾಗಿದ್ದಾರೆ (ಇಂದಿರಾ ಗಾಂಧಿ), ರಾಷ್ಟ್ರಪತಿ ಆಗಿದ್ದಾರೆ (ಪ್ರತಿಭಾ ಪಾಟೀಲ್ ಮತ್ತು ದ್ರೌಪದಿ ಮುರ್ಮು). ದಲಿತ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದವರು ರಾಷ್ಟ್ರಪತಿ ಆಗಿದ್ದಾರೆ. ಬಹುತ್ವಕ್ಕೆ ಭಾರತವು ನೀಡುವ ಗೌರವ ಹಾಗೂ ಆ ಬಗ್ಗೆ ದೇಶಕ್ಕೆ ಇರುವ ಬದ್ಧತೆಗೆ ಅತ್ಯುತ್ತಮ ನಿದರ್ಶನ ಮನಮೋಹನ ಸಿಂಗ್ ಅವರು ಹತ್ತು ವರ್ಷ ಪ್ರಧಾನಿಯಾಗಿ ಇದ್ದುದು ಮತ್ತು ಜೈಲ್ ಸಿಂಗ್ ಅವರು ರಾಷ್ಟ್ರಪತಿ ಆಗಿದ್ದುದು. ಏಕೆಂದರೆ ಸಿಖ್ ಸಮುದಾಯದ ಪ್ರಮಾಣ ದೇಶದ ಜನಸಂಖ್ಯೆಯಲ್ಲಿ ಶೇ 1.7ರಷ್ಟು ಮಾತ್ರ. ದೇಶವು ಮುಸ್ಲಿಂ, ಕ್ರೈಸ್ತ, ಸಿಖ್ ಮತ್ತು ಬೌದ್ಧ ಸಮುದಾಯಗಳಿಗೆ ಸೇರಿದವರನ್ನು ಕೇಂದ್ರ ಸಚಿವರನ್ನಾಗಿ ಹಾಗೂ ಮುಖ್ಯಮಂತ್ರಿಗಳನ್ನಾಗಿ ಮಾಡಿದೆ.

ಧಾರ್ಮಿಕ ಹಾಗೂ ಸಾಂಸ್ಕೃತಿಕ ಬಹುತ್ವದಲ್ಲಿ ದೇಶವು ಕಂಡುಕೊಂಡಿರುವ ನೆಮ್ಮದಿಗೆ ಇನ್ನೂ ಹೆಚ್ಚಿನ ನಿದರ್ಶನಗಳ ಅವಶ್ಯಕತೆ ಇದೆಯೇ? ನಾವು ಬ್ರಿಟನ್ನಿನಿಂದ ಕಲಿಯಬೇಕು ಎಂದು ಚಿದಂಬರಂ ಹಾಗೂ ತರೂರ್ ಅವರು ಹೇಳಿರುವುದು ತಪ್ಪು. ಅವರು ಆಡಿರುವ ಮಾತುಗಳು ಭಾರತದ ಶ್ರೀಮಂತ ಪ್ರಜಾಸತ್ತೆಯ ಬಗ್ಗೆ ಅವರಲ್ಲಿ ಇರುವ ಅರಿವಿನ ಕೊರತೆಯನ್ನು ತೋರಿಸುತ್ತಿವೆ ಅಥವಾ ರಾಜಕೀಯವಾಗಿ ಸ್ಥಳಾಂತರಗೊಂಡಿರುವ ವ್ಯಕ್ತಿಗಳು ಹೆಚ್ಚೆಚ್ಚು ಅಪ್ರಸ್ತುತ ಆದಂತೆಲ್ಲ ಅವರಲ್ಲಿ ಮೂಡುವ ಭಾರತ ವಿರೋಧಿ ಗುಣವನ್ನು ಈ ಮಾತುಗಳು ತೋರಿಸುತ್ತಿವೆ.

ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ತೀವ್ರ ದ್ವೇಷ ಮೈಗೂಡಿಸಿಕೊಂಡಿರುವ ಭಾರತದ ಹಲವು ರಾಜಕಾರಣಿಗಳು ಮೋದಿ ಅವರನ್ನು ಟೀಕಿಸುವ ಸಂದರ್ಭದಲ್ಲಿ ಭಾರತವನ್ನೇ ಟೀಕಿಸುತ್ತಿದ್ದಾರೆ. ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ ಪಕ್ಷದ ಸದಸ್ಯರು, ಎರಡು ಪ್ರಮುಖ ಕಮ್ಯುನಿಸ್ಟ್ ಪಕ್ಷಗಳ ಸದಸ್ಯರು ಈ ತಂತ್ರದ ಮೊರೆ ಹೋಗುತ್ತಿದ್ದಾರೆ. ಆದರೆ ಇದು ಬಹುತೇಕ ರಾಜ್ಯಗಳ ಚುನಾವಣೆಗಳಲ್ಲಿ ಅವರಿಗೇ ಮುಳುವಾಗುತ್ತಿದೆ.

ಚಿದಂಬರಂ ಮತ್ತು ತರೂರ್ ಅವರ ಮಾತುಗಳು 2004ರಲ್ಲಿ ನಡೆದ ವಿದ್ಯಮಾನವೊಂದರ ಬಗ್ಗೆ ಪರೋಕ್ಷವಾಗಿ ಪ್ರತಿಕ್ರಿಯೆ ನೀಡುವಂತಿವೆ. ಆ ವರ್ಷದಲ್ಲಿ ಕಾಂಗ್ರೆಸ್ಸಿನ ಸದಸ್ಯರು, ಇಟಲಿ ಸಂಜಾತೆ ಸೋನಿಯಾ ಗಾಂಧಿ ಅವರನ್ನು ಪ್ರಧಾನಿ ಹುದ್ದೆಗೆ ಏರಿಸಲು ಯತ್ನಿಸಿದರು. ವಾಸ್ತವ ಏನೆಂದರೆ, ಸೋನಿಯಾ ಅವರಿಗೆ ಅಂದಿನ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರಿಂದ ಕರೆ ಬರಲಿಲ್ಲ, ಸೋನಿಯಾ ಅವರು ತಮಗೆ ಬದಲಿಯಾಗಿ ಮನಮೋಹನ ಸಿಂಗ್ ಅವರನ್ನು ಆಯ್ಕೆ ಮಾಡಿದರು, ಅಧಿಕಾರದ ಲಗಾಮನ್ನು ತಾವೇ ಇರಿಸಿಕೊಂಡರು. ಪರಿಣಾಮವಾಗಿ, ಸೋನಿಯಾ ಗಾಂಧಿ ಅವರು ಸಾಮ್ರಾಜ್ಞಿಯಂತೆ ಆಡಳಿತ ನಡೆಸಿದರು, ಆದರೆ ಅವರಿಗೆ ಯಾವುದೇ ಉತ್ತರದಾಯಿತ್ವ ಅಥವಾ ಹೊಣೆಗಾರಿಕೆ ಇರಲಿಲ್ಲ. ಅವರು ಪ್ರಧಾನಿ ಆಗಿಲ್ಲದಿದ್ದರೂ ಆ ಹುದ್ದೆಗಿಂತ ಬಹಳ ದೊಡ್ಡ ಸ್ಥಾನದಲ್ಲಿದ್ದರು. ಬೊಂಬೆಯಾಟದ ಸೂತ್ರ ಸೋನಿಯಾ ಅವರ ಕೈಯಲ್ಲಿತ್ತು, ಪ್ರಧಾನಿಯವರಿಗೆ ಅವರ ಸೂಚನೆ ಪಾಲಿಸದೆ ಬೇರೆ ದಾರಿಯೇ ಇರಲಿಲ್ಲ. ಹೀಗಾಗಿ, ಸೋನಿಯಾ ಅವರು ಇಟಲಿ ಮೂಲದವರಾದ ಕಾರಣಕ್ಕಾಗಿ ಅವರನ್ನು ಅಧಿಕಾರದಿಂದ ದೂರ ಇರಿಸಲಾಯಿತು ಎಂಬ ಪರೋಕ್ಷ ವಾದ ಸಂಪೂರ್ಣವಾಗಿ ತಪ್ಪು.



ತರೂರ್ ಅವರ ಹೇಳಿಕೆಗಳು ಮುಂದಾಲೋಚನೆ ಇಲ್ಲದೆ ನೀಡಿದಂತಿವೆ. ಕನ್ಸರ್ವೇಟಿವ್ ಪಕ್ಷದಲ್ಲಿ ತಳಮಟ್ಟದಲ್ಲಿ ಭಿನ್ನಾಭಿಪ್ರಾಯ ತಲೆಎತ್ತಿರುವ ಬಗ್ಗೆ ವರದಿಗಳು ಈಗಾಗಲೇ ಬಂದಿವೆ. ಸುನಕ್ ಅವರ ಆಯ್ಕೆಯ ಸಂದರ್ಭದಲ್ಲಿ ತಮ್ಮನ್ನು ಸಂಪರ್ಕಿಸಿರಲಿಲ್ಲ ಎಂದು ಹಲವರು ಈಗಾಗಲೇ ಅಸಮಾಧಾನ ತೋಡಿಕೊಂಡಿದ್ದಾರೆ.

ಬ್ರಿಟಿಷ್ ವ್ಯವಸ್ಥೆಯಲ್ಲಿ, ಪ್ರಧಾನಿ ಸ್ಥಾನದಲ್ಲಿದ್ದವರು ರಾಜೀನಾಮೆ ಸಲ್ಲಿಸಿದಾಗ, ಪಕ್ಷದ ಶಾಸಕಾಂಗ ಪಕ್ಷದ ನಾಯಕನು ಸಂಸದರನ್ನು ಕರೆದು ಮುಂದಿನ ಪ್ರಧಾನಿ ಯಾರಾಗಬೇಕು ಎಂಬ ಬಗ್ಗೆ ತಮ್ಮ ಆಯ್ಕೆಯನ್ನು ಸೂಚಿಸುವಂತೆ ಹೇಳುತ್ತಾನೆ. ಅಭ್ಯರ್ಥಿಗೆ ಕನಿಷ್ಠ 100 ಸಂಸದರ ಬೆಂಬಲ ದೊರೆತರೆ ಮಾತ್ರ ಆ ಅಭ್ಯರ್ಥಿಯ ಉಮೇದುವಾರಿಕೆ ಪರಿಗಣಿತವಾಗುತ್ತದೆ. ಇಬ್ಬರು ಅಥವಾ ಅದಕ್ಕಿಂತ ಹೆಚ್ಚಿನ ಅಭ್ಯರ್ಥಿಗಳು ಇದ್ದರೆ ಶಾಸಕಾಂಗ ಪಕ್ಷವು, ಅಭ್ಯರ್ಥಿಗಳ ಪೈಕಿ ತಮ್ಮ ಆಯ್ಕೆ ಯಾರು ಎಂಬುದನ್ನು ಮತದಾನದ ಮೂಲಕ ತಿಳಿಸುವಂತೆ ಪಕ್ಷದ ಎಲ್ಲ ಸದಸ್ಯರಿಗೆ ಸೂಚಿಸುತ್ತದೆ. ಸದಸ್ಯರು ದೇಶದಾದ್ಯಂತ ಇದ್ದಾರೆ, ಅವರ ಸಂಖ್ಯೆ ಅಂದಾಜು 1.70 ಲಕ್ಷ. ಹೆಚ್ಚಿನ ಮತ ಪಡೆಯುವ ಅಭ್ಯರ್ಥಿ ಜಯಶಾಲಿ ಎಂದು ಘೋಷಿತನಾಗುತ್ತಾನೆ. ಲಿಜ್ ಟ್ರಸ್ ಅವರು ರಿಷಿ ಸುನಕ್ ಅವರನ್ನು ಸೋಲಿಸಿದ ಸೆಪ್ಟೆಂಬರ್ 5ರಂದು ಆಗಿದ್ದು ಇದೇ.

ಕನ್ಸರ್ವೇಟಿವ್ ಪಕ್ಷದ ಸಂಸದರು (357) ಯಾರಿಗೆ ಬೆಂಬಲ ಸೂಚಿಸುವುದು ಎಂಬ ವಿಚಾರದಲ್ಲಿ ಒಮ್ಮತ ಹೊಂದಿರಲಿಲ್ಲ. ಸುನಕ್ ಅವರಿಗೆ ಹೆಚ್ಚಿನ ಬೆಂಬಲ ಇದ್ದರೂ, ಮತದಾನ ನಡೆಸುವಂತೆ ಪಕ್ಷದ ಸದಸ್ಯರನ್ನು ಕೋರಲಾಯಿತು. ಆ ಚುನಾವಣೆಯಲ್ಲಿ ಟ್ರಸ್ ಅವರು 81,326 ಮತಗಳನ್ನು ಪಡೆದರು ಹಾಗೂ ಸುನಕ್ ಅವರಿಗೆ 60,399 ಮತಗಳು ಸಿಕ್ಕವು. ತಳಮಟ್ಟದಲ್ಲಿ ಇರುವ ಕಾರ್ಯಕರ್ತರ ಅಭಿಪ್ರಾಯವು ಸಂಸದರ ಅಭಿಪ್ರಾಯಕ್ಕಿಂತ ಬೇರೆ ಆಗಿತ್ತು. ಏಕೆಂದರೆ ತಳಮಟ್ಟದಲ್ಲಿ ಜನಾಂಗ ಎಂಬುದು ಪ್ರಮುಖ ಅಂಶವಾಗಿ ಪರಿಗಣಿತವಾಗುತ್ತದೆ. ಅದರಲ್ಲೂ ಮುಖ್ಯವಾಗಿ ಕನ್ಸರ್ವೇಟಿವ್ ಪಕ್ಷದಲ್ಲಿ ಇದು ಮುಖ್ಯವಾಗುತ್ತದೆ. ಹಾಗಾಗಿ, ಸುನಕ್ ಅವರ ಬೇರು ಇರುವುದು ಏಷ್ಯಾದಲ್ಲಿ ಹಾಗೂ ಅವರು ಹಿಂದೂ ಎಂಬುದು ತಳಮಟ್ಟದಲ್ಲಿ ಅವರ ವಿರುದ್ಧವಾಗಿ ಕೆಲಸ ಮಾಡಿರಬಹುದು. ಅಲ್ಲದೆ, ಇತರ ಹಲವು ವಿಷಯಗಳೂ ಅವರ ವಿರುದ್ಧ ಕೆಲಸ ಮಾಡಿರಬಹುದು.

ಅದೇನೇ ಇರಲಿ, ಟ್ರಸ್ ಅವರು ಗೆದ್ದರು ಹಾಗೂ ಪ್ರಧಾನಿಯಾಗಿ ನೇಮಕ ಆದರು. ಅವರು 50 ದಿನ ಮಾತ್ರ ಆ ಹುದ್ದೆಯಲ್ಲಿ ಇದ್ದರು ಎಂಬುದು ಇನ್ನೊಂದು ವಿಚಾರ. ಸುನಕ್ ಅವರು ಉನ್ನತ ಸ್ಥಾನಕ್ಕೆ ಬಂದಿರುವುದು ಭಾರತದ ಹಾಗೂ ಜಗತ್ತಿನ ಎಲ್ಲೆಡೆಗಳ ಪ್ರಜಾತಂತ್ರ ವ್ಯವಸ್ಥೆಗಳಿಗೆ ಹೆಮ್ಮೆಯ ಕ್ಷಣ. ಅದರಲ್ಲೂ ವಿಶೇಷವಾಗಿ, ಕರ್ನಾಟಕದ ಜನರಿಗೆ ಅದು ಇನ್ನೂ ಹೆಮ್ಮೆಯ ವಿಚಾರ. ಕನ್ನಡ ನಾಡಿನ ಅಳಿಯ ಬ್ರಿಟನ್ನಿನ ಪ್ರಧಾನಿ. ಅಲ್ಲಿನ ಪ್ರಧಾನಿ ನಿವಾಸದ ಸಿಬ್ಬಂದಿ ಮೊದಲ ಬಾರಿಗೆ ಕನ್ನಡದ ಮಾತುಗಳನ್ನು ಕೇಳಿಸಿಕೊಳ್ಳಲಿದ್ದಾರೆ.

ಚುರುಮುರಿ



ಪೊಲಿಟಿಕಲ್ ಡಿಎಲ್‌ಎಸ್

• ಲಿಂಗರಾಜು ಡಿ.ಎಸ್.

‘ಸಾ, ಐಪಿಎಲ್ ಆಟದಲ್ಲಿ ಮಳೆ ಬಂದು ಡಿಎಲ್‌ಎಸ್ ನಿಯಮದ ದೆಸಿಂದ ಒಳ್ಳೊಳ್ಳೆ ಟೀಮುಗಳೇ ನೀರು ಕುಡಿತಾವೆ!’ ಅಂತಂದೆ.

‘ಹ್ಞೂಂ ಕಯ್ಯಾ, ಮಳೆ ನಮಗೇ ಅಲ್ಲ ಕ್ರಿಕೆಟ್ಟಿನೋರಿಗೂ ರೋಸ್ತದೆ’ ಅಂತ ದನಿಗೂಡಿಸಿದರು.

‘ಡಿಎಲ್‌ಎಸ್ ನಿಯಮ ಕಂಡಿಡಿದೋರು ಯಾರು ಸಾ?’ ಕುತೂಹಲ ತೋರಿಸಿದೆ.

‘ಡಕ್ವರ್ತ್ ಲೂಯಿಸ್ ಸ್ಟರ್ನ್ ನಿಯಮ ಕಂಡಿಡಿದೋರು ರಾಜಕೀಯದೋರೆ ಕಲಾ! ಆ್ಯಕ್ಟ್ ಆಫ್ ಗಾಡ್‌ಗೆ ವಿರುದ್ಧವಾಗಿ ಮನುಷ್ಯನ ಆಟ ಇದು!’ ತುರೇಮಣೆ ಮಾತು ಕೇಳಿ ನನಗೆ ಆಶ್ಚರ್ಯ ಆಯ್ತು.

‘ಅದೆಂಗೆ?’ ಅಂತ ಪ್ರಶ್ನೆ ಕೇಳಿದೆ.

‘ಮಳೆ ಬಂದಾಗ ಆಟಕ್ಕೆ ಒಂದು ಪಲಿತಾಂಶ ಅಂತ ಬರೂದು ಬ್ಯಾಡವೇ? ಅದುಕ್ಕೇ ಇಷ್ಟು ಓವರ್ ಕೊಡ್ತೀವಿ ಇಷ್ಟು ರನ್ ಹೊಡದ್ರೆ ಗೆಲ್ಲತೀರ ಅಂತ ಟಾರ್ಗೆಟ್ಟು ಕೊಡ್ತರೆ!’ ಅವರ ಮಾತು ನನಗೇನೂ ಅರ್ಥಾಗಲಿಲ್ಲ.

‘ಅದೇನು ಅಂತ ಬಿಡಸೇಳಿ ಸಾ?’ ಅಂತ ಗೋಗರೆದೆ.

‘ನೋಡ್ಲಾ, ಎಲೆಕ್ಷನ್ ಫೈನಲ್ ಗೆಲ್ಲಕ್ಕೆ ಎಲ್ಲ ಪಕ್ಷಗಳು 150 ಪಾಯಿಂಟ್ ಟಾರ್ಗೆಟ್ ಮಾಡಿಕ್ಯಂಡವೆ. ಸರ್ಕಾರ ಮಾಡಕ್ಕೆ ಬೇಕಾದೋಟು ಸೀಟು ಬರದೇ ಇದ್ರೆ ಏನು ಮಾಡದು? ಆಗ ಸಾಂದರ್ಭಿಕ ಶಿಶು ‘ನನ್ನ ಕಡೆ ಸೀಟು ಇಷ್ಟು ನಿಮಗೆ ಕೊಟ್ಟೇನು, ಆದ್ರೆ ಸಿಎಂ ಮಾತ್ರ ನಾನೇ ಆಗಬೇಕು’ ಅಂತ ಯವಾರ ಸುರುಮಾಡ್ತದೆ. ಪಕ್ಷಗಳು ‘ಜನದ ಮನೆ ಹಾಳಾಗ್ಲಿ, ಅಧಿಕಾರ ಮುಖ್ಯ. ಜನದ ತಾವಿರೋ ಹದಿನೇಳು ಲಕ್ಷ ಕೋಟಿ ಕ್ಯಾಶು ನಮ್ಮ ತಿಜೋರಿಗೆ ಬಂದು ಬೀಳಬಕು!’ ಅಂತ ರೆಸಾರ್ಟಲ್ಲಿ ಸೀಟು ಪಾಲಾಕಿಕೊಳ್ಳೋ ಐನಾತಿ ಆಟಕ್ಕೆ ಸಮ್ಮಿಶ್ರ ಸರ್ಕಾರ ಅಂತ ಹೆಸರು ಕೊಟ್ಕಂದ್ರು!’

‘ಗೊತ್ತಾಯ್ತು ಬುಡಿ! ಡಿಎಲ್‌ಎಸ್ ಅಥವಾ ಡೆಪ್ಲಾಯಿಂಗ್ ಲೆಜಿಸ್ಲೇಚರ್ ಸೀಟ್ಸ್ ನಿಯಮದ ಮೂಲ ಕರ್ನಾಟಕವೇ ಅನ್ನಿ!’ ಅಂದು ನಮ್ಮ ರಾಜ್ಯದ ಸಾಧನೆ ಬಗ್ಗೆ ಹೆಮ್ಮೆಪಟ್ಟುಕೊಂಡೆ.

ದಿನದ ಟ್ವೀಟ್


ಉತ್ತೇಜನಕಾರಿ ತೀರ್ಪು



ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಮೀಸಲಾತಿಯ ಕಾನೂನುಬದ್ಧತೆಯನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ. ಬಡವರ ಕಲ್ಯಾಣದ ಬಗೆಗಿನ ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಗೆ ಇದರಿಂದ ಶ್ರೇಯ ಸಿಕ್ಕಂತಾಗಿದೆ. ಸಾಮಾಜಿಕ ನ್ಯಾಯ ಕಲ್ಪಿಸುವ ದಿಕ್ಕಿನಲ್ಲಿ ಇದೊಂದು ಉತ್ತೇಜನಕಾರಿ ತೀರ್ಪು.

ಬಿ.ಎಲ್.ಸಂತೋಷ್, ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ

ಕಿಡಿನುಡಿ



ಸಾಮಾಜಿಕ ಸ್ಥಿತಿಗತಿ ಆಧರಿಸಿ ಮೀಸಲಾತಿ ನಿರ್ಧಾರವಾಗಬೇಕೇ ವಿನಾ ಆರ್ಥಿಕ ಸ್ಥಿತಿಗತಿ ಆಧರಿಸಿ ಅಲ್ಲ. ಜನರ ಆರ್ಥಿಕ ಸ್ಥಿತಿಯು ಕಾಲಕಾಲಕ್ಕೆ ಬದಲಾಗುತ್ತಿರುತ್ತದೆ. ಆರ್ಥಿಕ ಸ್ಥಿತಿ ಆಧರಿಸಿದ ಮೀಸಲಾತಿಯು ಉತ್ತಮ ಬಡತನ ನಿರ್ಮೂಲನೆ ಕಾರ್ಯಕ್ರಮ ಆಗಬಲ್ಲದು. ಅದರಿಂದ ಸಾಮಾಜಿಕ ನ್ಯಾಯ ಸಾಧ್ಯವಿಲ್ಲ.

ಅನ್ಬುಮಣಿ ರಾಮದಾಸ್, ಪಿಎಂಕೆ ಮುಖ್ಯಸ್ಥ

25 ವರ್ಷಗಳ ಹಿಂದೆ

ಶನಿವಾರ, 8-11-1997

• **‘ಮುಖ್ಯಮಂತ್ರಿ ಸ್ಥಾನ ಬಿಡುತ್ತೇನೆ, ಏನಾದರೂ ಮಾಡಿಕೊಳ್ಳಿ’- ಪಟೇಲ್**

ಬೆಂಗಳೂರು, ನ. 7- ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ಪುತ್ರ ಎಚ್.ಡಿ. ರೇವಣ್ಣ ಅವರ ಮನೆಯಲ್ಲಿ ಈಚೆಗೆ ಕರೆದಿದ್ದ ಜನತಾದಳದ ಶಾಸಕರ ಸಭೆ ಬಗ್ಗೆ ಮನನೊಂದಿರುವ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು, ‘ಬೇಕಿದ್ದರೆ ಈ ಸ್ಥಾನ ಬಿಟ್ಟುಬಿಡುತ್ತೇನೆ; ಏನಾದರೂ ಮಾಡಿಕೊಳ್ಳಿ’ ಎಂದು ಸಂಪುಟ ಸಭೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಂಪುಟ ಸಭೆಯ ಕಾರ್ಯಕ್ರಮ ಪಟ್ಟಿಯ ವಿಷಯಗಳೆಲ್ಲಾ ಪೂರ್ಣಗೊಂಡ ನಂತರ ಪಟೇಲ್ ಅವರು ತಾವಾಗಿಯೇ ಶಾಸಕರ ಸಭೆ ವಿಷಯ ಪ್ರಸ್ತಾಪಿಸಿ, ‘ಈ ರೀತಿಯ ಚಟುವಟಿಕೆ ನೋಡಿ ಸಾಕಾಗಿಹೋಗಿದೆ. ಯಾಕೆ ಬೇಕಿತ್ತು ಇಂತಹ ಸಭೆ’ ಎಂದು ಅತೃಪ್ತಿ ಹೊರಗೆಡವಿದರು ಎಂದು ಹೇಳಲಾಗಿದೆ.

‘ರಾಜ್ಯದಾದ್ಯಂತ ಪ್ರವಾಸ ಮಾಡಿ ಅಭಿವೃದ್ಧಿ ಕಾರ್ಯಗಳನ್ನು ಪರಿಶೀಲಿಸಿ ಆಡಳಿತ ಯಂತ್ರವನ್ನು ಚುರುಕುಗೊಳಿಸಿರುವುದರಿಂದ ಜನತೆಯಲ್ಲಿ ಒಳ್ಳೆಯ ಭಾವನೆ ಮೂಡುತ್ತಿರುವಾಗ, ಈ ರೀತಿಯ ಸಭೆಗಳನ್ನು ನಡೆಸುವುದರಿಂದ ಸರ್ಕಾರ, ಪಕ್ಷದ ವರ್ಚಸ್ಸಿಗೆ ಧಕ್ಕೆ ಉಂಟಾಗುವುದಿಲ್ಲವೇ’ ಎಂದು ಪಟೇಲರು ಖಾರವಾಗಿಯೇ ಹೇಳಿ ದರು.

• **ಕೇಂದ್ರಕ್ಕೆ ಬೆಂಬಲ ವಾಪಸ್ ಡಿಎಂಕೆ ಬೆದರಿಕೆ**

ಚೆನ್ನೈ, ನ. 7 (ಪಿಟಿಐ)- ಕಾವೇರಿ ವಿವಾದದ ಬಗ್ಗೆ ಕೇಂದ್ರವು ತಾರತಮ್ಯ ನೀತಿ ಅನುಸರಿಸುತ್ತಿದೆ ಎಂದು ಇಂದು ಆರೋಪಿಸಿರುವ ತಮಿಳುನಾಡಿನ ಮುಖ್ಯಮಂತ್ರಿ ಎಂ. ಕರುಣಾನಿಧಿ ಅವರು, ಕೇಂದ್ರದ ಸಂಯುಕ್ತರಂಗ ಸರ್ಕಾರಕ್ಕೆ ನೀಡಿರುವ ಬೆಂಬಲ ವಾಪಸು ಪಡೆಯುವ ಬೆದರಿಕೆ ಹಾಕಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 8-11-1972

• **ಅಮೆರಿಕದಲ್ಲಿ ಮತದಾನ ಪ್ರಾರಂಭ**

ವಾಷಿಂಗ್ಟನ್, ನ. 7- ಅಮೆರಿಕದಲ್ಲಿ ಅಧ್ಯಕ್ಷ ಚುನಾವಣೆಗೆ ಮತದಾನ ಇಂದು ಪ್ರಾರಂಭವಾಯಿತು.

ರಿಪಬ್ಲಿಕನ್ ಅಭ್ಯರ್ಥಿ, ಹಾಲಿ ಅಧ್ಯಕ್ಷ ರಿಚರ್ಡ್ ನಿಕ್ಸನ್ ಅವರು ಅದ್ಭುತ ವಿಜಯ ಸಾಧಿಸಿ ಮತ್ತೆ ನಾಲ್ಕು ವರ್ಷ ಅಧಿಕಾರಕ್ಕೆ ಬರುವರೆಂದು ಜನಪ್ರಿಯ ಸಮೀಕ್ಷೆಗಳು ತಿಳಿಸಿವೆ.

1964ರಲ್ಲಿ ಜಾನ್ಸನ್ ಅವರು ಶೇ 61ರಷ್ಟು ಮತ ಪಡೆದು ದಾಖಲೆ ಸ್ಥಾಪಿಸಿದ್ದರು. ಈ ಚುನಾವಣೆಯಲ್ಲಿ ನಿಕ್ಸನ್ ಅವರಿಗೆ ಶೇ 62ರಷ್ಟು ಮತಗಳು ಬರುತ್ತವೆಂದು ಪೂರ್ವಭಾವಿ ಅಂದಾಜು ತಿಳಿಸಿರುವುದರಿಂದ ಅವರು ಹಿಂದಿನ ದಾಖಲೆ ಮುರಿಯುವ ಸಾಧ್ಯತೆ ಇದೆ.

• **ಕೋಮು, ಭಾಷಾ ವೈಷಮ್ಯ ರಾಷ್ಟ್ರದ ಶತ್ರುಗಳು: ಇಂದಿರಾ**

ಷಿಲ್ಲಾಂಗ್, ನ. 7- ಕೋಮು ಮತ್ತು ಭಾಷಾ ವೈಷಮ್ಯಗಳು ರಾಷ್ಟ್ರೀಯ ಮನೋಭಾವದ ಶತ್ರುಗಳೆಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ಇಂದು ಕಟುವಾಗಿ ಖಂಡಿಸಿದರು.

ಈಶಾನ್ಯ ಮಂಡಳಿಯ ಪುಸ್ತಕ ಭಂಡಾರದ ಸಭಾಭವನವನ್ನು ಉದ್ಘಾಟಿಸಿದ ಅವರು, ಅಸ್ಸಾಂನಲ್ಲಿ ಕಂಡುಬರುತ್ತಿರುವ ಸದ್ಯದ ಭಾಷಾ ಗಲಭೆಗಳನ್ನು ಪರೋಕ್ಷವಾಗಿ ಪ್ರಸ್ತಾಪಿಸಿ, ‘ಪ್ರಸ್ತುತದಲ್ಲಿ ಉದ್ವೇಗಭರಿತರಾಗಿರುವ ಜನರು, ವಿಶೇಷತಃ ತರುಣರು ತಾಳ್ಮೆಯ ದಾರಿ ಅನುಸರಿಸಬೇಕು’ ಎಂದರು.

ಸಂಗತ

ಗ್ರಹಣ: ಸರ್ವರಿಗೂ ಸಲ್ಲುವ ‘ಮುಕ್ತ ತರಗತಿ’

ಖಗೋಳ ವಿದ್ಯಮಾನಗಳ ಅಧ್ಯಯನ, ಸಂಶೋಧನೆಗೆ ಗ್ರಹಣವು ಪ್ರೇರಣೆಯಾಗಬೇಕೇ ವಿನಾ ಇಲ್ಲಸಲ್ಲದ ಮೌಢ್ಯ, ಅಂಧಾಚರಣೆಗೆ ನಾಂದಿಯಾಗಬಾರದು

• ಯೋಗಾನಂದ

ಅಕ್ಟೋಬರ್ 25ರಂದು ಸೂರ್ಯಗ್ರಹಣವಿತ್ತು. ಇಂದು (ನ. 8) ಚಂದ್ರಗ್ರಹಣ! ಇದೇನಿದು, ಒಂದೇ ಪಕ್ಷದಲ್ಲಿ ಎರಡು ಗ್ರಹಣಗಳೇ? ಪ್ರತೀ ಗ್ರಹಣದ ನಂತರ ಸೂರ್ಯ, ಚಂದ್ರ, ಭೂಮಿ ಹೆಚ್ಚುಕಡಿಮೆ ಅದೇ ರೇಖೆಯಲ್ಲಿರುವುದನ್ನು ಮುಂದುವರಿಸುವುದು ಸಂಭಾವ್ಯ. ಹಾಗಾಗಿ ಎರಡು ಅಥವಾ ಮೂರು ಗ್ರಹಣಗಳು ಅನುಕ್ರಮವಾಗಿ ಪರಿಣಮಿಸಬಹುದು. 2020ರಲ್ಲಿ ಜೂನ್ 5, ಜೂನ್ 21, ಜುಲೈ 5- ಕ್ರಮಗತಿಯಲ್ಲಿ ಚಂದ್ರಗ್ರಹಣ, ಸೂರ್ಯಗ್ರಹಣ, ಚಂದ್ರಗ್ರಹಣ ಘಟಿಸಿದ್ದವು. ಅಂದರೆ ಒಂದು ಚಾಂದ್ರಮಾಸದಲ್ಲಿ ಮೂರು ಗ್ರಹಣಗಳು. ಗ್ರಹಣಗಳ ‘ದಿಬ್ಬಣ’ ಖಗೋಳ ವಿದ್ಯಮಾನಗಳ ಅಧ್ಯಯನ, ಸಂಶೋಧನೆಗೆ ಪ್ರೇರಣೆಯಾಗಬೇಕೇ ವಿನಾ ಇಲ್ಲಸಲ್ಲದ ಮೌಢ್ಯ, ಅಂಧಾಚರಣೆಗಳಿಗೆ ನಾಂದಿಯಾಗಬಾರದು.

ತನ್ನ ಲಿಖಿತ ಇತಿಹಾಸಕ್ಕೆ ಪೂರ್ವದಿಂದಲೇ ಮನುಕುಲವು ಗ್ರಹಣಗಳನ್ನು ವೀಕ್ಷಿಸುತ್ತ ಬಂದಿದೆ. ಈ ದೀರ್ಘ ಅವಧಿಯಾದ್ಯಂತ ಭೌತಿಕ ಜಗತ್ತಿನ ನಮ್ಮ ವೈಜ್ಞಾನಿಕ ಅರಿವು ವ್ಯಾಪಕವಾಗಿ ವೃದ್ಧಿಸಿದೆ. ಕ್ರಿ.ಪೂ. 2500ರ ಸುಮಾರಿನಲ್ಲೇ ಬ್ಯಾಬಿಲೋನಿಯನ್ನರು ಹಾಗೂ ಚೀನೀಯರು ಗ್ರಹಣಗಳನ್ನು ಮೊದಲೇ ಗ್ರಹಿಸುತ್ತಿದ್ದರು. ಗ್ರಹಣಗಳು ಬ್ರಹ್ಮಾಂಡದ ಅದ್ಭುತ ಗಡಿಯಾರಗಳು ಎಂದು ಮಹಾನ್ ವಿಜ್ಞಾನಿ ನ್ಯೂಟನ್ ಅಚ್ಚರಿಪಟ್ಟಿದ್ದರು. ಪ್ರತೀ ಗ್ರಹಣವು ಬಹುತೇಕ ಎಲ್ಲಾ ಆಕಾಶಕಾಯಗಳು ದುಂಡಾಗಿವೆ, ನಿಯಮಿತ ಚಲನೆಗೆ ಒಳಪಟ್ಟಿವೆ ಎನ್ನುವುದರ ಸಾಬೀತು. ಒಂದೊಂದು ಸಂಪೂರ್ಣ ಸೂರ್ಯಗ್ರಹಣವಂತೂ ಬೆಳಕು ಗುರುತ್ವಕ್ಕೆ ಬಾಗಿ ಶರಣಾಗುತ್ತದೆ ಎಂಬ ಐನ್‌ಸ್ಟೀನರ ಸಾಪೇಕ್ಷತಾ ಸಿದ್ಧಾಂತಕ್ಕೆ ಅಮೋಘ ಸಮರ್ಥನೆ.

ಇಷ್ಟಾದರೂ ಗ್ರಹಣದ ಕುರಿತು ಹಲವು ಹಳೆಯ ನಂಬಿಕೆಗಳೇ ತಾಂಡವವಾಡುತ್ತವೆ. ಯಾರೋ ಸೂರ್ಯನನ್ನು ಅಪಹರಿಸಿದ್ದಾರೆ ಅಥವಾ ನುಂಗಿದ್ದಾರೆ, ಸೂರ್ಯ- ಚಂದ್ರರು ಪರಸ್ಪರ ಸಮರ ಹೂಡಿದ್ದಾರೆ ಎನ್ನುವಂತಹ ಮಾತುಗಳು ಕೇಳಿಬರುತ್ತವೆ. ಈ ದಿಸೆಯಲ್ಲಿ ವಿಚಾರವಾದಿ ಡಾ. ಎಚ್.ನರಸಿಂಹಯ್ಯ ಹೇಳುತ್ತಿದ್ದರು: ‘ಚಂದ್ರನು ಸೂರ್ಯನನ್ನು ಮರೆಯಾಗಿಸಿ ಕತ್ತಲು ಆವರಿಸಿದಾಗ ಆದಿಮಾನವ ಹೆದರಿ ಗುಹೆ ಹೊಕ್ಕ. ಆಧುನಿಕ ಮಾನವ ತಾನೇನು? ಮನೆಯೆಂಬ ಗವಿ ಸೇರಿದ!’

ಸೂರ್ಯನಿಂದ ಹೊರಟು ಕೋಟ್ಯಂತರ ಕಿ.ಮೀ. ಕ್ರಮಿಸಿ ಭೂಮಿಯನ್ನು ಸುರಕ್ಷಿತವಾಗಿ ತಲುಪುವ ವಿದ್ಯುತ್ ಕಾಂತೀಯ ವಿಕಿರಣಗಳನ್ನು ವಿಜ್ಞಾನಿಗಳು ಶತಮಾನಗಳಿಂದಲೂ ಅಭ್ಯಸಿಸಿದ್ದಾರೆ. ಗ್ರಹಣದಿಂದ ಭೂಮಿಯ ಜೀವಸಂಕುಲಕ್ಕೆ ಯಾವುದೇ ಕಂಟಕವಾಗದು. ಇಟಲಿಯಲ್ಲಿ ಗ್ರಹಣಗಳನ್ನು ವಿಪತ್ತುಗಳಿಗೆ ತಳುಕು ಹಾಕದೆ ವಿಶಿಷ್ಟವಾಗಿ ಬರಮಾಡಿಕೊಳ್ಳುತ್ತಾರೆ. ಚಂದ್ರಗ್ರಹಣ ನೋಡಿ ಕುಪ್ಪಳಿಸುತ್ತಾರೆ. ಸೂರ್ಯಗ್ರಹಣದ ಕಾಲದಲ್ಲಿ ಹೂ ಬಿಡುವ ಗಿಡಗಳನ್ನು ನೆಡುತ್ತಾರೆ. ಬಿಡುವ ಹೂವುಗಳು ಹೆಚ್ಚಿನ ಬಣ್ಣ ಬಣ್ಣಗಳಿಂದ ಕೂಡಿದ್ದು ಹಲ ದಿನಗಳವರೆಗೆ ತಾಜಾ ಇರುತ್ತವೆ ಎಂಬ ನಂಬಿಕೆ ಅವರಲ್ಲಿ.

ಇನ್ನು ಸೂರ್ಯಗ್ರಹಣವನ್ನು ನೋಡಬಾರದೆನ್ನಲು ಕಾರಣ ಸರಳವೇ ಇದೆ. ಎಂದಿನ ದಿನಗಳಲ್ಲಿ ಯಾರು ತಾನೆ ಝಳಪಿಸುವ ಸೂರ್ಯನನ್ನು ದೃಷ್ಟಿಸುತ್ತಾರೆ? ಸೂಕ್ತ ಸಲಕರಣೆಗಳನ್ನು ಧರಿಸಿ ಗ್ರಹಣ ವೀಕ್ಷಣೆಯ ಮಾತು ಬೇರೆ. ನೋಡಬಾರದ, ನೋಡಲಾಗದ ನೇಸರನನ್ನು ನೋಡಿದರೆ ಕಣ್ಣಿನ ರೆಪ್ಪೆ ತಂತಾನೇ ಮುಚ್ಚಿ ಕಣ್ಣಿಗೆ ರಕ್ಷಣೆ ನೀಡುತ್ತದೆ. ಅಂತೆಯೇ ಚಂದ್ರಗ್ರಹಣ ಜೀವವೈವಿಧ್ಯದ ಮೇಲೆ ಯಾವುದೇ ಮಾರಕ ಪರಿಣಾಮ ಬೀರದು.



ಚಂದ್ರನಿಗೆ ಗ್ರಹಣ ಹಿಡಿದಾಗ ಸೂರ್ಯನ ರಶ್ಮಿಗಳು ಭೂಮಿಯ ವಾತಾವರಣದ ಮೂಲಕ ಹಾದು ಚಂದ್ರನ ಮೇಲೆ ಬೀಳುತ್ತವೆ. ಹಾಗಾಗಿ ದೂಳು, ಕಸದ ಕಣಗಳ ಪ್ರತಿಫಲನದ ಪ್ರಭಾವದಿಂದ ಚಂದ್ರ ಯಾವುದೇ ಬಣ್ಣದಲ್ಲಿ ಕಾಣಿಸಬಹುದು. ಕೆಂಪೆಂದು ಕೇವಲ ಭಾಸವಾಗುವ ಚಂದ್ರನಿಗೆ ‘ರಕ್ತ ಚಂದ್ರ’ ಎಂದು ವ್ಯಾಖ್ಯಾನಿಸುವುದಿರಲಿ, ಇನ್ನೇನು ಪ್ರಳಯ, ವಿಪ್ಲವ ಹತ್ತಿರವೆಂಬ ಆತಂಕದ ಹಂಚಿಕೆ ಇದೆಯಲ್ಲ, ಅದು ಅಕ್ಷರಶಃ ಅಸಂಬದ್ಧ. ಯಾವುದೇ ಸನ್ನಿವೇಶವಿರಲಿ, ಚಂದ್ರ ವಿಶೇಷ ಕನ್ನಡಕದ ಮೂಲಕ ನೋಡುವಷ್ಟು ಅಪಾಯಕಾರಿ ಅಲ್ಲ. ಚಂದಿರನ ನೋಟವೇ ಭೂಮಿಯ ಪಾಲಿಗೆ ವರವೆನ್ನಿ. ಖಗೋಳದಲ್ಲಿನ ಯಾವುದೇ ಆಗುಹೋಗುಗಳು ಮನುಷ್ಯನ ವರ್ತನೆಯನ್ನು ನಿಯಂತ್ರಿಸುವುದಿಲ್ಲ. ಭವಿಷ್ಯದೊಂದಿಗೆ ಗ್ರಹಣಗಳನ್ನು ಹೊಂದಿಸುವುದು ಮಾನಸಿಕ ಭ್ರಮೆಯಷ್ಟೆ.

ಕಾಕತಾಳೀಯ ವಾದ ಮತ್ತು ಭ್ರಾಂತಿ ಒಂದೇ ನಾಣ್ಯದ ಎರಡು ಮುಖಗಳು. ಕ್ರಿ.ಪೂ. 763ರ ಜೂನ್ 15ರಂದು ಇರಾಕಿನ ಅಶೂರ್ ಎಂಬಲ್ಲಿ ಪ್ರಭುತ್ವದ ವಿರುದ್ಧ ಜನ ದಂಗೆ ಎದ್ದಿದ್ದಕ್ಕೆ ಆ ದಿನ ಗೋಚರಿಸಿದ್ದ ಸೂರ್ಯಗ್ರಹಣವನ್ನು ಆರೋಪಿಸಲಾಗಿತ್ತು. 1133ರ ಆಗಸ್ಟ್ 12ರಂದು ಇಂಗ್ಲೆಂಡಿನ ದೊರೆ ಮೊದಲನೇ ಹೆನ್ರಿ ವಿಧಿವಶರಾಗಿದ್ದಕ್ಕೂ ಅಂದು ಸಂಭವಿಸಿದ್ದ ಸಂಪೂರ್ಣ ಸೂರ್ಯಗ್ರಹಣಕ್ಕೂ ಸಂಬಂಧ ಕಲ್ಪಿಸಲಾಗಿತ್ತು.

ಇತಿಹಾಸದಲ್ಲಿ ದಾಖಲಾಗದ ಗ್ರಹಣಗಳು ಅವೆಷ್ಟೋ? ಗ್ರಹಣಗಳಿಗೆ ದಕ್ಷಿಣಧ್ರುವ, ಉತ್ತರಧ್ರುವ ಎಂಬ ತಾರತಮ್ಯವಿಲ್ಲ. ಗ್ರಹಣಗಳು ಸಂಭವಿಸದ ಭಾಗವಿಲ್ಲ. ಅವಕ್ಕೆ ಕಾಡೋ ಮೇಡೋ ಎಲ್ಲ ಒಂದೇ. ಅಂದಹಾಗೆ ಸೂರ್ಯಗ್ರಹಣವಿರಲಿ, ಚಂದ್ರಗ್ರಹಣ ಇರಲಿ ಸಂಭವಿಸಿದಾಗ ದೇಶಕ್ಕೆ, ಸಮಾಜಕ್ಕೆ ಒಳಿತುಗಳೂ ಆಗಿವೆ. ಅಂಥವನ್ನೇಕೆ ಉದಾಹರಿಸದೆ ಚರಿತ್ರೆ ನಮ್ಮನ್ನು ಕತ್ತಲಲ್ಲಿ ಇರಿಸುತ್ತದೆ? ಗ್ರಹಣ ಎಲ್ಲರಿಗೂ ತೆರೆಯುವ ಮುಕ್ತ ತರಗತಿ. ಆಸಕ್ತಿ, ಕುತೂಹಲದಿಂದ ಹಾಜರಾಗೋಣ.

ವಾಚಕರ ವಾಣಿ

ಸಂಕುಚಿತ ಮನಃಸ್ಥಿತಿ ಬದಲಾಗಲಿ

ನಾಲ್ಕನೆಯ ಬಾರಿಯೂ ಪತ್ನಿ ಹೆಣ್ಣು ಮಗುವಿಗೆ ಜನ್ಮ ನೀಡಿದ್ದರಿಂದ ಬೇಸರಗೊಂಡ ತಂದೆ ಆತ್ಮಹತ್ಯೆ ಮಾಡಿಕೊಂಡಿರುವ ಸುದ್ದಿ (ಪ್ರ.ವಾ., ನ. 7) ಓದಿ, ಜನ ಇನ್ನೂ ಯಾವ ಯುಗದಲ್ಲಿದ್ದಾರೆ ಅನ್ನಿಸಿತು. ಇಂದಿನ ಸಾಧನೆಯ ಹಾದಿಯಲ್ಲಿ ಹೆಣ್ಣು ಹೊಸ ಮೈಲಿಗಲ್ಲನ್ನು ನಿರ್ಮಿಸಿ ಸಾಗುತ್ತಿದ್ದಾಳೆ. ವಚನಗಳ ಕಾಲದಿಂದ ಹಿಡಿದು ಇಂದಿನ ಅಂತರಿಕ್ಷದ ಕಾಲದವರೆಗೂ ಯಶಸ್ಸಿನ ಮೆಟ್ಟಿಲೇರುತ್ತಾ ಹೋಗುತ್ತಿರುವ ಹೆಣ್ಣು ಮಕ್ಕಳು ಯಾವುದರಲ್ಲಿ ಕಡಿಮೆಯಿದ್ದಾರೆ? ಅತಿ ಸಂತಾನವೇ ತಪ್ಪಾಗಿರುವಾಗ, ಗಂಡು ಮಗುವಿಗಾಗಿ ಹಂಬಲಿಸಿ ನಾಲ್ಕು ಮಕ್ಕಳಾಗುವ ತನಕ ಕಾದು ಸಾವಿಗೆ ಶರಣಾದ ಇಂತಹ ಮನಃಸ್ಥಿತಿಯ ತಂದೆಗೆ ಏನು ಹೇಳುವುದು? ಅಮ್ಮ, ಅಕ್ಕ, ತಂಗಿ, ಅಜ್ಜಿ, ಮಡದಿ ಬೇಕು, ಆದರೆ ಮಗಳು ಬೇಡ! ಮನುಷ್ಯನ ಇಂತಹ ಸಂಕುಚಿತ ಮನಃಸ್ಥಿತಿ ಬದಲಾಗಬೇಕಿದೆ.

ಸಂತೆಬೆನ್ನೂರು ಫೈಜ್ನಟ್ರಾಜ್, ಸಂತೆಬೆನ್ನೂರು

ಎಥೆನಾಲ್: ಹೂಡಿಕೆಗೆ ಮುನ್ನ...

ಎಥೆನಾಲ್ ಉತ್ಪಾದನಾ ಕ್ಷೇತ್ರದಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆಗೆ ಉದ್ಯಮಿಗಳು ಮುಂದೆ ಬರಬೇಕು ಎಂದು ಎಂ.ಆರ್.ಎನ್. ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ವಿಜಯ್ ಎಂ.ನಿರಾಣಿ ಅವರು ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಕರೆ ನೀಡಿರುವುದು ಸರಿಯಾಗಿದೆ. ಆದರೆ ಎಥೆನಾಲ್ ಅನ್ನು ಉತ್ಪಾದಿಸುವ ಕಬ್ಬಿನ ಬೆಳೆಗೆ ಸರ್ಕಾರ ಮೊದಲು ವೈಜ್ಞಾನಿಕ ಬೆಲೆ ನಿಗದಿಪಡಿಸಬೇಕಿದೆ. ಅಷ್ಟೇ ಅಲ್ಲ, ಸಮಯಕ್ಕೆ ಸರಿಯಾಗಿ ಗುಣಮಟ್ಟದ ರಾಸಾಯನಿಕ ಗೊಬ್ಬರಗಳನ್ನು ಸಬ್ಸಿಡಿ ದರದಲ್ಲಿ ಪೂರೈಸಲು ಹಾಗೂ ಕಟಾವಿನ ನಂತರ ಕಬ್ಬು ಸಾಗಣೆಗೆ ಸೂಕ್ತ ವ್ಯವಸ್ಥೆ ಕಲ್ಪಿಸಲು ಮುಂದಾಗಬೇಕಿದೆ. ಹವಾಮಾನ ವೈಪರೀತ್ಯ, ಕೃಷಿ ಕ್ಷೇತ್ರದಲ್ಲಿನ ನಷ್ಟ ಸೇರಿದಂತೆ ಅನೇಕ ಕಾರಣಗಳಿಂದಾಗಿ ರೈತರಲ್ಲಿ ಕೃಷಿ ಬಗೆಗಿನ ಆಸಕ್ತಿಯೇ ಕುಂದಿದೆ. ಇಂಥ ಸಂದರ್ಭದಲ್ಲಿ ಸರ್ಕಾರವು ಮೂಲಕ್ಷೇತ್ರವನ್ನು ಸುಧಾರಿಸಿ ಬಳಿಕ ಹಸಿರು ಇಂಧನದ ಹೂಡಿಕೆಗಳತ್ತ ಗಮನ ಹರಿಸಲಿ.

ಶ್ರೀನಿವಾಸ್ ಚಕ್ರವರ್ತಿ, ಹೊಳಲು

ಪಕ್ಷಾಂತರಿಗಳಿಗೆ ಎಚ್ಚರಿಕೆಯ ಗಂಟೆ

ತೆಲಂಗಾಣದ ಮುನುಗೋಡು ವಿಧಾನಸಭಾ ಕ್ಷೇತ್ರಕ್ಕೆ ಇತ್ತೀಚೆಗೆ ನಡೆದ ಉಪ ಚುನಾವಣೆಯಲ್ಲಿ, ಈ ಹಿಂದೆ ಕಾಂಗ್ರೆಸ್‌ನಿಂದ ಗೆದ್ದಿದ್ದರೂ ಬಿಜೆಪಿ ಸೇರಿ ಕಣಕ್ಕಿಳಿದಿದ್ದ ಅಭ್ಯರ್ಥಿಯನ್ನು ಮತದಾರರು ಭಾರಿ ಅಂತರದಿಂದ ಸೋಲಿಸಿರುವುದು ಪಕ್ಷಾಂತರ ಮಾಡುವ ರಾಜಕಾರಣಿಗಳಿಗೆ ಎಚ್ಚರಿಕೆಯ ಗಂಟೆಯಂತಿದೆ. ಮತದಾರರು ಜಾಗೃತರಾಗುತ್ತಿರುವ ಸೂಚನೆಯೂ ಇದಾಗಿದೆ.

ನಿಜಕ್ಕೂ ಇಲ್ಲಿ ಪಾಠ ಕಲಿಯಬೇಕಿರುವುದು ಅಧಿಕಾರದ ಆಸೆಗೆ ಬಿದ್ದು ಮತದಾರರಿಗೆ ದ್ರೋಹ ಬಗೆಯುವ ರಾಜಕಾರಣಿಗಳು. ಆದ್ದರಿಂದ ಈ ಪಾಠ ಇಡೀ ದೇಶಕ್ಕೆ ಮಾದರಿಯಾಗಿದೆ. ನಿಧಾನವಾಗಿಯಾದರೂ ದೇಶದ ಮತದಾರರು ಪಕ್ಷಾಂತರಿಗಳಿಗೆ ತಕ್ಕಪಾಠ ಕಲಿಸಿ, ಪ್ರಜಾಪ್ರಭುತ್ವವನ್ನು ಸದೃಢಗೊಳಿಸುತ್ತಿರುವುದು ಶುಭ ಸೂಚನೆಯಾಗಿದೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ನಗದು...!

ಹೆಚ್ಚಳವಾಗಿದೆಯಂತೆ
ಜನರ ಕೈಯಲ್ಲಿ
ಶೇ 71ರಷ್ಟು ನಗದು!
ಆದರೇನಂತೆ...?
ಯಾರ ಮುಖವೂ
ನಗದು!

ಮ.ಗು.ಬಸವಣ್ಣ
ಸುತ್ತೂರು, ಮೈಸೂರು

ಪ್ರಜಾತಂತ್ರಕ್ಕೆ ಮಾರಕವಾಗುವ ಚಿಂತನೆ

‘ನ್ಯಾಯಮೂರ್ತಿಗಳನ್ನು ನೇಮಿಸುವ ಸುಪ್ರೀಂ ಕೋರ್ಟ್‌ನ ಕೊಲಿಜಿಯಂ ಪದ್ಧತಿ ಅಪಾರದರ್ಶಕವಾಗಿದ್ದು ಇದು ಬದಲಾಗಬೇಕು. ಸರ್ಕಾರವೇ ನ್ಯಾಯಮೂರ್ತಿಗಳನ್ನು ನೇಮಕ ಮಾಡುವ ಪದ್ಧತಿ ಎಲ್ಲ ರಾಷ್ಟ್ರಗಳಲ್ಲೂ ಇದೆ’ ಎಂದು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಆಘಾತಕಾರಿ ಹೇಳಿಕೆ (ಪ್ರ.ವಾ., ನ. 6) ನೀಡಿದ್ದಾರೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಸಂವಿಧಾನ, ಪ್ರಜಾತಂತ್ರದ ಅಡಿಪಾಯಗಳಾದ ಸ್ವಾಯತ್ತ ಸಂಸ್ಥೆಗಳನ್ನು ದುರ್ಬಲಗೊಳಿಸುತ್ತಾ ಬಂದಿದೆ. ರಾಜ್ಯಗಳಿಗೆ ಅನುದಾನ ಹಂಚಿಕೆ, ಜಿಎಸ್‌ಟಿಯಲ್ಲಿ ಪಕ್ಷಪಾತದ ಧೋರಣೆ ಅನುಸರಿಸಿ, ಒಕ್ಕೂಟ ವ್ಯವಸ್ಥೆಯ ಅಡಿಪಾಯವನ್ನು ದುರ್ಬಲಗೊಳಿಸುತ್ತಿದೆ. ರಾಜ್ಯಪಾಲರ ಮೂಲಕ ಚುನಾಯಿತ ಸರ್ಕಾರಗಳ ಆಡಳಿತದಲ್ಲಿ ಮೂಗು ತೂರಿಸಲಾಗುತ್ತಿದೆ. ಅಂತೆಯೇ ಪ್ರಜಾತಂತ್ರಕ್ಕೆ ಅಡಿಗಲ್ಲಾಗಿ ಉಳಿದಿರುವ ಸುಪ್ರೀಂ ಕೋರ್ಟಿನ ಹಕ್ಕುಗಳಿಗೂ ಚ್ಯುತಿ ತರುವಂತೆ, ನ್ಯಾಯಾಧೀಶರ ನೇಮಕಾತಿಯ ಹಕ್ಕನ್ನೂ ಸರ್ಕಾರ ಸ್ವಾಧೀನಕ್ಕೆ ಪಡೆದರೆ ದೇಶವು ಪ್ರಜಾತಾಂತ್ರಿಕವಾಗಿ ಉಳಿದೀತೆ?

ಕೆ.ಎನ್.ಭಗವಾನ್, ಬೆಂಗಳೂರು

ರೈತನ ಅಗತ್ಯಗಳಿಗೆ ಸಿಗಲಿ ಆದ್ಯತೆ

ಜಾಗತಿಕ ಹೂಡಿಕೆದಾರರ ಸಮಾವೇಶ (ಜಿಮ್) ಮೂರು ದಿನ ನಡೆದರೆ, ಕೃಷಿ ಮೇಳ ನಾಲ್ಕು ದಿನ ಸಾಗಿತು. ಇವು ಮುಗಿದ ನಂತರ ಸಂಘಟಕರು ನೀಡಿದ ಹೇಳಿಕೆಗಳನ್ನು ನೋಡಿದಾಗ ತತ್‌ಕ್ಷಣಕ್ಕೆ ಆಶಾದಾಯಕ ಎನಿಸಿದರೂ, ಅನುಷ್ಠಾನವು ಕಾಲಬದ್ಧ ರೀತಿಯಲ್ಲಿ ನಡೆದೀತೆ ಎಂಬ ಅನುಮಾನ ಮೂಡುತ್ತದೆ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳು ‘ಮುಂದಿನ ದಿನಗಳಲ್ಲಿ ಕೃಷಿಕರ ಹೊಲಗಳಲ್ಲಿ ಸಂಶೋಧನೆ’ ಎಂದರೆ, ‘ಜಿಮ್‌ನಲ್ಲಿ ನಡೆದಿರುವ ಒಪ್ಪಂದಗಳ ಅನುಷ್ಠಾನ ಮೂರು ತಿಂಗಳಲ್ಲಿ ಆರಂಭ’ ಎಂದಿದ್ದಾರೆ ಮುಖ್ಯಮಂತ್ರಿ. ಉದ್ಯಮಗಳು ಬರಲು ಲ್ಯಾಂಡ್ ಬ್ಯಾಂಕ್ ಒಂದೇ ಸಾಲದು. ರಾಷ್ಟ್ರೀಯ ಹೆದ್ದಾರಿ ಸಂಪರ್ಕ, ವಿಮಾನ ನಿಲ್ದಾಣಗಳು ಪೂರಕ ಸೌಕರ್ಯಗಳು ಅಷ್ಟೆ. ಉತ್ಪಾದನೆ ಸತತವಾಗಿ ನಡೆಯಲು ಬೇರೆ ಸೌಲಭ್ಯಗಳು ದೊರೆಯುವಲ್ಲಿ ತಡ ಆಗಬಾರದು.

ಕೃಷಿಕರ ಹೊಲಗಳಲ್ಲಿ ಈಗಾಗಲೇ ಕ್ಷೇತ್ರೋತ್ಸವ, ಪ್ರಾಯೋಜಿತ/ಪೈಲಟ್ ಪ್ರಯೋಗಗಳು ನಡೆದಿವೆ. ರೈತನ ದೃಷ್ಟಿಯಿಂದ ತುಂಬ ಅಗತ್ಯ ಅನಿಸಿದ ವಿಷಯಕ್ಕೆ ಆದ್ಯತೆ ಸಿಗಬೇಕಷ್ಟೆ. ‘ಸಂಶೋಧನೆಗಾಗಿ ಸಂಶೋಧನೆ’ ಅಲ್ಲ, ಕ್ಷೇತ್ರಮಟ್ಟದ ಕೆಲವು ಸಮಸ್ಯೆಗಳಾದರೂ ಪರಿಹಾರ ಆಗಬೇಕು. ವಿಶ್ವವಿದ್ಯಾಲಯಗಳ ಸಂಖ್ಯೆಯನ್ನು ಹೆಚ್ಚಿಸಲಾಗುತ್ತಿದೆ, ಅವುಗಳ ಉಪಯುಕ್ತತೆಯ ಬಗೆಗೆ ಹತ್ತು ವರ್ಷಗಳ ನಂತರವಾದರೂ ಸಮಗ್ರ ಸ್ವತಂತ್ರ ಅಧ್ಯಯನಗಳು ನಡೆಯುತ್ತಿಲ್ಲ. ಒಟ್ಟಿನಲ್ಲಿ ಸರ್ಕಾರದ ಚಿಂತನಾಕ್ರಮದಲ್ಲೇ ಬದಲಾವಣೆ ಬರಬೇಕಿದೆ. ಅನುದಾನ, ಸೌಲಭ್ಯ ಪಡೆಯುವ ಸಂಸ್ಥೆಗಳು ಆಗ ಸಮುದಾಯಕ್ಕೆ ಹೆಚ್ಚು ಉತ್ತರದಾಯಿ ಆಗಬಲ್ಲವು.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ತಾಯಿಕಾರ್ಡ್ ಮತ್ತಿತರ ಸವಲತ್ತು ಅನುಷ್ಠಾನದಲ್ಲಿ ಹಲವು ತೊಡಕು


ತಾಯಿ ಕಾರ್ಡ್ ಮತ್ತು ಆಧಾರ್ ಕಾರ್ಡ್ ಇಲ್ಲ ಎಂದು ತುಮಕೂರು ಜಿಲ್ಲಾ ಆಸ್ಪತ್ರೆಯಲ್ಲಿ ಗರ್ಭಿಣಿಯೊಬ್ಬರನ್ನು ದಾಖಲು ಮಾಡಿಕೊಳ್ಳದೇ ಇದ್ದ ಕಾರಣ, ಮನೆ ಹೆರಿಗೆ ವೇಳೆ ಆಕೆ ಮತ್ತು ಆಕೆಯ ಅವಳಿ ಶಿಶುಗಳು ಮೃತಪಟ್ಟ ಘಟನೆ ಇನ್ನೂ ಹಸಿಯಾಗೇ ಇದೆ. ಈ ಘಟನೆ ರಾಜ್ಯದಾದ್ಯಂತ ಆಕ್ರೋಶಕ್ಕೆ ಕಾರಣವಾಗಿದೆ. ಇದರ ಮಧ್ಯೆಯೇ, ಸಂಬಂಧಿತ ವೈದ್ಯಾಧಿಕಾರಿ ತಾನು ಕರ್ತವ್ಯಲೋಪ ಎಸಗಿಲ್ಲ ಎಂದಿದ್ದಾರೆ. ಆದರೆ, ತಾಯಿ ಕಾರ್ಡ್ ಇಲ್ಲದೇ ಇದ್ದರೂ ಚಿಕಿತ್ಸೆ ನೀಡಬೇಕು ಎನ್ನುತ್ತದೆ ಕೇಂದ್ರ ಆರೋಗ್ಯ ಸಚಿವಾಲಯದ ತಾಯಿ ಮತ್ತು ಶಿಶು ಕಾರ್ಡ್ ಮಾರ್ಗಸೂಚಿ. ರಾಜ್ಯ ಸರ್ಕಾರವೂ ಈ ಸಂಬಂಧ ಈಗಷ್ಟೇ ಆದೇಶ ಹೊರಡಿಸಿ, ದಾಖಲೆ ಇಲ್ಲದಿದ್ದರೆ ತುರ್ತು ಸಂದರ್ಭದಲ್ಲಿ ಚಿಕಿತ್ಸೆ ನಿರಾಕರಿಸುವಂತಿಲ್ಲ ಎಂದು ಹೇಳಿದೆ. ಆದರೆ, ಕೇಂದ್ರ ಸರ್ಕಾರವು 2018ರಲ್ಲೇ ಇಂತಹ ಮಾರ್ಗಸೂಚಿ ಹೊರಡಿಸಿದೆ. ಅದು ರಾಜ್ಯದಲ್ಲಿ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನವಾಗಿಲ್ಲ ಅಷ್ಟೆ. ರಾಜ್ಯದಾದ್ಯಂತ ತಾಯಿಕಾರ್ಡ್‌ನಿಂದ ವಂಚಿತರಾಗಿರುವ ಗರ್ಭಿಣಿಯರ ಸರಾಸರಿ ಪ್ರಮಾಣವು ಶೇ 2.4ರಷ್ಟಿದೆ. ತುಮಕೂರು ಜಿಲ್ಲೆಯಲ್ಲಿ ಅಂತಹ ವಂಚಿತರ ಪ್ರಮಾಣ ಶೇ 0.7ರಷ್ಟಿದೆ. ಗರ್ಭಿಣಿ, ತಾಯಿ ಮತ್ತು ಶಿಶು ಆರೈಕೆ ಉದ್ದೇಶದಿಂದ ಸರ್ಕಾರವು ಜಾರಿಗೆ ತಂದಿರುವ ಯೋಜನೆಗಳು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಜಾರಿಯಾಗುತ್ತಿಲ್ಲ ಎಂಬುದರತ್ತ ಬೊಟ್ಟುಮಾಡುತ್ತವೆ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ದತ್ತಾಂಶಗಳು

ತಾಯಿ ಕಾರ್ಡ್ ಇಲ್ಲವೆಂದು ಚಿಕಿತ್ಸೆ ನಿರಾಕರಿಸುವಂತೆಯೇ ಇಲ್ಲ

● ಜಯಸಿಂಹ ಆರ್.

ಗರ್ಭಿಣಿಯಾದ ದಿನದಿಂದ, ಹೆರಿಗೆಯ ನಂತರವೂ ಆಕೆಯ ಆರೋಗ್ಯದ ಮೇಲೆ ನಿಗಾ ಇರಿಸುವ ಉದ್ದೇಶದಿಂದ ತಾಯಿ ಕಾರ್ಡ್ ಯೋಜನೆ ಆರಂಭಿಸಲಾಗಿತ್ತು. ಆಸ್ಪತ್ರೆಗೆ ಬರುವ ಯಾವುದೇ ಗರ್ಭಿಣಿಯು ತಾಯಿ ಕಾರ್ಡ್‌ಗೆ ನೋಂದಣಿ ಮಾಡಿಕೊಳ್ಳದೇ ಇದ್ದರೆ, ನೋಂದಣಿ ಮಾಡಿಸಿ ತಾಯಿ ಕಾರ್ಡ್ ನೀಡುವ ಹೊಣೆ ಸರ್ಕಾರಿ ಆಸ್ಪತ್ರೆಯ ಸಿಬ್ಬಂದಿಯದ್ದಾಗಿರುತ್ತದೆ. ಆದರೆ, ರಾಜ್ಯದ ಗರ್ಭಿಣಿಯರಲ್ಲಿ ಶೇ 2.4ರಷ್ಟು ಮಂದಿ ಈ ಸವಲತ್ತಿನಿಂದ ವಂಚಿತರಾಗಿದ್ದಾರೆ ಎನ್ನುತ್ತದೆ ಎನ್‌ಎಫ್‌ಎಚ್‌ಎಸ್–5 ವರದಿ.

ಪ್ರಮಾಣವಾರು ಮಟ್ಟದಲ್ಲಿ ಈ ಸಂಖ್ಯೆ ಅತ್ಯಂತ ಕಡಿಮೆ. ತುಮಕೂರು ಜಿಲ್ಲೆಯಲ್ಲಿ ಈ ಸವಲತ್ತಿನಿಂದ ವಂಚಿತರಾದ ಗರ್ಭಿಣಿಯರ ಪ್ರಮಾಣ ಶೇ 0.7ರಷ್ಟು ಮಾತ್ರ. ಆದರೆ, ಅದೇ ಜಿಲ್ಲೆಯಲ್ಲಿ ತಾಯಿಕಾರ್ಡ್ ಇಲ್ಲ ಎಂಬ ಕಾರಣಕ್ಕೆ ಗರ್ಭಿಣಿಯೊಬ್ಬರಿಗೆ ಆಸ್ಪತ್ರೆಗೆ ದಾಖಲಾತಿ ಮತ್ತು ವೈದ್ಯಕೀಯ ಸೇವೆಯನ್ನು ನಿರಾಕರಿಸಲಾಗಿದೆ. ಆಸ್ಪತ್ರೆಗೆ ದಾಖಲಾಗದೇ ಇದ್ದ



ಕಾರಣ, ಮನೆಯಲ್ಲಿ ಹೆರಿಗೆಯಾಗಿ ಆ ವೇಳೆ ಆಕೆ ಮೃತಪಟ್ಟಿದ್ದಾರೆ. ಅವಳಿ ಮಕ್ಕಳೂ ಮೃತಪಟ್ಟಿವೆ. ಎನ್‌ಎಫ್‌ಎಚ್‌ಎಸ್–5ರ ದತ್ತಾಂಶಗಳ ಪ್ರಕಾರ ಐದು ವರ್ಷಗಳ ಅವಧಿಯಲ್ಲಿ ತುಮಕೂರು ಜಿಲ್ಲೆಯಲ್ಲಿ ಒಂದೂ ಮನೆ ಹೆರಿಗೆ ನಡೆದಿಲ್ಲ. ಆದರೆ, ಈಗ ವರದಿಯಾದ ಒಂದೇ ಮನೆಹೆರಿಗೆಯಲ್ಲಿ ತಾಯಿ ಮತ್ತು ಶಿಶುಗಳು ಸಾವಿಗೀಡಾಗಿವೆ.

ಗರ್ಭ ಧರಿಸಿದ ಮೂರು ತಿಂಗಳ ಒಳಗೆ ಮಹಿಳೆ ಈ ಕಾರ್ಡ್‌ಗೆ ನೋಂದಣಿ ಮಾಡಿಸಿಕೊಳ್ಳಬೇಕು. ಇಲ್ಲದೇ ಇದ್ದಲ್ಲಿ, ಮೂರು ತಿಂಗಳ ನಂತರ ಆಕೆ ಆಸ್ಪತ್ರೆಗೆ ನೀಡಿದ ಮೊದಲ ಭೇಟಿಯಲ್ಲೇ ಈ ಸೌಲಭ್ಯಕ್ಕೆ ಒಳಪಡಿಸುವ ಹೊಣೆ ಪ್ರತಿ ಸರ್ಕಾರಿ ಆಸ್ಪತ್ರೆಯ ಸಿಬ್ಬಂದಿಯದ್ದಾಗಿರುತ್ತದೆ. ಆರೋಗ್ಯ ಇಲಾಖೆಗೆ ಸಂಬಂಧಿಸಿದ ಯಾವುದೇ ಹಂತದ ಆಸ್ಪತ್ರೆ ಮತ್ತು ಆರೋಗ್ಯ ಕೇಂದ್ರಗಳಿಗೂ ಈ ಹೊಣೆ ಅನ್ವಯವಾಗುತ್ತದೆ.


ಪ್ರತಿ ಹೆರಿಗೆಯೂ ಆಸ್ಪತ್ರೆಯಲ್ಲೇ ನಡೆಯಬೇಕು ಎಂಬ ಉದ್ದೇಶದಿಂದ, 'ತಾಯಿ ಕಾರ್ಡ್ ಇಲ್ಲದೇ ಇದ್ದರೂ, ಹೆರಿಗೆ ನಡೆಸಬೇಕು. ತಾಯಿ ಕಾರ್ಡ್ ಇಲ್ಲ ಎಂಬ ಒಂದೇ ಕಾರಣಕ್ಕೆ ಆಸ್ಪತ್ರೆಗೆ ದಾಖಲಾತಿ ಮತ್ತು ಚಿಕಿತ್ಸೆಯನ್ನು ನಿರಾಕರಿಸುವಂತಿಲ್ಲ' ಎನ್ನುತ್ತದೆ ತಾಯಿ ಮತ್ತು ಶಿಶು ಕಾರ್ಡ್ ಮಾರ್ಗಸೂಚಿ. ಗರ್ಭಿಣಿಯು ತಾಯಿ ಕಾರ್ಡ್‌ಗೆ ನೋಂದಣಿಯಾಗಿದ್ದು, ಅವರ ಕಾರ್ಡ್ ಕಳೆದು ಹೋಗಿದ್ದರೂ ಅಥವಾ ಹರಿದುಹೋಗಿದ್ದರೂ ಚಿಕಿತ್ಸೆ ನಿರಾಕರಿಸುವಂತಿಲ್ಲ.

2018ರಿಂದಲೂ ಇದು ಜಾರಿಯಲ್ಲಿದೆ. ಆದರೆ, ರಾಜ್ಯದ ಆಸ್ಪತ್ರೆಗಳಲ್ಲಿ ಇದು ಪಾಲನೆಯಾಗುತ್ತಿರಲಿಲ್ಲ ಎಂಬುದನ್ನು ತುಮಕೂರಿನ ಘಟನೆ ಎತ್ತಿ ತೋರಿಸಿದೆ. ಈ ಮಾರ್ಗಸೂಚಿಯ ಬಗ್ಗೆ ಅರಿವೇ ಇರಲಿಲ್ಲ ಎಂಬುದನ್ನು ಸಂಬಂಧಿತ ವೈದ್ಯಾಧಿಕಾರಿಯ ಸಮಜಾಯಿಷಿಯಗಳು ಸೂಚಿಸುತ್ತವೆ.

ಸರ್ಕಾರಿ ಆಸ್ಪತ್ರೆಯಲ್ಲೂ ಹೆರಿಗೆಗೆ ಹಣ

ತುಮಕೂರು ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಾತಿ ಮತ್ತು ಚಿಕಿತ್ಸೆ ದೊರೆಯದೇ ಇದ್ದ ಕಾರಣಕ್ಕೆ ಆ ಗರ್ಭಿಣಿಯು, ಖಾಸಗಿ ಆಸ್ಪತ್ರೆಗೆ ಹೋಗುವ ಅನಿವಾರ್ಯತೆ ಉಂಟಾಗಿತ್ತು. ಆದರೆ ಹಣ ಇಲ್ಲದೇ ಇರುವ ಕಾರಣಕ್ಕೆ ಖಾಸಗಿ ಆಸ್ಪತ್ರೆಗೂ ಹೋಗಲಾಗದೆ, ಆ ಗರ್ಭಿಣಿ ಮನೆ ಹೆರಿಗೆಗೆ ಒಳಗಾಗಬೇಕಾಯಿತು. ಜಿಲ್ಲೆಯಲ್ಲಿ ಶೇ 100ರಷ್ಟು ಹೆರಿಗೆಗಳು ಆಸ್ಪತ್ರೆಯಲ್ಲೇ ನಡೆಯುತ್ತದೆ ಎಂದರೂ, ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಲ್ಲಿ ಪ್ರತಿ ಹೆರಿಗೆಗೆ ಯಾವುದೇ ರಸೀದಿ ಇಲ್ಲದೆ ₹4,533 ವೆಚ್ಚ ಮಾಡಬೇಕಾಗುತ್ತದೆ ಎನ್ನುತ್ತದೆ ಎನ್‌ಎಫ್‌ಎಚ್‌ಎಸ್ ದತ್ತಾಂಶ.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಇದೇ ಪರಿಸ್ಥಿತಿ ಇದೆ. ಕೆಲವು ಜಿಲ್ಲೆಗಳಲ್ಲಿ ಹೀಗೆ ವೆಚ್ಚ ಮಾಡಬೇಕಾದ ಹಣದ ಮೊತ್ತ ಕಡಿಮೆ ಇದ್ದರೆ, ಕೆಲವು ಜಿಲ್ಲೆಗಳಲ್ಲಿ ಹೆಚ್ಚು. ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಹೀಗೆ ಮಾಡಬೇಕಾದ ಸರಾಸರಿ ಮೊತ್ತವು ₹4,955ರಷ್ಟಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಎಲ್ಲಾ ಸವಲತ್ತುಗಳು ಉಚಿತವಾಗಿದ್ದರೂ, ಹಣ ವೆಚ್ಚ ಮಾಡದೆ ಹೆರಿಗೆ ನಡೆಯುವುದಿಲ್ಲ ಎಂಬುದನ್ನು ಇದು ಸೂಚಿಸುತ್ತದೆ.




ಪ್ರಸವಪೂರ್ವ ಆರೈಕೆಯಲ್ಲೂ ವಂಚಿತರು

ಗರ್ಭಧಾರಣೆಯ ಒಂಬತ್ತು ತಿಂಗಳ ಅವಧಿಯಲ್ಲಿ ಪ್ರತಿ ಗರ್ಭಿಣಿಯೂ ಕನಿಷ್ಠ ನಾಲ್ಕು ಬಾರಿ ಪ್ರಸವಪೂರ್ವ ಆರೈಕೆಗಾಗಿ ಆಸ್ಪತ್ರೆಗೆ ಭೇಟಿ ನೀಡಬೇಕು. ಪ್ರಸವಪೂರ್ವ ಆರೈಕೆ ಮತ್ತು ತಪಾಸಣೆಗೆ ಒಳಗಾಗುವಂತೆ ಆಯಾ ವಸತಿ ಪ್ರದೇಶದಲ್ಲಿರುವ ಗರ್ಭಿಣಿಯ ಮತ್ತು ಅವರ ಕುಟುಂಬದವರ ಮನವೊಲಿಸುವ ಹೊಣೆ ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು ಮತ್ತು ಸಂಬಂಧಿತ ಆಸ್ಪತ್ರೆಯ ಸ್ಟಾಫ್‌ನರ್ಸ್‌ಗಳದ್ದು ಎಂದು ತಾಯಿ ಮತ್ತು ಶಿಶು ಕಾರ್ಡ್ ಮಾರ್ಗಸೂಚಿಯಲ್ಲಿ ಹೇಳಲಾಗಿದೆ. ರಾಜ್ಯದಲ್ಲಿ ಇದನ್ನು ಜಾರಿಗೆ ತಂದಿದ್ದರೂ ಶೇ 30ರಷ್ಟು ಗರ್ಭಿಣಿಯರು ಈ ಸವಲತ್ತಿನಿಂದ ವಂಚಿತರಾಗಿದ್ದಾರೆ ಎನ್ನುತ್ತದೆ ಎನ್‌ಎಫ್‌ಎಚ್‌ಎಸ್ ದತ್ತಾಂಶ.

ತುಮಕೂರು ಜಿಲ್ಲೆಯಲ್ಲಿ ನಾಲ್ಕು ಮತ್ತು ಅದಕ್ಕಿಂತ ಹೆಚ್ಚು ಬಾರಿ ಆಸ್ಪತ್ರೆಗೆ ಭೇಟಿ ನೀಡುತ್ತಿರುವ ಗರ್ಭಿಣಿಯರ ಪ್ರಮಾಣ ಶೇ 80ರಷ್ಟಿದೆ. ಜಿಲ್ಲೆಯಲ್ಲಿ ಶೇ 20ರಷ್ಟು ಗರ್ಭಿಣಿಯರು ನಾಲ್ಕು ಬಾರಿ ತಪಾಸಣೆಗೆ ಒಳಗಾಗುವುದರಿಂದ ವಂಚಿತರಾಗಿದ್ದಾರೆ. ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಈ ಪರಿಸ್ಥಿತಿ ಇನ್ನೂ ಶೋಚನೀಯವಾಗಿದೆ. ರಾಜ್ಯದಲ್ಲಿ ಈ ಕಾರ್ಯಕ್ರಮವು ಪೂರ್ಣಪ್ರಮಾಣದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನವಾಗುತ್ತಿಲ್ಲ ಎಂಬುದನ್ನು ಈ ದತ್ತಾಂಶಗಳು ಹೇಳುತ್ತವೆ.

ಆರೈಕೆ ವಂಚಿತರ ಪ್ರಮಾಣ ಶೇ 40ಕ್ಕಿಂತ ಹೆಚ್ಚು ಇರುವ ಜಿಲ್ಲೆಗಳು




ಸುರಕ್ಷಿತ ಹೆರಿಗೆಗೆ ತಜ್ಞರ ಕೊರತೆ

ರಾಜ್ಯದಲ್ಲಿ ಕಳೆದ ಐದು ವರ್ಷಗಳಲ್ಲಿ ನಡೆದ ಒಟ್ಟು ಹೆರಿಗೆಗಳಲ್ಲಿ, ಶೇ 6.2ರಷ್ಟು ಹೆರಿಗೆಗಳು ತಜ್ಞ ಆರೋಗ್ಯ ಸಿಬ್ಬಂದಿ ಇಲ್ಲದೇ ನಡೆಯುತ್ತವೆ ಎನ್ನುತ್ತದೆ ಎನ್‌ಎಫ್‌ಎಚ್‌ಎಸ್ ದತ್ತಾಂಶಗಳು. ಹೆರಿಗೆ ಸಂದರ್ಭದಲ್ಲಿ ನುರಿತ ವೈದ್ಯರು, ದಾದಿಯರು, ಮಿಡ್‌ವೈಫ್ ಅಥವಾ ಮಹಿಳಾ ಆರೋಗ್ಯ ಅಧಿಕಾರಿ ಅಥವಾ ವೈದ್ಯಕೀಯ ಸಿಬ್ಬಂದಿ ಇರಬೇಕು. ಈ ಸಿಬ್ಬಂದಿಗಳಲ್ಲಿ ಯಾರೂ ಇಲ್ಲದೇ ಶೇ 6.2ರಷ್ಟು ಹೆರಿಗೆಗಳು ರಾಜ್ಯದಲ್ಲಿ ನಡೆದಿವೆ. ಕೆಲವು ಜಿಲ್ಲೆಗಳಲ್ಲಿ ಇಂತಹ ಹೆರಿಗೆಗಳ ಪ್ರಮಾಣ ಶೇ 10ಕ್ಕಿಂತಲೂ ಹೆಚ್ಚು ಇದೆ.

ರಾಜ್ಯದ ಆಸ್ಪತ್ರೆಗಳಲ್ಲಿ ಅಗತ್ಯ ಸಿಬ್ಬಂದಿ ಇಲ್ಲದೇ ಇರುವುದನ್ನು ಈ ದತ್ತಾಂಶಗಳು ಸೂಚಿಸುತ್ತವೆ. ಎಲ್ಲಾ ಸ್ವರೂಪದ ಆರೋಗ್ಯ ಕೇಂದ್ರಗಳು ಮತ್ತು ಆಸ್ಪತ್ರೆಗಳಲ್ಲಿ ಸಿಬ್ಬಂದಿ ಕೊರತೆ ಇದೆ ಹಾಗೂ ಇದರಿಂದ ಆರೋಗ್ಯ ಸೇವೆಯನ್ನು ಪರಿಣಾಮಕಾರಿಯಾಗಿ ನೀಡಲು ಸಾಧ್ಯವಾಗುತ್ತಿಲ್ಲ. ಇದರಿಂದ ತಾಯಿ ಮತ್ತು ಶಿಶುವಿನ ಜೀವಕ್ಕೆ ಹಾನಿಯಾಗುವ ಅಪಾಯವಿದೆ ಎಂಬುದನ್ನು ಈ ದತ್ತಾಂಶಗಳು ಒತ್ತಿ ಹೇಳುತ್ತವೆ.

ತಜ್ಞರಿಲ್ಲದೆ ನಡೆಯುವ ಹೆರಿಗೆಗಳ ಪ್ರಮಾಣ ಹೆಚ್ಚು ಇರುವ ಜಿಲ್ಲೆಗಳು



ಪ್ರಜಾವಾಣಿ ಗ್ರಾಫಿಕ್ಸ್

ಆಧಾರ: ಕೇಂದ್ರ ಆರೋಗ್ಯ ಸಚಿವಾಲಯದ ಎನ್‌ಎಫ್‌ಎಚ್‌ಎಸ್–5 ವರದಿ, 'ತಾಯಿ ಮತ್ತು ಶಿಶು ಕಾರ್ಡ್ ಮಾರ್ಗಸೂಚಿ'


ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಖಾಲಿ ಇರುವ ಎಲ್ಲಾ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೀಡಿರುವ ಭರವಸೆಯನ್ನು ನಂಬಬಹುದೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ವೇದವ್ಯಾಸರ ಶಿವಪುರಾಣಸಾರ





ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 269

ಶಿವನ ಮೆಚ್ಚಿದ ಸ್ತ್ರೀಯರು

ಮೇನಾದೇವಿಗೆ ಶಿವನನ್ನು ಕುರೂಪಿ ಎಂದು ತಿಳಿದಿದ್ದಕ್ಕೆ ಪಶ್ಚಾತ್ತಾಪವಾಯಿತು. ದೇವತೆಗಳು, ಮುನಿಗಳೆಲ್ಲ ಹೇಳಿದರೂ ನಂಬದೆ ಶಿವನ ರೂಪವನ್ನು ಅವಹೇಳನ ಮಾಡಿದ್ದಕ್ಕೆ ಶಿವನಲ್ಲಿ ಕ್ಷಮೆ ಕೋರಿದಳು. 'ಮಹೇಶ್ವರ, ನಿನ್ನಂತಹ ವರನನ್ನು ಪಡೆಯಲು ನನ್ನ ಪುತ್ರಿ ಏಕೆ ಘೋರತಪಸ್ಸು ಮಾಡಿದಳೆಂಬುದು ನನಗೀಗ ಅರ್ಥವಾಯಿತು. ಮಗಳ ತಪಸ್ಸಿನ ಪ್ರಭಾವದಿಂದ ನೀನು ಕಲ್ಯಾಣವಾಗಲು ನಮ್ಮ ಮನೆಗೇ ಬಂದಿರುವೆ. ಇದು ನನ್ನ ಮತ್ತು ಕುಟುಂಬದ ಸುಕೃತಫಲ ಎಂದು ನಂಬಿದ್ದೇನೆ. ನಿನ್ನಂಥ ಅಳಿಯನನ್ನು ಪಡೆದ ನಾನು ಮತ್ತು ನನ್ನ ಪತಿ ಧನ್ಯರು. ನಿನ್ನನ್ನು ಸರಿಯಾಗಿ ತಿಳಿಯದೆ, ಮಹಾಪಾಪಕರವಾದ ಶಿವನಿಂದೆ ಮಾಡಿರುವೆ. ಆ ಪಾಪವನ್ನು ಕ್ಷಮಿಸಿ, ಪ್ರಸನ್ನನಾಗು' ಎಂದು ಕೋರಿದಳು.

ಅಷ್ಟರಲ್ಲಿ ಶಿವನ ಸೌಂದರ್ಯದ ಸುದ್ದಿ ಹಿಮವಂತನ ರಾಜಧಾನಿಗೆಲ್ಲ ಹರಡಿ ಅನೇಕ ಸ್ತ್ರೀಯರು ತಮ್ಮ ಕೆಲಸಗಳನ್ನೆಲ್ಲಾ ಅರ್ಧದಲ್ಲೇ ಬಿಟ್ಟು ಶಿವನನ್ನು ನೋಡಲು ಬಂದರು. ಸ್ತ್ರೀಸಮೂಹದವರೆಲ್ಲ ಯಾವ ರೀತಿ ಆತುರಾತುರದಿಂದ ಧಾವಿಸಿ ಬಂದರೆಂದರೆ, ಓರ್ವ ಮಹಿಳೆ ಸ್ನಾನಮಾಡುತ್ತಿದ್ದವಳು ಶಂಕರನನ್ನು ನೋಡುವ ಕುತೂಹಲದಿಂದ ಸ್ನಾನಚೂರ್ಣವನ್ನು ಕೈಯಲ್ಲಿ ಹಿಡಿದುಕೊಂಡೇ ಬಂದಳು. ಇನ್ನೋರ್ವ ಸ್ತ್ರೀ ತನ್ನ ಮಗುವಿಗೆ ಹಾಲು ಕುಡಿಸುವುದನ್ನು ಬಿಟ್ಟು ಬಂದಿದ್ದಳು. ಗೃಹಿಣಿಯೊಬ್ಬಳು ತನ್ನ ಪತಿಗೆ ಬೀಸುತ್ತಿದ್ದ ಚಾಮರವನ್ನು ಕೈಯಲ್ಲಿ ಹಿಡಿದುಕೊಂಡೇ ಶಿವನನ್ನು ನೋಡಲು ಬಂದಿದ್ದಳು. ಒಡ್ಯಾಣವನ್ನು ಕಟ್ಟಿಕೊಳ್ಳುತ್ತಿದ್ದ ಮಹಿಳೆ ಒಡ್ಯಾಣವನ್ನು ಕೈಯ್ಯಲ್ಲೇ ಹಿಡಿದುಕೊಂಡು ಬಂದರೆ, ಶಿವನನ್ನು ನೋಡುವ ಆತುರದಲ್ಲಿ ಒಬ್ಬಳು ಸೀರೆಯನ್ನು ಅಸ್ತವ್ಯಸ್ತವಾಗಿ ಉಟ್ಟುಕೊಂಡು ಬಂದಿದ್ದಳು. ಒಟ್ಟಾರೆ, ಪಟ್ಟಣದ ಸ್ತ್ರೀಯರೆಲ್ಲ ಶಿವನ ಸುಂದರ ರೂಪ ನೋಡಲು ಲಗುಬಗೆಯಿಂದ ಓಡೋಡಿ ಬಂದಿದ್ದರು. ಶಿವನ ಸುಂದರರೂಪವವನ್ನು ನೋಡಿದ ಸ್ತ್ರೀಯರೆಲ್ಲ ಸಂತೋಷಸಾಗರದಲ್ಲಿ ಮುಳುಗಿದರು. ತಮ್ಮ ಹೃದಯದಲ್ಲಿ ಶಿವನ ಮೂರ್ತಿಯನ್ನು ಸ್ಥಾಪಿಸಿಕೊಂಡು ಕೃತಾರ್ಥರಾದರು. ಶಿವನನ್ನು ದರ್ಶನಮಾಡಿದ ಜನರ ನೇತ್ರಗಳು ಸಫಲವಾದವು ಎಂದು ಹಲವು ಸ್ತ್ರೀಯರು ಹೇಳಿದರೆ, ಇನ್ನೂ ಹಲವರು ಶಿವನ ರೂಪವನ್ನು ನೋಡಿದವರೆಲ್ಲರ ಜನ್ಮ ಸಾರ್ಥಕವಾಯಿತು ಅನ್ನುತ್ತಿದ್ದರು.

ಪಾರ್ವತಿ-ಶಿವರ ಮದುವೆಗಾಗಿ ಬ್ರಹ್ಮ ಮಾಡಿದ ಶ್ರಮ ಸ್ತುತ್ಯರ್ಹವಾದುದು. ಬ್ರಹ್ಮ ಯೋಗ್ಯವಾದ ಕಾರ್ಯವನ್ನು ಮಾಡಿದ್ದಾನೆ. ಈ ಜೋಡಿಯನ್ನು ಸೇರಿಸಲು ಪ್ರಯತ್ನಪಟ್ಟವರೆಲ್ಲರ ಶ್ರಮವೂ ಸಾರ್ಥಕವಾಯಿತು. ತಪಸ್ಸು ಮಾಡದೆ ಜನರಿಗೆ ಶಿವನ ದರ್ಶನವಾಗಲಾರದು. ಈಗ ಅನಾಯಾಸವಾಗಿ ಎಲ್ಲರಿಗೂ ಶಿವನ ದರ್ಶನವಾಗಿ ಕೃತಾರ್ಥರಾಗಿದ್ದಾರೆ. ಹಿಂದೆ ಲಕ್ಷ್ಮೀದೇವಿಯು ನಾರಾಯಣನನ್ನು ಪಡೆದಂತೆ, ಸರಸ್ವತೀದೇವಿಯು ಬ್ರಹ್ಮನನ್ನು ಸತಿಯನ್ನಾಗಿ ಪಡೆದಂತೆ, ಈಗ ಪಾರ್ವತೀದೇವಿಯು ಶಂಕರನನ್ನು ಪಡೆದು ಧನ್ಯಳಾದಳು. ಇಂಥ ದೈವಾಂಶ ಸಂಭೂತರಾದ ವಧು ಪಾರ್ವತಿ ಮತ್ತು ವರ ಶಿವನನ್ನು ನೋಡಿದ ಪುರದ ಮಹಿಳೆಯರಾದ ನಾವೆಲ್ಲರೂ ಧನ್ಯರಾದೆವು ಎಂದು ಕೃತಜ್ಞತೆ ವ್ಯಕ್ತಪಡಿಸಿದರು. ಮೇನಾದೇವಿ ಮತ್ತು ಹಿಮವಂತರ ಭಾಗ್ಯವನ್ನು ಕೊಂಡಾಡಿದರು. ನಗರದ ಸ್ತ್ರೀಯರು ಚಂದನಾಕ್ಷತೆಗಳಿಂದ ಶಿವನನ್ನು ಅರ್ಚಿಸಿ ಆದರದಿಂದ ಬರಮಾಡಿಕೊಂಡರು. ದೇವತೆಗಳು ಮೊದಲಾದವರು ಧನ್ಯತಾಭಾವ ತೋರಿದರು.

ಇಲ್ಲಿಗೆ ಪಾರ್ವತೀಖಂಡದ ನಲವತ್ತೈದನೆಯ ಅಧ್ಯಾಯ ಮುಗಿಯಿತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ ಡಿಜಿಟಲ್ ಪಾವತಿ ವ್ಯವಸ್ಥೆಯನ್ನು ದೇಶದಲ್ಲಿ ಹೆಚ್ಚಾಗಿ ಬಳಸಲಾಗುತ್ತಿದೆ. ಡಿಜಿಟಲ್ ಪಾವತಿಯಲ್ಲಿ ಮುಂಚೂಣಿಯಲ್ಲಿರುವ 'ಗೂಗಲ್ ಪೇ' ಕುರಿತ ಸುದ್ದಿಯೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (ಎನ್‌ಪಿಸಿಐ) ಅಡಿ ಗೂಗಲ್ ಪೇ ಅಧಿಕೃತ ಪಾವತಿ ವ್ಯವಸ್ಥೆ ಅಲ್ಲ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಪ್ರಕಟಿಸಿದೆ' ಎಂಬ ಸಂದೇಶಗಳು ಹರಿದಾಡುತ್ತಿವೆ. ಆದರೆ ಇದು ಸುಳ್ಳು ಮಾಹಿತಿ.



✓ ಗೂಗಲ್ ಪೇ ಬಳಸಿ ಮಾಡಲಾಗುವ ಯಾವುದೇ ಹಣ ವರ್ಗಾವಣೆಯಲ್ಲಿ ತೊಂದರೆ ಉಂಟಾದಲ್ಲಿ ಅದಕ್ಕೆ ಪರಿಹಾರ ಸಿಗುವುದಿಲ್ಲ ಎಂಬ ಅರ್ಥದಲ್ಲಿ ಆಗುತ್ತಿರುವ ಚರ್ಚೆಗಳ ಬಗ್ಗೆ ಕೇಂದ್ರ ಸರ್ಕಾರದ ಪಿಐಬಿ ಸ್ಪಷ್ಟನೆ ನೀಡಿದೆ. ಗೂಗಲ್ ಪೇ ಬಳಸದಂತೆ ಆರ್‌ಬಿಐ ಯಾವುದೇ ಸೂಚನೆ ನೀಡಿಲ್ಲ. ಎನ್‌ಪಿಸಿಐ ಪ್ರಕಾರ, ಗೂಗಲ್ ಪೇ ಭಾರತದಲ್ಲಿ ಅಧಿಕೃತ ಪಾವತಿ ವ್ಯವಸ್ಥೆಯಾಗಿದೆ ಎಂದು ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಅಂತರಂಗ - ಬಹಿರಂಗ

ಲೋಕವೆಲ್ಲವು ಚಿತ್ರವಿಂದ್ರಜಾಲದ ಕೃತ್ಯ |
ಸಾಕೆನದೆ ಬೇಕೆನದೆ ನೋಡು ನೀನದನು ||
ತಾಕಿಸದಿರಂತರಾತ್ಮಂಗಾ ವಿಚಿತ್ರವನು |
ಹಾಕು ವೇಷವ ನೀನು – ಮಂಕುತಿಮ್ಮ || 751 ||

ಪದ-ಅರ್ಥ: ಚಿತ್ರವಿಂದ್ರಜಾಲದ = ಚಿತ್ರವು+ಇಂದ್ರಜಾಲದ, ಸಾಕೆನದೆ = ಸಾಕು + ಎನದೆ, ನೀನದನು = ನೀನು + ಅದನು, ತಾಕಿಸದಿರಂತರಾತ್ಮಂಗಾವಿಚಿತ್ರವನು = ತಾಕಿಸದಿರು+ಅಂತರಾತ್ಮಂಗೆ + ಆ + ವಿಚಿತ್ರವನು.

ವಾಚ್ಯಾರ್ಥ: ಲೋಕವೆಂಬ ಚಿತ್ರ ಅದೊಂದು ಇಂದ್ರಜಾಲದ ಕಾರ್ಯ. ಅದನ್ನು ನೀನು ಸಾಕೆನದೆ, ಬೇಕೆನದೆ ನೋಡು. ಆದರೆ ಆ ವಿಚಿತ್ರವನ್ನು ಅಂತರಾತ್ಮಕ್ಕೆ ತಾಗಿಸಬೇಡ. ಕರ್ತವ್ಯಕ್ಕಾಗಿ ನೀನು ವೇಷವನ್ನು ಹಾಕು.

ವಿವರಣೆ: ಅದ್ಭುತವಾದ ವೈವಿಧ್ಯಗಳಿಂದ ಕೂಡಿದ ಪ್ರಪಂಚದ ವಿಸ್ತಾರ, ಮೆರಗು, ಬೆರಗು ಹುಟ್ಟಿಸುತ್ತದೆ. ಪ್ರತಿಬಾರಿಯೂ, ಪ್ರತಿಕ್ಷಣವೂ ಹೊಸತಾಗಿರುವಂತೆ ತೋರುತ್ತದೆ. ಶತಶತಮಾನಗಳಿಂದ ಮನುಷ್ಯ ಅದನ್ನು ಅರ್ಥಮಾಡಿಕೊಳ್ಳಲು ಹೆಣಗಿ ಸೋತಿದ್ದಾನೆ. ಯಾಕೆಂದರೆ ಪ್ರತಿಯೊಂದು ವಸ್ತುವಿಗೂ ಅನೇಕ ಮುಖಗಳು. ಒಮ್ಮೆ ಕಂಡದ್ದು ಮತ್ತೊಮ್ಮೆ ಬೇರೆಯಾಗಿಯೇ ಕಂಡೀತು. ಐವತ್ತು ವರ್ಷ ಜೊತೆಯಾಗಿಯೇ ಬದುಕಿದ ಗಂಡನಿಗೆ ಹೆಂಡತಿ ಅರ್ಥವಾಗಿಲ್ಲ, ಹೆಂಡತಿಗೆ ಗಂಡ ಅರ್ಥವಾಗಿಲ್ಲ. ಇನ್ನು ಪ್ರಪಂಚ ಅರ್ಥವಾಗುವುದು ಹೇಗೆ? ಮಳೆನೀರಿನ ತುಂತುರು ಹನಿಗಳ ಮತ್ತು ತೂರಿಬರುವ ಸೂರ್ಯಕಿರಣಗಳ ದಾಂಪತ್ಯ ಫಲ ಕಾಮನಬಿಲ್ಲು. ಏನದರ ಸೊಬಗು, ಚಿತ್ತಾರ! ಅದನ್ನು ನೋಡುವ ಕವಿಗೆ, ಕವಿಹೃದಯಕ್ಕೆ ಭಾವೋನ್ಮಾದ. ಆ ಕಾಮನಬಿಲ್ಲಿನಲ್ಲಿ ಏನಿದೆ? ಮೇಲೇರಿ ಕಾಣಹೋದರೆ ಸಿಕ್ಕೀತೇನು? ಬರೀ ಆವಿ! ಕಾಮನಬಿಲ್ಲನ್ನು ದೂರದಿಂದ, ಅದು ಇರುವತನಕ, ನೋಡಿ ಸಂತೋಷಪಡಬೇಕು. ಅದನ್ನು ಹುಡುಕಿದರೆ ಏನೂ ಇಲ್ಲ. ಬರೀ ಮಾಯೆ. ಕಗ್ಗ ಹೇಳುತ್ತದೆ, ಈ ಪ್ರಪಂಚವೆಲ್ಲ ಒಂದು ಇಂದ್ರಜಾಲದಂತೆ, ಕಾಮಬಿಲ್ಲಿನಂತೆ. ಅದನ್ನು ನೋಡು. ನೋಡುವುದಕ್ಕೆ ಬೇಸರ ಬೇಡ, ಸಾಕೆನಬೇಡ. ಇನ್ನೂ ನೋಡಬೇಕು ಎಂದು ಅತಿಯಾಸೆಯೂ ಬೇಡ. ಯಾಕೆಂದರೆ ನೀನು ಬೇಕೆಂದರೆ ಅದು ಇರುವುದೂ ಇಲ್ಲ. ಆದರೆ ಈ ನೊರೆಯಂತಿರುವ, ಮಾಯೆಯ ಪ್ರಪಂಚವನ್ನು ಅಂತರಂಗಕ್ಕೆ ತಾಕಿಸಬೇಡ. ಅಲ್ಲಿ ನಿರ್ಲಿಪ್ತತೆ ಇರಲಿ. ಅಲ್ಲಮನಾದಿಯಾಗಿ ಅನೇಕ ವಚನಕಾರರು ಅಣ್ಣ ಬಸವಣ್ಣನನ್ನು ಹಲವಾರು ರೀತಿಗಳಲ್ಲಿ ವರ್ಣಿಸಿದ್ದಾರೆ. ಅವನದು ಅನನ್ಯವಾದ ನಿರ್ಲಿಪ್ತ ಬದುಕು. ಹಾಗಾದರೆ ಪ್ರಪಂಚದ ಚಟುವಟಿಕೆಗಳಲ್ಲಿ ಆತ ಭಾಗವಹಿಸಲಿಲ್ಲವೆ? ಬಸವಣ್ಣನ ಸುತ್ತ ಬಹುದೊಡ್ಡ ಸಮಾಜ ಹರಡಿಕೊಂಡಿತ್ತು. ಮೈತುಂಬ ಜವಾಬ್ದಾರಿಯ ಕೆಲಸ. ಅಲ್ಲಿ ಒಂದಿನಿತೂ ತಪ್ಪು ಆಗಬಾರದು. ಅದರೊಂದಿಗೆ ಮಹಾಮನೆಗೆ ಬಂದ ಸಾವಿರಾರು ಸಂತರು, ಅತಿಥಿಗಳ ಆದರ ಸತ್ಕಾರದ ಹೊಣೆ. ಅವೆಲ್ಲ ಹೊರವೇಷಗಳು. ಬಸವಣ್ಣ ಹೊರಗೆ ಸತತವಾಗಿ ಪ್ರಪಂಚಕ್ಕೆ ಒಳಿತಾಗಲು ದುಡಿದಂತೆ, ಅಂತರಂಗದಲ್ಲಿ ನಿರ್ಮೋಹಿ, ನಿರ್ಲಿಪ್ತ. ಹೊರಗೆ ಜವಾಬ್ದಾರಿಯ ಭಾರ, ಒಳಗೆ ಸಂತತ್ವ. ಬಹಿರಂಗದಲ್ಲಿ ಲೋಕದ ಗದ್ದಲದ ಪ್ರಪಂಚದಲ್ಲಿ ಮುಖ್ಯ ಸೂತ್ರಧಾರ ಆದರೆ ಅಂತರಂಗದಲ್ಲಿ ಪ್ರಶಾಂತ ಮಹಾಮೌನಿ. ಬಹಿರಂಗದಲ್ಲಿ ಕರ್ಮಯೋಗಿಯಾದರೂ ಅಂತರಂಗದಲ್ಲಿ ಜೀವನ್ಮುಕ್ತ. ಇದು ಸಾರ್ಥಕ ಬದುಕಿಗೆ ಬೇಕಾದ ಗುಣ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ನವೆಂಬರ್ 8, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಪೂರ್ಣಿಮಾ ಗಂ. 16-32 ನಕ್ಷತ್ರ: ಭರಣಿ ಗಂ. 25-39 ಯೋಗ: ವ್ಯತೀಪಾತ ಗಂ. 21-45, ಕರಣ: ಬವ ಗಂ. 16-32, ತುಲಾ ಮಾಸದ 21 ನೇ ದಿನ. ರಾಹುಕಾಲ : ಮಧ್ಯಾಹ್ನ 03-00 – 04-30 ಸೂರ್ಯೋದಯ : 06-30 ಸೂರ್ಯಾಸ್ತ : 05-58 ಮುಸ್ಲಿಂ ದಿನಾಂಕ : 12 ರಬಿಯುಸ್ಸಾನಿ, ದಿನ ವಿಶೇಷ : ಕಾರ್ತಿಕ ಪೂರ್ಣಿಮಾ, ರಥಯಾತ್ರ(ಜೈನ್), ಗುರುನಾನಕ್ ಜಯಂತಿ, ಪುಷ್ಕರ ಉತ್ಸವ (ಅಜ್ಮೀರ), ಚಂದ್ರಗ್ರಹಣ (ಭಾರತದಲ್ಲಿ ಗೋಚರಿಸುತ್ತದೆ) ಅದೃಷ್ಟ ಸಂಖ್ಯೆ : 3, 11

ಮೇಷ: ಉನ್ನತ ಅಧಿಕಾರಿಗಳ ಭೇಟಿ ಸಂಭವ ಸಿಗಲಿದೆ. ಹೋಟೆಲ್ ಉದ್ಯಮದವರಿಗೆ ನಿತ್ಯದ ಆದಾಯದಲ್ಲಿ ಬಹಳ ವ್ಯತ್ಯಾಸ ಉಂಟಾಗುವುದು. ಸಾಂಸಾರಿಕ ಬದುಕಿನಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದು ಉತ್ತಮ ಬದುಕಿಗೆ ದಾರಿ.

ವೃಷಭ: ವಿದೇಶದಲ್ಲಿ ಉದ್ಯೋಗದ ಸಂಪಾದನೆಗಾಗಿ ಪ್ರಯತ್ನ ಮಾಡಬಹುದು. ಹೊಸ ಯೋಜನೆಗಳ ಬಗೆಗೆ ಸ್ನೇಹಿತರಲ್ಲಿ ಚರ್ಚಿಸಿ. ಆರೋಗ್ಯದಲ್ಲಾಗುವ ಬದಲಾವಣೆಗೆ ನಿಮ್ಮ ಆಹಾರವೇ ಮುಖ್ಯ ಕಾರಣವಾಗುವುದು.

ಮಿಥುನ: ದೇವರ ಆಶೀರ್ವಾದ ನಿಮ್ಮ ಮೇಲಿರುವುದರಿಂದ ಇಂದಿನ ಪ್ರಯಾಣ ಅನುಕೂಲಕರವಾಗಿ ಮತ್ತು ಅನಾಯಾಸವಾಗಿ ಇರುತ್ತದೆ. ಸಹೋದರರಲ್ಲಿ ಭಿನ್ನಾಭಿಪ್ರಾಯ ಮೂಡಿಸುವ ಕೆಲಸ ದಾಯಾದಿಗಳಿಂದ ನಡೆಯಬಹುದು.

ಕರ್ಕಾಟಕ: ಕಾನೂನು ವಿದ್ಯಾರ್ಥಿಗಳಿಗೆ ಅಥವಾ ನ್ಯಾಯಾಂಗ ಇಲಾಖೆಯವರಿಗೆ ಗೊಂದಲದ ವಾತಾವರಣ ಎದುರಾಗುವುದು. ಕೋರ್ಟು ವ್ಯವಹಾರ ಮುಂದುವರೆಯುವುದು. ಉದ್ಯೋಗಿಗಳಿಗೆ ಜವಾಬ್ದಾರಿ ದೊರೆಯಲಿದೆ.

ಸಿಂಹ: ನಿಮ್ಮ ಈ ದಿನ ಏಳಿಗೆಯು ಹತ್ತಾರು ಶತ್ರುಗಳನ್ನು ಹುಟ್ಟಿಸಿಕೊಳ್ಳಲಿದೆ. ಮೇಲಧಿಕಾರಿಗಳೊಂದಿಗಿನ ಉತ್ತಮ ಸಂಬಂಧದಿಂದಾಗಿ ಕೆಲಸ ಕಾರ್ಯಗಳು ಸುಗಮವಾಗುವುದು. ವಾಣಿಜ್ಯ ವ್ಯಾಪಾರಗಳಿಂದ ಅಧಿಕ ಲಾಭ.

ಕನ್ಯಾ: ನಿಮ್ಮಲ್ಲಿ ಹೆಚ್ಚಿನ ಕ್ರಿಯಾತ್ಮಕ ಶಕ್ತಿ ಇದೆ. ಆದರೆ ಕೆಲಸಗಳು ಕಾರ್ಯಗತವಾಗಲು ಆತುರ ತೋರಬೇಡಿ. ವಾಹನ ಖರೀದಿಯ ಬಗ್ಗೆ ಚಿಂತನೆ ಬರಲಿದೆ. ತಡವಾದ ಹಾಗೂ ಬಾಕಿಯುಳಿದ ಕಾರ್ಯಕ್ಕೆ ಇಂದು ಹೊಸ ಜೀವ ಬರುವುದು.

ತುಲಾ: ಸಮಸ್ಯೆಗೆ ಸಿಲುಕಿರುವ ನೀವು ನ್ಯಾಯ ಹೊಂದಲು ಕಷ್ಟಪಡಬೇಕಾಗಲಿದೆ. ಕೃಷಿ ಕಾರ್ಮಿಕರಿಗೆ ಕೆಲಸದಲ್ಲಿ ಬಿಡುವಿಲ್ಲದಂತೆ ಆಗುತ್ತದೆ. ಧಾರ್ಮಿಕ ವಿಚಾರಗಳಲ್ಲಿ ಶ್ರದ್ಧೆ ಮೂಡುವುದು. ಪುಣ್ಯಕ್ಷೇತ್ರಗಳ ದರ್ಶನದ ಯೋಗವಿದೆ.

ವೃಶ್ಚಿಕ: ಶ್ವಾಸಕೋಶಕ್ಕೆ ಸಂಬಂಧಪಟ್ಟ ಕಾಯಿಲೆಗಳ ಲಕ್ಷಣಗಳು ಗಮನಕ್ಕೆ ಬಂದಲ್ಲಿ, ತಕ್ಷಣವೇ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ ತೆಗೆದುಕೊಳ್ಳುವುದು ಉತ್ತಮ. ಅನಿರೀಕ್ಷಿತವಾಗಿ ಉಡುಗೊರೆ ಸಿಗಲಿದೆ.

ಧನು: ನೀವು ಕೈ ಹಾಕಿದ ಕೆಲಸಗಳು ಯಾವುದೇ ತೊಂದರೆ ಇಲ್ಲದೆ ನೆರವೇರುವುದು. ಗೆಳೆಯನಿಂದ ಎರಡು ದಿನಗಳವರೆಗಿನ ಆರ್ಥಿಕ ಸಹಾಯ ನಿರೀಕ್ಷಿಸಬಹುದು. ಆದಾಯದಲ್ಲಿ ವೃದ್ಧಿ ಕಂಡರೂ ನೆಮ್ಮದಿ ಕೊರತೆ ಎದ್ದುಕಾಣಲಿದೆ.

ಮಕರ: ಯಾವುದೇ ಅನಿವಾರ್ಯಗಳಿದ್ದರೂ ದೂರದ ಪ್ರಯಾಣ ಸರಿಯಲ್ಲ. ಅಧ್ಯಾಪಕ ವರ್ಗದವರಿಗೆ ಇಂದು ಹೆಚ್ಚಿನ ಕೆಲಸ ಇರುವುದು. ಮಕ್ಕಳ ಅಥವಾ ಸಾಕುಪ್ರಾಣಿಗಳ ಆರೋಗ್ಯ ವ್ಯತ್ಯಾಸದಿಂದ ಭಯ ಉಂಟಾಗಲಿದೆ.

ಕುಂಭ: ಮನೆ ಕಟ್ಟಡದ ಕೆಲಸಗಳು ಮುಕ್ತಾಯದ ಹಂತಕ್ಕೆ ತಲುಪುವುದು. ಮನೆಯಲ್ಲಿ ಮತ್ತು ಕುಟುಂಬ ಸದಸ್ಯರಲ್ಲಿ ನಿಮ್ಮ ಮಾತಿಗೆ ಮನ್ನಣೆ ದೊರೆಯಲಿದೆ. ಶಿಷ್ಟಾಚಾರಗಳನ್ನು ನಿಮ್ಮ ಕೆಲಸ ಕಾರ್ಯಗಳಲ್ಲಿ ಕಾಪಾಡಿಕೊಳ್ಳಿ.

ಮೀನ: ರಾಜಕೀಯ ವ್ಯಕ್ತಿಗಳಿಗೆ ಅಧಿಕಾರಿಗಳ ಭಯ ಉಂಟಾಗಲಿದೆ. ದೂರ ದೃಷ್ಟಿ ಇಟ್ಟುಕೊಂಡು ಕಾರ್ಯ ಪ್ರವೃತ್ತರಾಗುವುದು ಉತ್ತಮ. ಗುರಿ ಸಾಧನೆಗಳಿಗೆ ಮುಂದಿನ ದಿನಗಳಲ್ಲಿ ಒಳ್ಳೆಯ ಬೇಡಿಕೆ ಸಿಗುವುದು.

ಪದಬಂಧ 5132


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅದಲು ಬದಲು ಅಥವಾ ವಿರೋಧ (3)
3.ಸೂಕ್ತ ಕಾಲವಿದು (3)
5.ಗರುಡನ ಹತ್ತಿರ ಕಾಣುತ್ತಿರುವ ಚರ್ಮವಾದ್ಯ(4)
7.ಭಜನೆ ಮಾಡುತ್ತಲೇ ಬೇರೆಯಾಗುವಿಕೆ!(4)
9.ನಿಜವಾಗಿಯೂ ರಾತ್ರಿಯಿದು (3)
11.ಪೂಜ್ಯಳಾದ ಹೆಂಗಸು (2)
12.ಲಡಾಯಿ ನಡೆಯುವಾಗ ಕಾಣಿಸಿದ ದಾರದ ಉಂಡೆ (2)
13.ವಸತಿ ಹತ್ತಿರ ಉಪಪತ್ನಿ ಬಂದಿದ್ದಾಳೆ(3)
15.ಇದಿನ್ನೂ ಎಳೆ ಮಗು (4)
19.ಕೊಬ್ಬಿದ ಆನೆಯಿದು (4)
20.ಬಣ್ಣ ಹಚ್ಚಿ ಮಾಡಿರುವ ವಿಸ್ತಾರ ನಿರೂಪಣೆ(3)
21.ಲೀಲಾಜಾಲವಾಗಿ ನಡೆದ ಏಲಂ (3)

ಮೇಲಿಂದ ಕೆಳಕ್ಕೆ

1.ಸನಿಹದಲ್ಲಿರುವವ ಕೆಟ್ಟ ಚಟವುಳ್ಳವನು(3)
2.ಸರ ತಂದದ್ದಕ್ಕೇ ಈ ಸಂಭ್ರಮ! (4)
4.ಅನುಜನ ಬಳಿಯಿರುವ ರಾಕ್ಷಸ (3)
6.ಅಂಗವಿಕಲನು ಪ್ರವೇಶಿಸಿರುವ ಗುಹೆ (2)
8.ಎಲ್ಲೆ ಬಳಿ ತಲೆದೋರಿದ ಶೀತ (3)
10.ವಾಸಸ್ಥಾನ ಇಲ್ಲಿದೆ (3)
11.ಆರೋಹಣದಲ್ಲಿರುವ ಸವಾರ ಕಾಣುತ್ತಿದ್ದಾನೆಯೇ? (3)
14.ಎಳ್ಳು ನೀರು ಬಿಡುವಿಕೆ (4)
16.ಪರ್ಣ ಶಾಲೆಯ ಹತ್ತಿರವಿರುವ ಗರುಡ(3)
17.ಸುಗಮವಾಗಿ ಕಿತ್ತಿರುವ ಹೂ (2)
18.ಧಾನ್ಯಗಳನ್ನು ಶೇಖರಿಸುವ ನೆಲಮಾಳಿಗೆ(3)



5131ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹಗಲುಗನಸು
4.ತರತಮ 6.ಗಲಿಬಿಲಿ
8.ಕಟ್ಟಮಸ್ತು 10.ಕಸುಗಾಯಿ
12.ಹಲ್ಲುಪುಡಿ 13.ಅಡಿಪಾಯ
15.ಲಲಾಟಲಿಖಿತ

ಮೇಲಿಂದ ಕೆಳಕ್ಕೆ:
1.ಹದ್ದುಗಣ್ಣು 2.ಸುತ
3.ಧೂಮ 5.ತಥಾಸ್ತು
7.ಬಿಡಿಗಾಸು 8.ಕಡಾಯಿ
9.ಮಕಮಲ್ಲು 10.ಕನ್ನಡಿ
11.ಮಡಿವಂತ
13.ಅನ್ನ 14.ಯಲ

ಸುಡೊಕು 5518

	3			6				2
6		2	4		9		1	
						6		9
3		7	2			4		
		8		4			3	7
4					3	2		8
		9	8					4
8					4		2	
		3		2		7		6


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5517 ಸುಡೊಕು

4	5	7	2	6	8	1	9	3
9	2	6	1	3	5	4	7	8
1	8	3	7	4	9	2	5	6
6	3	1	4	5	2	7	8	9
5	7	2	8	9	6	3	4	1
8	9	4	3	7	1	5	6	2
3	6	9	5	1	4	8	2	7
2	1	5	6	8	7	9	3	4
7	4	8	9	2	3	6	1	5

ಅವಕಾಶ ಸಿಕ್ಕರೆ ರಾಜ್ಯ ರಾಜಕಾರಣಕ್ಕೆ: ಸಂಸದ ಸಿದ್ದೇಶ್ವರ


ಜಿ.ಎಂ.ಸಿದ್ದೇಶ್ವರ

ದಾವಣಗೆರೆ: 'ರಾಷ್ಟ್ರ, ರಾಜ್ಯ ನಾಯಕರು ಅವಕಾಶ ನೀಡಿದಲ್ಲಿ ರಾಜ್ಯ ರಾಜಕಾರಣಕ್ಕೆ ಬರುತ್ತೇನೆ' ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

'ಲೋಕಸಭೆ ಇಲ್ಲವೇ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಹೇಳಿದರೆ ಸ್ಪರ್ಧಿಸುತ್ತೇನೆ. ಏನೂ ಬೇಡ ಮನೆಯಲ್ಲೇ ಇರಿ ಎಂದರೂ ಮನೆಯಲ್ಲೇ ಇರುತ್ತೇನೆ. ಪಕ್ಷವು ನಾನು ಮತ್ತು ತಂದೆ ಮಲ್ಲಿಕಾರ್ಜುನಪ್ಪ ಅವರಿಗೆ ಸತತ 7 ಬಾರಿ ಲೋಕಸಭೆಗೆ ಟಿಕೆಟ್ ನೀಡಿದೆ. 6 ಬಾರಿ ಗೆದ್ದಿದ್ದೇವೆ. ಪಕ್ಷದ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಮುಖಂಡರು ಹೇಳಿದಂತೆ ನಡೆದುಕೊಳ್ಳುತ್ತೇನೆ' ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು. 'ರಾಜ್ಯ ರಾಜಕಾರಣಕ್ಕೆ ಬರುವುದಕ್ಕೆ ಇಷ್ಟ ಇಲ್ಲ. ಆದರೆ, ಪಕ್ಷ ಹೇಗೆ ಹೇಳುತ್ತದೋ ಹಾಗೆಯೇ ನಡೆದುಕೊಳ್ಳುತ್ತೇನೆ. ಪಕ್ಷಕ್ಕೆ ವ್ಯತಿರಿಕ್ತವಾಗಿ ಏನೂ ಮಾಡಲಾಗದು' ಎಂದರು.

ಶಿವಮೂರ್ತಿ ಮುರುಘಾ ಶರಣರ ವಿರುದ್ಧದ ಲೈಂಗಿಕ ದೌರ್ಜನ್ಯ ಪ್ರಕರಣ

ಮೂವರ ವಿರುದ್ಧ ದೋಷಾರೋಪ ಪಟ್ಟಿ

ಪ್ರಜಾವಾಣಿ ವಾರ್ತೆ


ಮುರುಘಾ ಶರಣರು

ಚಿತ್ರದುರ್ಗ: ಪ್ರೌಢಶಾಲೆಯ ಇಬ್ಬರು ವಿದ್ಯಾರ್ಥಿನಿಯರ ಮೇಲೆ ನಡೆದ ಲೈಂಗಿಕ ದೌರ್ಜನ್ಯ ಪ್ರಕರಣದ ತನಿಖೆ ಮುಂದುವರಿದಿದ್ದು, ಮೂವರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಪರಶುರಾಮ ತಿಳಿಸಿದರು.

'ಪ್ರಕರಣದ ತನಿಖೆಯನ್ನು ಭಾಗಶಃ ಪೂರ್ಣಗೊಳಿಸಿ ಅ.27ರಂದು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ನ್ಯಾಯಾಧೀಶರು ಇದನ್ನು ಇನ್ನೂ ಸ್ವೀಕರಿಸುವುದು ಬಾಕಿ ಇದೆ. ಅಂತಿಮ ದೋಷಾರೋಪ ಪಟ್ಟಿಗೆ ಪ್ರಕರಣದ ತನಿಖೆ ಮುಂದುವರಿದಿದ್ದು, ಶೀಘ್ರವೇ ಸಲ್ಲಿಕೆ ಮಾಡಲಾಗುವುದು' ಎಂದು ಸೋಮವಾರ ಸುದ್ದಿಗಾರರಿಗೆ ಮಾಹಿತಿ ನೀಡಿದರು.

'ಪ್ರಮುಖ ಆರೋಪಿ ಶಿವಮೂರ್ತಿ ಮುರುಘಾ ಶರಣರು, ಹಾಸ್ಟೆಲ್ ವಾರ್ಡನ್ ಹಾಗೂ ಮಠದ ವ್ಯವಸ್ಥಾಪಕ ಪರಮಶಿವಯ್ಯ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. 17 ವರ್ಷದ ಬಾಲಕ ಹಾಗೂ ಗಂಗಾಧರಯ್ಯ ಮೇಲಿನ ಆರೋಪಕ್ಕೆ ಪೂರಕ ಸಾಕ್ಷ್ಯಗಳು ಲಭ್ಯವಾಗಿಲ್ಲ' ಎಂದರು.

ಪೋಕ್ಸೊ ಪ್ರಕರಣದ ದೋಷಾರೋಪಪಟ್ಟಿ ಸಲ್ಲಿಕೆಗೆ 60 ದಿನಗಳ ಗಡುವು ಇದೆ. ನಿಗದಿತ ಕಾಲಮಿತಿಯಲ್ಲಿ 694 ಪುಟಗಳ ತನಿಖಾ ವರದಿಯನ್ನು ಡಿವೈಎಸ್‌ಪಿ ಅನಿಲ್‌ಕುಮಾರ್ ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪಂಗಡ ದೌರ್ಜನ್ಯ ತಡೆ ಕಾಯ್ದೆ ವ್ಯಾಪ್ತಿಗೆ ಒಬ್ಬ ವಿದ್ಯಾರ್ಥಿನಿ ಬರುವುದರಿಂದ ಎರಡು ಪ್ರತ್ಯೇಕ ದೋಷಾರೋಪ ಪಟ್ಟಿ ಸಿದ್ಧಪಡಿಸಲಾಗಿದೆ.

ಎಫ್‌ಎಸ್‌ಎಲ್ ವರದಿ ಬಾಕಿ: ಪ್ರಕರಣದ ತನಿಖೆಯಲ್ಲಿ ಪೊಲೀಸರು ಹಲವು ಸಾಕ್ಷ್ಯಗಳನ್ನು ಕಲೆಹಾಕಿದ್ದಾರೆ. ಆರೋಪಿಯ ಕೊಠಡಿಯಲ್ಲಿ ದೊರೆತ ವಸ್ತು, ಬಟ್ಟೆ, ಸಂತ್ರಸ್ತ ವಿದ್ಯಾರ್ಥಿನಿಯರ ಬಟ್ಟೆ ಸೇರಿ ಇತರ ವಸ್ತುಗಳನ್ನು ಸಂಗ್ರಹಿಸಲಾಗಿದೆ. ಪುರುಷತ್ವ ಪರೀಕ್ಷೆಯ ಸಂದರ್ಭದಲ್ಲಿ ಸಂಗ್ರಹಿಸಿದ ರಕ್ತ, ಕೂದಲು ಹಾಗೂ ಉಗುರಿನ ಮಾದರಿಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ.

'ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ ಮಾದರಿಗಳಲ್ಲಿ ಕೆಲವು ವರದಿ ಕೈ ಸೇರಿವೆ. ಇನ್ನೂ ಕೆಲವು ವರದಿಗಳಿಗೆ ಕಾಯಲಾಗುತ್ತಿದೆ' ಎಂದು ಪರಶುರಾಮ ಅವರು ತಿಳಿಸಿದರು.

ಮಾಹಿತಿ ಕೋರಿದ ಪೊಲೀಸರು

ಮುರುಘಾ ಮಠದಲ್ಲಿ ಲೈಂಗಿಕ ಶೋಷಣೆಗೆ ಗುರಿಯಾದವರು ಧೈರ್ಯವಾಗಿ ಮಾಹಿತಿ ನೀಡಬಹುದು. ಮಾಹಿತಿಯನ್ನು ಗೋಪ್ಯವಾಗಿಟ್ಟು ತನಿಖೆ ನಡೆಸಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಪರಶುರಾಮ ಮನವಿ ಮಾಡಿದರು. 'ಹಲವು ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ ಎಂಬ ವದಂತಿ ಹರಿದಾಡುತ್ತಿದೆ. ದೌರ್ಜನ್ಯದಿಂದ ನಲುಗಿದವರು ಸ್ವಯಂ ಪ್ರೇರಿತವಾಗಿ ಪೊಲೀಸರಿಗೆ ಮಾಹಿತಿ ನೀಡಬಹುದು. 'ಒಡನಾಡಿ' ಸೇವಾ ಸಂಸ್ಥೆಯ ಮುಖ್ಯಸ್ಥರ ಮಾಹಿತಿ ಆಧರಿಸಿ ಇಬ್ಬರ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ' ಎಂದು ಹೇಳಿದರು.

ಬಸವರಾಜನ್ ಹೇಳಿಕೆ ದಾಖಲು

ಮುರುಘಾ ಮಠದ ಮಾಜಿ ಆಡಳಿತಾಧಿಕಾರಿ ಎಸ್.ಕೆ.ಬಸವ ರಾಜನ್ ಅವರ ಹೇಳಿಕೆಯನ್ನು ಸಿಆರ್‌ಪಿಸಿ 164 ಅಡಿ ಸೋಮವಾರ ನ್ಯಾಯಾಧೀಶರ ಎದುರು ದಾಖಲಿಸಿ ಕೊಳ್ಳಲಾಯಿತು.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಬಸವರಾಜನ್ ಹಾಗೂ ಪತ್ನಿ ಸೌಭಾಗ್ಯ ಸೋಮವಾರ ಹಾಜರಾದರು. ನ್ಯಾಯಾಧೀಶೆ ಅನಿತಾಕುಮಾರಿ ಎದುರು ಬಸವರಾಜನ್ ಹೇಳಿಕೆ ದಾಖಲಿಸಿದರು. ನ್ಯಾಯಾಲಯದ ಸಮಯ ಮೀರಿದ್ದರಿಂದ ಸೌಭಾಗ್ಯ ಅವರ ಹೇಳಿಕೆ ಪಡೆಯುವ ಪ್ರಕ್ರಿಯೆ ಮಂಗಳವಾರ ನಡೆಯುವ ಸಾಧ್ಯತೆ ಇದೆ.

ಫೋಟೊ ಕಳವು: ಬಂಧನ

ಮುರುಘಾ ಮಠದ ರಾಜಾಂಗಣದಲ್ಲಿ ಅಳವಡಿಸಿದ್ದ ಶಿವಮೂರ್ತಿ ಮುರುಘಾ ಶರಣರ 47 ಫೋಟೊಗಳನ್ನು ಕಳವು ಮಾಡಿದ ಪ್ರಕರಣದಲ್ಲಿ ಇಬ್ಬರು ಆರೋಪಿಗಳನ್ನು ಗ್ರಾಮಾಂತರ ಠಾಣೆಯ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಚಿತ್ರದುರ್ಗ ತಾಲ್ಲೂಕಿನ ಹೊಸಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯ ಮೋಹನಮೂರ್ತಿ ಹಾಗೂ ಎಸ್‌ಜೆಎಂ ಪಾಲಿಟೆಕ್ನಿಕ್ ಕಾಲೇಜು ಉಪನ್ಯಾಸಕ ಶಿವಾನಂದಸ್ವಾಮಿ ಬಂಧಿತರು. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದ್ದು, ಮೋಹನಮೂರ್ತಿಯನ್ನು ಎರಡು ದಿನ ಪೊಲೀಸ್ ವಶಕ್ಕೆ ಪಡೆಯಲಾಗಿದೆ. ಶಿವಾನಂದಸ್ವಾಮಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಪರಶುರಾಮ ಮಾಹಿತಿ ನೀಡಿದ್ದಾರೆ.

ಸುದ್ದಿ 2 ನಿಮಿಷ

ಹೊಸ ಮಾರುಕಟ್ಟೆಯಲ್ಲಿ ಬೀಫ್ ಮಳಿಗೆ– ಶಾಸಕರ ವಿರೋಧ

ಮಂಗಳೂರು: ನಗರದ ಹಳೆ ಮಾರುಕಟ್ಟೆ ನೆಲಸಮಗೊಳಿಸಿರುವ ಸ್ಥಳದಲ್ಲಿ ₹ 114 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಕೇಂದ್ರ ಮಾರುಕಟ್ಟೆ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದ್ದು, ಇಲ್ಲಿ ದನದ ಮಾಂಸ (ಬೀಫ್) ಮಾರಾಟದ 9 ಮಳಿಗೆಗಳು ಇರಲಿವೆ ಎಂಬುದು ಯೋಜನಾ ವರದಿಯಲ್ಲಿದೆ.

ಇದಕ್ಕೆ ಶಾಸಕ ವೇದವ್ಯಾಸ್ ಕಾಮತ್ ವಿರೋಧ ವ್ಯಕ್ತಪಡಿಸಿದ್ದು, ಇಲ್ಲಿ ಬೀಫ್ ಮಳಿಗೆಗಳಿದ್ದರೆ ಮಾರುಕಟ್ಟೆ ನಿರ್ಮಾಣಕ್ಕೆ ಭೂಮಿಪೂಜೆಯನ್ನೇ ಮಾಡುವುದಿಲ್ಲ ಎಂದು ತಿಳಿಸಿದ್ದಾರೆ.

ಗೋಹತ್ಯೆ ನಿಷೇಧ ಕಾನೂನು ಜಾರಿಗೊಂಡಿದ್ದು ಮಾರುಕಟ್ಟೆಯಲ್ಲಿ ಬೀಫ್ ಮಳಿಗೆಗಳಿಗೆ ಅನುಮತಿ ನೀಡಲಾಗುವುದಿಲ್ಲ. ಹಿಂದೆ ಇದ್ದ ಪ್ರಸ್ತಾವವನ್ನು ಬದಲಾಯಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಅವರು ಹೇಳಿದ್ದಾರೆ.



'ಮಹಾನಗರ ಪಾಲಿಕೆಯ ಅಧೀನದಲ್ಲಿನ ಕೇಂದ್ರ ಮಾರುಕಟ್ಟೆ ನಿರ್ಮಾಣಕ್ಕೆ ಅಧಿಕೃತ ಶಿಲಾನ್ಯಾಸ ಕೈಗೊಂಡಿಲ್ಲ. ನಿರ್ಮಾಣ ಕಾಮಗಾರಿ ಇನ್ನಷ್ಟೇ ಪ್ರಾರಂಭಿಸಬೇಕಿದೆ. ಹಳೇ ಮಾರುಕಟ್ಟೆಯಲ್ಲಿ ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಮಾಂಸದ ಮತ್ತು ಇನ್ನಿತರ ಅಂಗಡಿ ಮುಂಗಟ್ಟುಗಳ ಆಧಾರದಲ್ಲಿ ಸ್ಮಾರ್ಟ್ ಸಿಟಿ ಬಹಳ ಹಿಂದೆ ಇದರ ರೂಪರೇಷೆ, ನಕ್ಷೆಯನ್ನು ತಯಾರಿಸಿತ್ತೇ ವಿನಾ ಯಾವುದೇ ಮಾಂಸದ ಅಂಗಡಿಗಳಿಗೆ ಟೆಂಡರ್ ಪ್ರಕ್ರಿಯೆಯನ್ನು ನಡೆಸಿ ಅನುಮತಿ ನೀಡಿಲ್ಲ' ಎಂದು ಮೇಯರ್ ಜಯಾನಂದ ಅಂಚನ್ ತಿಳಿಸಿದ್ದಾರೆ.

'ಆ ಮಳಿಗೆಗಳು ಮುಂದುವರಿಯಲಿವೆ. ಸರ್ಕಾರದಿಂದ ಬೀಫ್ ಮಳಿಗೆಗಳನ್ನು ನಿಷೇಧಿಸಬೇಕೆಂಬ ಆದೇಶ ಬಂದರೆ, ಅದನ್ನು ಪಾಲಿಸುತ್ತೇವೆ' ಎಂದು ಪಾಲಿಕೆ ಆಯುಕ್ತ ಅಕ್ಷಯ್ ಶ್ರೀಧರ್ ಪ್ರತಿಕ್ರಿಯಿಸಿದರು

ಚಿರತೆ ಪ್ರತ್ಯಕ್ಷ: ಅನಿರ್ದಿಷ್ಟಾವಧಿಗೆ ಕೆಆರ್‌ಎಸ್ ಪ್ರವೇಶ ನಿಷೇಧ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ಪ್ರಸಿದ್ಧ ಪ್ರವಾಸಿ ತಾಣ ಕೆಆರ್‌ಎಸ್ ಬೃಂದಾವನದಲ್ಲಿ ಭಾನುವಾರ ಮತ್ತು ಸೋಮವಾರ ಚಿರತೆ ಕಾಣಿಸಿಕೊಂಡ ಕಾರಣ, ಪ್ರವಾಸಿಗರಿಗೆ ಕೆಆರ್‌ಎಸ್ ಪ್ರವೇಶವನ್ನು ಅನಿರ್ದಿಷ್ಟಾವಧಿಗೆ ನಿಷೇಧಿಸಲಾಗಿದೆ ಎಂದು ಕಾವೇರಿ ನೀರಾವರಿ ನಿಗಮದ ಮೂಲಗಳು ತಿಳಿಸಿದೆ.

ಮೀನುಗಾರಿಕಾ ಇಲಾಖೆ ಬಳಿ ಸೋಮವಾರ ಸಂಜೆ ಕಾಣಿಸಿಕೊಂಡ ಚಿರತೆಯು ಕೊಳಗಳ ಬಳಿ ನಾಯಿ ಮೇಲೆ ದಾಳಿ ನಡೆಸಿತ್ತು. ಇದು ಪ್ರವಾಸಿಗರಲ್ಲಿ ಆತಂಕ ಮೂಡಿಸಿದೆ.

ಅ.21ರಿಂದ ನ.7ರವರೆಗೆ 3 ಬಾರಿ ಚಿರತೆ ಕಾಣಿಸಿಕೊಂಡಿದೆ. 21ರಂದು ಬೃಂದಾವನದ ದಕ್ಷಿಣ ದ್ವಾರದ ಬಳಿ ಕಾಣಿಸಿಕೊಂಡಿತ್ತು. 28ರಂದು ಉತ್ತರ ಭಾಗದಲ್ಲಿ ಓಡಾಡಿತ್ತು. 'ಚಿರತೆ ವಿಷಯ ಮುಚ್ಚಿಟ್ಟು ಸಾವಿರಾರು ಮಂದಿಗೆ ಪ್ರವೇಶ ನೀಡಿದ್ದು ಏಕೆ? ನಿಗಮದ ಅಧಿಕಾರಿಗಳಿಗೆ ಪ್ರವಾಸಿಗರ ಜೀವಕ್ಕಿಂತ ಆದಾಯವೇ ಮುಖ್ಯವಾಗಿದೆ' ಎಂದು ಪ್ರವಾಸಿಗರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನೇಣು ಹಾಕಿಕೊಂಡು ಇಬ್ಬರು ರೈತರ ಆತ್ಮಹತ್ಯೆ

ರಾಣೆಬೆನ್ನೂರು (ಹಾವೇರಿ ಜಿಲ್ಲೆ): ತಾಲ್ಲೂಕಿನ ನೂಕಾಪುರ ಗ್ರಾಮದ ರೈತ ಸಕ್ರೆಪ್ಪ ತಾವರೆಪ್ಪ ರಾಠೋಡ (45) ಹಾಗೂ ತಾಲ್ಲೂಕಿನ ಚಳಗೇರಿ ಗ್ರಾಮದ ರೈತ ನಾಗರಾಜ ನೀಲಕಂಠಪ್ಪ ಹೊನ್ನಕ್ಕಳವರ (32) ಸೋಮವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬೆಳೆ ಹಾನಿಯಾಗಿ ಕೃಷಿ ಚಟುವಟಿಕೆಗೆ ಮಾಡಿದ ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಈ ಎರಡು ಪ್ರತ್ಯೇಕ ಪ್ರಕರಣದ ದೂರಿನಲ್ಲಿ ತಿಳಿಸಲಾಗಿದೆ.

ಪ್ರತಿಭಟನೆ: ಮೃತ ರೈತನಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿ ತಾಲ್ಲೂಕು ರೈತ ಸಂಘದ ಪದಾಧಿಕಾರಿಗಳು ನಗರದ ಹಲಗೇರಿ ರಸ್ತೆಯ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಪ್ರತಿಭಟನೆ ನಡೆಸಿದರು. ಚಳಗೇರಿಯಲ್ಲಿ ಮೃತ ರೈತನ ಶವವನ್ನು ಬಸ್ ನಿಲ್ದಾಣದ ಬಳಿ ರಸ್ತೆಯಲ್ಲಿ ಇಟ್ಟು ರೈತ ಸಂಘದ ಪದಾಧಿಕಾರಿಗಳು ಹಾಗೂ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಮಠಾಧೀಶರ ಚಿಂತನಾ ಸಮಾವೇಶ 11ರಂದು

ಬೆಳಗಾವಿ: ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಜನ್ಮದಿನ ಅಂಗವಾಗಿ ಇಲ್ಲಿನ ಶಿವಬಸವ ನಗರದ ಆರ್.ಎನ್.ಶೆಟ್ಟಿ ಪಾಲಿಟೆಕ್ನಿಕ್‌ನಲ್ಲಿ ನ.11ರಂದು ಬೆಳಿಗ್ಗೆ 10.30ಕ್ಕೆ ಅಮೃತ ಮಹೋತ್ಸವ ಅಭಿನಂದನಾ ಸಮಾರಂಭ ಹಾಗೂ ಮಠಾಧೀಶರ ಚಿಂತನಾ ಸಮಾವೇಶ ಆಯೋಜಿಸಲಾಗಿದೆ.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ನಿಡಸೋಸಿಯ ಸಿದ್ಧಸಂಸ್ಥಾನ ಮಠದ ಪಂಚಮ ಶಿವಲಿಂಗೇಶ್ವರ ಸ್ವಾಮೀಜಿ ಮಾಹಿತಿ ನೀಡಿದರು. ಸಮಾವೇಶದಲ್ಲಿ ನಾಡಿನ ವಿವಿಧೆಡೆಯ 250ಕ್ಕೂ ಅಧಿಕ ಮಠಾಧೀಶರು ಭಾಗವಹಿಸುವರು' ಎಂದರು.

ಕೆಎಲ್‌ಇ ಸಂಸ್ಥೆಯ ನಿರ್ದೇಶಕ ಮಹಾಂತೇಶ ಕವಟಗಿಮಠ, ಬೆಳಗಾವಿಯ ಕಾರಂಜಿಮಠದ ಗುರುಸಿದ್ಧ ಸ್ವಾಮೀಜಿ, ನಾಗನೂರು ರುದ್ರಾಕ್ಷಿಮಠದ ಅಲ್ಲಮಪ್ರಭು ಸ್ವಾಮೀಜಿ, ಶೇಗುಣಸಿಯ ಮಹಾಂತ ಸ್ವಾಮೀಜಿ ಇದ್ದರು.

ಬೆಂಬಲ ಬೆಲೆಯಡಿ ಭತ್ತ ಖರೀದಿ: ವಾರದಲ್ಲಿ ನಿರ್ಧಾರ–ಸಿಎಂ

ಕರಾವಳಿಗರಿಗೆ ಪಡಿತರದಲ್ಲಿ ಕುಚಲಕ್ಕಿ

ಪ್ರಜಾವಾಣಿ ವಾರ್ತೆ

ಉಡುಪಿ: ಕರಾವಳಿ ಭಾಗದಲ್ಲಿ ಬೆಳೆಯುವ ಕುಚಲಕ್ಕಿ ಭತ್ತವನ್ನು ರೈತರಿಂದ ನೇರವಾಗಿ ಖರೀದಿಸಿ ಕರಾವಳಿ ಜಿಲ್ಲೆಗಳ ಬಿಪಿಎಲ್ ಕಾರ್ಡ್‌ದಾರರಿಗೆ ಕುಚಲಕ್ಕಿ ವಿತರಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದರು.

ಕಾಪುವಿನಲ್ಲಿ ಬಿಜೆಪಿಯ ಜನಸಂಕಲ್ಪ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, 'ಪಡಿತರದಲ್ಲಿ ಕುಚಲಕ್ಕಿ ಕೊಡಬೇಕು ಎಂಬ ಕರಾವಳಿಗರ ಬಹುದಿನಗಳ ಬೇಡಿಕೆಯನ್ನು ರಾಜ್ಯ ಸರ್ಕಾರ ಈಡೇರಿಸುತ್ತಿದೆ' ಎಂದು ಹೇಳಿದರು.

ಬೆಂಬಲ ಬೆಲೆಯಲ್ಲಿ ಭತ್ತ ಖರೀದಿ ಕೇಂದ್ರ ಆರಂಭಿಸುವ ಕುರಿತು ಬೆಂಗಳೂರಿಗೆ ತೆರಳಿದ ಕೂಡಲೇ ಸಭೆ ನಡೆಸಿ ಮುಂದಿನ ವಾರ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಅವರು ತಿಳಿಸಿದರು.

ಆಳಸಮುದ್ರ ಮೀನುಗಾರಿಕೆಗೆ ಅನುಕೂಲ ಆಗುವಂತೆ ಮೀನುಗಾರರಿಗೆ ಮೊದಲ ಹಂತದಲ್ಲಿ 100 ಹೈಸ್ಪೀಡ್ ಬೋಟ್‌ಗಳನ್ನು ನೀಡಲಾಗುವುದು. ಈಗಾಗಲೇ ಫಲಾನುಭವಿಗಳ ಆಯ್ಕೆ ನಡೆದಿದ್ದು ಸರ್ಕಾರದಿಂದ ಶೇ 40 ಸಹಾಯಧನ ಸಿಗಲಿದೆ. ಮೀನುಗಾರರು ಶೇ 10ರಷ್ಟು ಬಂಡವಾಳ ಹಾಕಿದರೆ ₹ 1.5 ಕೋಟಿ ಮೌಲ್ಯದ ದೊಡ್ಡ ಹೈಸ್ಪೀಡ್ ಬೋಟ್ ಸಿಗಲಿದೆ ಎಂದು ಹೇಳಿದರು.


ಕುಂದಾಪುರ ಸಮೀಪದ ಹೊಸಾಡು ಗ್ರಾಮದ ಮುಳ್ಳಿಕಟ್ಟೆಯ ನಗು ಸಿಟಿಯಲ್ಲಿ ಸೋಮವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಫಲಾನುಭವಿಗೆ ಟ್ರ್ಯಾಕ್ಟರ್ ಹಸ್ತಾಂತರಿಸಿದರು. ಶಾಸಕ ಬಿ.ಎಂ.ಸುಕುಮಾರ ಶೆಟ್ಟಿ ಇದ್ದರು

ಕ್ಷೇತ್ರ ಉಳಿಸಿಕೊಳ್ಳಲಿ: ಬಿಜೆಪಿ ಅಧಿಕಾರಕ್ಕೆ ಬರುವುದು ಸತ್ಯ: ಪೂರ್ವ ದಿಕ್ಕಿನಲ್ಲಿ ಸೂರ್ಯ ಉದಯಿಸುವುದು ಎಷ್ಟು ಸತ್ಯವೋ 2023ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದು ಅಷ್ಟೇ ಸತ್ಯ. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ದೂರದ ಮಾತು. ಕಾಂಗ್ರೆಸ್ ನಾಯಕರು ಮೊದಲು ತಮ್ಮ ಕ್ಷೇತ್ರಗಳನ್ನು ಉಳಿಸಿಕೊಳ್ಳಲಿ ಎಂದು ಸವಾಲು ಹಾಕಿದರು.

ಸಾಮಾಜಿಕ ನ್ಯಾಯ ಕಾಂಗ್ರೆಸ್‌ನ ಭಾಷಣದ ಸರಕಾಗಿದೆ. ಹಿಂದುಳಿದ ವರ್ಗಗಳ ಹೊಟ್ಟೆ ತುಂಬಿಸಲು ಅಹಿಂದ ಹೆಸರಿನಲ್ಲಿ ಸಿದ್ದರಾಮಯ್ಯ ಅವರು ತಾವು ಮುಂದೆ ಹೋದರೆ ಹೊರತು ಅಹಿಂದವನ್ನು ಹಿಂದೆ ತಳ್ಳಿದ್ದಾರೆ. ಹಿಂದುಳಿದ ವರ್ಗ ಕಾಂಗ್ರೆಸ್ ಮೇಲಿನ ವಿಶ್ವಾಸವನ್ನು ಕಳೆದುಕೊಂಡಿದೆ ಎಂದು ಅವರು ವಾಗ್ದಾಳಿ ನಡೆಸಿದರು.

> **ಸುರತ್ಕಲ್ ಟೋಲ್ ಗೇಟ್ ತೆರವುಗೊಳಿಸುವುದಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ವರದಿ ನೀಡಲಾಗಿದೆ. ಮುಂದಿನ ಕ್ರಮವನ್ನು ಆ ಪ್ರಾಧಿಕಾರವೇ ತೆಗೆದುಕೊಳ್ಳಲಿದೆ.**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಕಾವೇರಿ ನಿಸರ್ಗಧಾಮ; ಪ್ರವಾಸಿಗರಿಗೆ ಪ್ರವೇಶ ಬಂದ್

ಕುಶಾಲನಗರ (ಕೊಡಗು ಜಿಲ್ಲೆ): ಇಲ್ಲಿನ ಕಾವೇರಿ ನಿಸರ್ಗಧಾಮದ ತೂಗುಸೇತುವೆಯ ದುರಸ್ತಿ ಸಲುವಾಗಿ ನ.8ರಿಂದ ಪ್ರವಾಸಿಗರಿಗೆ ಪ್ರವೇಶ ನಿಷೇಧಿಸಲಾಗಿದೆ. ದುರಸ್ತಿ ಬಳಿಕ ಪ್ರವೇಶ ನೀಡಲಾಗುವುದು ಎಂದು ವಲಯ ಅರಣ್ಯಾಧಿಕಾರಿ ಶಿವರಾಮ್ ತಿಳಿಸಿದ್ದಾರೆ.

ಹಾರಂಗಿಯಲ್ಲಿ ನೂತನವಾಗಿ ಪ್ರಾರಂಭಿಸಿರುವ ಹಾರಂಗಿ ಸಸ್ಯೋದ್ಯಾನ ಹಾಗೂ ಸಾಕಾನೆ ಶಿಬಿರವು ಪ್ರವಾಸಿಗರ ವೀಕ್ಷಣೆಗೆ ತೆರೆದಿರುತ್ತದೆ ಎಂದಿದ್ದಾರೆ.

ಗುಜರಾತ್‌ನಲ್ಲಿ ಈಚೆಗೆ ಸಂಭವಿಸಿದ ತೂಗು ಸೇತುವೆ ದುರಂತದಿಂದ ಅರಣ್ಯ ಇಲಾಖೆ ಎಚ್ಚೆತ್ತುಗೊಂಡಿದ್ದು, ದುರಸ್ತಿ ಕಾರ್ಯ ಕೈಗೆತ್ತಿಕೊಂಡಿದೆ ಎಂದು ಮೂಲಗಳು ತಿಳಿಸಿವೆ.

ರಾಜಸ್ಥಾನ: ನೀರು ತರಲು ಹೋಗಿದ್ದ ದಲಿತನ ಮೇಲೆ ಹಲ್ಲೆ ನಡೆಸಿ ಕೊಲೆ

ಜೋಧಪುರ, (ಪಿಟಿಐ): 'ಗ್ರಾಮದಲ್ಲಿರುವ ಕೊಳವೆ ಬಾವಿಗೆ ನೀರು ತರಲು ಹೋಗಿದ್ದ ದಲಿತ ಸಮುದಾಯದ ಕಿಶನ್‌ಲಾಲ್ ಭೀಲ್ (46) ಎಂಬುವರ ಮೇಲೆ ಗುಂಪೊಂದು ಹಲ್ಲೆ ನಡೆಸಿ ಕೊಲೆ ಮಾಡಿದೆ. ರಾಜಸ್ಥಾನದ ಸೂರ್‌ಸಾಗರದ ಭೋಮಿಯಾಜಿಕಿ ಘಾಟಿಯಲ್ಲಿ ಘಟನೆ ನಡೆದಿದೆ' ಎಂದು ಪೊಲೀಸರು ಸೋಮವಾರ ಹೇಳಿದ್ದಾರೆ.

'ಗಂಭೀರವಾಗಿ ಗಾಯಗೊಂಡಿದ್ದ ಭೀಲ್ ಅವರನ್ನು ಆಸ್ಪತ್ರೆಗೆ ದಾಖಲಿಸಲು ಆರೋಪಿಗಳು ನಮಗೆ ಅವಕಾಶ ನೀಡಲಿಲ್ಲ. ಪೊಲೀಸರು ಬಂದ ನಂತರ ಆಸ್ಪತ್ರೆಗೆ ಸಾಗಿಸಲಾಯಿತು. ಚಿಕಿತ್ಸೆಗೆ ಸ್ಪಂದಿಸದೆ ಅವರು ಮೃತಪಟ್ಟರು' ಎಂದು ಭೀಲ್ ಅವರ ಸೋದರ ಅಶೋಕ್ ಆರೋಪಿಸಿದ್ದಾರೆ.

'ಘಟನೆ ಸಂಬಂಧ ಶಕೀಲ್, ನಾಸೀರ್ ಮತ್ತು ಬಬ್ಲು ಎಂಬುವರನ್ನು ಬಂಧಿಸಲಾಗಿದೆ. ಇವರ ವಿರುದ್ಧ ಎಸ್ಸಿ–ಎಸ್ಟಿ ದೌರ್ಜನ್ಯ ತಡೆ ಕಾಯ್ದೆ, ಐಪಿಸಿ ಸೆಕ್ಷನ್ 302ರ (ಕೊಲೆ) ಅಡಿಪ್ರಕರಣ ದಾಖಲಿಸಲಾಗಿದೆ. ಕೃತ್ಯದಲ್ಲಿ ಭಾಗಿಯಾಗಿರುವ ಇತರರಿಗಾಗಿ ಶೋಧ ನಡೆಸುತ್ತಿದ್ದೇವೆ' ಎಂದು ಸೂರ್‌ಸಾಗರ್ ಪೊಲೀಸ್ ಠಾಣೆಯ ಠಾಣಾಧಿಕಾರಿ ಗೌತಮ್ ದೊತಾಸರಾ ಅವರು ಹೇಳಿದ್ದಾರೆ.

ಅಂಬೇಡ್ಕರ್ ಪ್ರತಿಮೆ ವಿರೂಪ: ಪ್ರತಿಭಟನಕಾರರ ಮೇಲೆ ಲಾಠಿ ಪ್ರಹಾರ

ಅಯೋಧ್ಯಾ, ಉತ್ತರ ಪ್ರದೇಶ (ಪಿಟಿಐ): ಅಂಬೇಡ್ಕರ್ ನಗರ ಜಿಲ್ಲೆಯಲ್ಲಿ ಕಿಡಿಗೇಡಿಗಳು ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ವಿರೂಪಗೊಳಿಸಿದ್ದನ್ನು ಖಂಡಿಸಿ ಪ್ರತಿಭಟನೆ ನಡೆಸುತ್ತಿದ್ದ ಭೀಮ್ ಆರ್ಮಿ ಕಾರ್ಯಕರ್ತರ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿದ್ದಾರೆ.

ಇಲ್ಲಿನ ವಾಜಿವಿಷಯ ತಿಳಿದೊಡನೆ ದೊಡ್ಡ ಸಂಖ್ಯೆಯಲ್ಲಿ ಪ್ರತಿಮೆ ಇದ್ದ ಸ್ಥಳದಲ್ಲಿ ಜಮಾವಣೆಗೊಂಡಿದ್ದ ಸ್ಥಳೀಯರು ಪ್ರತಿಭಟನೆ ನಡೆಸಿದ್ದರು. ಮಹಿಳೆಯರೇ ಅಧಿಕ ಸಂಖ್ಯೆಯಲ್ಲಿದ್ದರು.

'ಪ್ರತಿಭಟನಾ ಸ್ಥಳಕ್ಕೆ ತೆರಳಿದ್ದ ಮಹಿಳಾ ಕಾನ್‌ಸ್ಟೆಬಲ್ ಮೇಲೆ ಮಹಿಳೆಯರು ಹಲ್ಲೆ ನಡೆಸಿದ್ದರು. ಹೀಗಾಗಿ ಗುಂಪು ಚದುರಿಸಲು ಲಾಠಿ ಪ್ರಹಾರ ನಡೆಸಬೇಕಾಯಿತು' ಎಂದು ಅಂಬೇಡ್ಕರ್ ನಗರ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ಅಜಿತ್ ಕುಮಾರ್ ಸಿನ್ಹಾ ತಿಳಿಸಿದ್ದಾರೆ.

ಪೊಲೀಸರು ಪ್ರತಿಭಟನನಿರತ ಮಹಿಳೆಯರ ಮೇಲೆ ಲಾಠಿ ಪ್ರಹಾರ ನಡೆಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ. ಪೊಲೀಸ್ ಸಿಬ್ಬಂದಿ ಲಾಠಿಯಿಂದ ಮಹಿಳೆಯೊಬ್ಬರನ್ನು ಹಿಗ್ಗಾಮುಗ್ಗಾ ಥಳಿಸುತ್ತಿರುವ ಹಾಗೂ ಪ್ರತಿಭಟನಕಾರರ ಮೇಲೆ ಕಲ್ಲು ತೂರುತ್ತಿರುವ ದೃಶ್ಯ ಈ ವಿಡಿಯೊದಲ್ಲಿದೆ. ಈ ವಿಡಿಯೊವನ್ನು ಟ್ವಿಟರ್‌ನಲ್ಲಿ ಹಾಕಿರುವ ಭೀಮ್ ಆರ್ಮಿ ಮುಖ್ಯಸ್ಥ ಚಂದ್ರಶೇಖರ್ ಆಜಾದ್ ಅವರು ಉತ್ತರ ಪ್ರದೇಶ ಸರ್ಕಾರ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಹರಿಹಾಯ್ದಿದ್ದಾರೆ.

ಸಂಕ್ಷಿಪ್ತ ಸುದ್ದಿ

ಗುಜರಾತ್ ಸರ್ಕಾರಕ್ಕೆ ನೋಟಿಸ್

ಅಹಮದಾಬಾದ್ (ಪಿಟಿಐ): ಗುಜರಾತ್‌ನ ಮೊರ್ಬಿ ಸೇತುವೆ ಕುಸಿತದ ದುರಂತಕ್ಕೆ ಸಂಬಂಧಿಸಿದಂತೆ ಗುಜರಾತ್ ಹೈಕೋರ್ಟ್ ಸೋಮವಾರ ಸ್ವಯಂ ಪ್ರೇರಿತವಾಗಿ ಮೊಕದ್ದಮೆ ದಾಖಲಿಸಿಕೊಂಡಿದೆ. ಜೊತೆಗೆ, ರಾಜ್ಯ ಸರ್ಕಾರ ಮತ್ತು ಸಂಬಂಧಪಟ್ಟ ಸ್ಥಳೀಯಾಡಳಿತಗಳಿಗೆ ನೋಟಿಸ್ ನೀಡಿದೆ.

'ಹೈಕೋರ್ಟ್ ತೀರ್ಪು ಅಮಾನ್ಯ'

ನವದೆಹಲಿ (ಪಿಟಿಐ): ಗಣಿಗಾರಿಕೆ ಗುತ್ತಿಗೆ ಅಕ್ರಮಕ್ಕೆ ಸಂಬಂಧಿಸಿದ ಪ್ರಕರಣದ ತನಿಖೆ ನಡೆಸುವಂತೆ ಕೋರಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ(ಐಪಿಎಲ್) ವಿರುದ್ಧ ಜಾರ್ಖಂಡ್ ಸರ್ಕಾರ ಮತ್ತು ಮುಖ್ಯಮಂತ್ರಿ ಹೇಮಂತ್ ಸೊರೇನ್ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ಸ್ವೀಕರಿಸಿದೆ. ಈ ಅರ್ಜಿಗಳ ವಿಚಾರಣಾಯೋಗ್ಯತೆಯನ್ನು ಎತ್ತಿಹಿಡಿದು ತೀರ್ಪು ನೀಡಿದ್ದ ಜಾರ್ಖಂಡ್ ಹೈಕೋರ್ಟ್‌ನ ಆದೇಶವನ್ನು ಸುಪ್ರೀಂ ಕೋರ್ಟ್ ಅಮಾನ್ಯಗೊಳಿಸಿದೆ.

ಸಿಸೋಡಿಯಾ ಆಪ್ತ, ಪ್ರಕರಣದ ಸಾಕ್ಷಿ?

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಉದ್ಯಮಿ ದಿನೇಶ್ ಅರೋರ ಅವರನ್ನು ಸಾಕ್ಷಿಯನ್ನಾಗಿ ಪರಿಗಣಿಸಲು ಸಿಬಿಐಗೆ ಅನುಮತಿ ನೀಡಬೇಕೆ, ಬೇಡವೆ ಎಂಬುದರ ಕುರಿತು ಇಲ್ಲಿನ ನ್ಯಾಯಾಲಯವು ನವೆಂಬರ್ 14ರಂದು ನಿರ್ಧಾರ ಕೈಗೊಳ್ಳಲಿದೆ.

ದೆಹಲಿ ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರ ಆಪ್ತರಾಗಿರುವ ಅರೋರಾ ಅವರನ್ನು ಪ್ರಕರಣದ ಸಾಕ್ಷಿಯನ್ನಾಗಿ ಪರಿಗಣಿಸುವಂತೆ ಕೋರಿ ನ್ಯಾಯಾಲಯಕ್ಕೆ ಸಿಬಿಐ ಅರ್ಜಿ ಸಲ್ಲಿಸಿದೆ. ತನಗೆ ಕ್ಷಮೆ ನೀಡಿ ಪ್ರಕರಣದ ಸಾಕ್ಷಿಯನ್ನಾಗಿ ಪರಿಗಣಿಸುವಂತೆ ಕೋರಿ ಅರೋರ ಅವರೂ ಅರ್ಜಿ ಸಲ್ಲಿಸಿದ್ದು, ವಿಶೇಷ ನ್ಯಾಯಾಧೀಶ ಎ.ಕೆ.ನಾಗಪಾಲ್ ಅವರು ಇದರ ವಿಚಾರಣೆಯನ್ನೂ ನಡೆಸಲಿದ್ದಾರೆ.

'ಹಗರಣಕ್ಕೆ ಸಂಬಂಧಿಸಿದ ಸತ್ಯ ಸಂಗತಿಗಳನ್ನೆಲ್ಲಾ ಬಹಿರಂಗಪಡಿಸಲು ತಾನು ಸಿದ್ಧನಿದ್ದೇನೆ' ಎಂದು ಅರೋರ ಅವರು ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

ಅತ್ಯಾಚಾರಿಗಳ ಖುಲಾಸೆ

ನವದೆಹಲಿ (ಪಿಟಿಐ) : 2012 ರಲ್ಲಿ ದೆಹಲಿಯ ಛಾವ್ಲಾ ಪ್ರದೇಶದಲ್ಲಿ 19 ವರ್ಷದ ಯುವತಿ ಮೇಲೆ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ ಮರಣದಂಡನೆಗೆ ಗುರಿಯಾಗಿದ್ದ ಮೂವರನ್ನು ಸುಪ್ರೀಂ ಕೋರ್ಟ್ ಸೋಮವಾರ ಖುಲಾಸೆಗೊಳಿಸಿದೆ.

ಮೂವರು ಪುರುಷರು 2012ರಲ್ಲಿ ಯುವತಿಯನ್ನು ಅಪಹರಿಸಿ, ಸಾಮೂಹಿಕ ಅತ್ಯಾಚಾರ ನಡೆಸಿ, ಕೊಲೆ ಮಾಡಿದ್ದರು. 2014 ರಲ್ಲಿ, ವಿಚಾರಣಾ ನ್ಯಾಯಾಲಯ ಮೂವರಿಗೆ ಮರಣ ದಂಡನೆ ವಿಧಿಸಿತ್ತು. ಈ ತೀರ್ಪನ್ನು ದೆಹಲಿ ಹೈಕೋರ್ಟ್ ಎತ್ತಿಹಿಡಿದಿತ್ತು.

ಪ್ರಜಾವಾಣಿ @75 ಅಮೃತ ಮಹೋತ್ಸವ

ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು pvat75@prajavani.co.inಗೆ ಕಳುಹಿಸಿ.
ಇನ್ನಷ್ಟು ಪ್ರತಿಕ್ರಿಯೆಗಳನ್ನು prajavani.net ನಲ್ಲಿ ಓದಬಹುದು...

'ಅರ್ಥಗರ್ಭಿತ ವಿಚಾರ'



ವಾಚನಾಲಯದಲ್ಲಿದ್ದ ಪತ್ರಿಕೆಗಳಲ್ಲಿ 'ಪ್ರಜಾವಾಣಿ' ನನ್ನ ಅಚ್ಚುಮೆಚ್ಚಿನ ಪತ್ರಿಕೆಯಾಗಿತ್ತು. ಬಡವ-ಬಲ್ಲಿದ ಭೇದವಿಲ್ಲದೇ ಸರ್ವ ಸಮುದಾಯವನ್ನೂ ಒಳಗೊಂಡು ಸುದ್ದಿಯನ್ನು ಪ್ರಕಟಿಸುತ್ತಿದೆ. ಶಿಕ್ಷಣ, ರಾಜಕೀಯ, ಸಾಹಿತ್ಯ ಕಲೆ, ಕ್ರೀಡೆ, ಸಾಮಾಜಿಕ, ಆರ್ಥಿಕ ಕ್ಷೇತ್ರಗಳ ವಿಷಯಗಳು ಅರ್ಥಗರ್ಭಿತ. ಅಮೃತ ಮಹೋತ್ಸವ ಸಂದರ್ಭದಲ್ಲಿ 'ಪ್ರಜಾವಾಣಿ' ಹೆಚ್ಚು ಜನರನ್ನು ತಲುಪಲಿ ಎಂದು ಹಾರೈಸುವೆ.

ಚಿದಾನಂದ, ನಿವೃತ್ತ ಅಧಿಕಾರಿ, ದಾವಣಗೆರೆ

'ಎಲ್ಲರ ಮನೆ, ಮನ ತಲುಪಲಿ'



'ನ ಹಿ ಜ್ಞಾನೇನ ಸದೃಶಂ' ಜ್ಞಾನಕ್ಕೆ ಸಮನಾದುದ್ದು ಬೇರೊಂದಿಲ್ಲ. ಸರ್ವಕ್ಷೇತ್ರದ ಜ್ಞಾನದ ಬುತ್ತಿಯನ್ನು ಸಹೃದಯಿ ಓದುಗರಿಗೆ ಉಣಬಡಿಸುತ್ತಿರುವ ಕರುನಾಡಿನ ಪ್ರಭಾವಶಾಲಿ ಮಾಧ್ಯಮವಾದ 'ಪ್ರಜಾವಾಣಿ' ಪತ್ರಿಕೆ ಅಮೃತ ಮಹೋತ್ಸವ ಆಚರಿಸುತ್ತಿದ್ದು, ವಿಶ್ವಾಸಾರ್ಹ ಓದುಗರನ್ನು ಹಿಡಿದಿಡಲು ಗುಣಮಟ್ಟ ಮತ್ತು ಪಾರದರ್ಶಕ ಸುದ್ದಿ-ಸಮಾಚಾರಗಳೇ ಕಾರಣ. ಎಲ್ಲರ ಮನ-ಮನೆಯನ್ನು ತಲುಪುವಂತಾಗಲು ಶ್ರಮವಹಿಸುತ್ತಿರುವ ಸಂಪಾದಕರಿಗೂ ಮತ್ತು ಸಿಬ್ಬಂದಿಗೂ ಶುಭವಾಗಲಿ ಎಂದು ಹಾರೈಸುತ್ತೇವೆ.

ನಿರಂಜನಾನಂದಪುರಿ ಸ್ವಾಮೀಜಿ,
ಕನಕ ಗುರುಪೀಠ, ಶ್ರೀಕ್ಷೇತ್ರ ಕಾಗಿನೆಲೆ. ಹಾವೇರಿ

'ನಿಷ್ಠುರ ಪತ್ರಿಕೋದ್ಯಮ



ಪ್ರಜಾವಾಣಿ ನಿಷ್ಠುರ ಪತ್ರಿಕೋದ್ಯಮದ ಸಾಕ್ಷಿಪ್ರಜ್ಞೆ. ವಿಶ್ವಾಸಾರ್ಹ ಸುದ್ದಿಗಳನ್ನು ಪ್ರಸ್ತುತ ಪಡಿಸುವಲ್ಲಿ ಯಾವ ಮುಲಾಜಿಗೂ ಒಳಗಾಗದೆ ರಾಜಕೀಯ, ಕಲೆ, ಸಾಹಿತ್ಯ, ಚರಿತ್ರೆ, ಕ್ರೀಡೆ ಮತ್ತು ಸಾಮಾಜಿಕ ವಿದ್ಯಮಾನಗಳನ್ನು ಓದುಗರಿಗೆ ನಿರಂತರವಾಗಿ ತಲುಪಿಸುತ್ತಿರುವುದಕ್ಕೆ ಅಭಿನಂದನೆಗಳು. ಜನಪರವಾದ ಬದ್ಧತೆ ಎಂದೆಂದಿಗೂ ಮುಂದುವರಿಯಲಿ ಎಂದು ಆಶಿಸುತ್ತೇನೆ.

ದಿನೇಶ್ ಬಸವಾಪಟ್ಟಣ, ಓದುಗ, ಮೈಸೂರು

'ರಾಜಿಯಾಗದ ಬದ್ಧತೆ'



ಅಮೃತ ಮಹೋತ್ಸವಕ್ಕೆ ಕಾಲಿಟ್ಟಿರುವ 'ಪ್ರಜಾವಾಣಿ'ಗೆ ತುಂಬು ಹೃದಯದ ಅಭಿನಂದನೆಗಳು. ಪತ್ರಿಕಾ ಧರ್ಮದಲ್ಲಿ ಎಂದಿಗೂ ರಾಜಿಯಾಗದೆ, ಬದ್ಧತೆ ಪ್ರದರ್ಶಿಸಿಕೊಂಡು ಬಂದಿರುವ ಏಕೈಕ ಪತ್ರಿಕೆ 'ಪ್ರಜಾವಾಣಿ'. ನಿಷ್ಪಕ್ಷಪಾತ ವರದಿಯನ್ನು ನೀಡುವ ವಿಶ್ವಾಸಾರ್ಹ ಮಾಧ್ಯಮವಾಗಿ ಇಂದಿಗೂ ಜನಮೆಚ್ಚುಗೆ ಪಡೆದಿದೆ. ಯಾವುದಾದರೂ ವಿಷಯ ಅಥವಾ ಘಟನೆ ಕುರಿತು 'ಪ್ರಜಾವಾಣಿ'ಯಲ್ಲಿ ಬಂದರಷ್ಟೇ ಸತ್ಯ ಎಂಬ ಮಾತು ಅಕ್ಷರಶಃ ಸತ್ಯ. ಜೊತೆಗೆ ಮೊನಚಾದ ಸಂಪಾದಕೀಯದಲ್ಲಿ ಆಳುವ ವರ್ಗವನ್ನು ಎಚ್ಚರಿಸುತ್ತಾ ಬಂದಿದೆ. ಓದುಗರ ಅರಿವನ್ನು ವಿಸ್ತರಿಸಿದೆ.

ಡಾ.ಲಿಂಗರಾಜ ಅಂಗಡಿ,
ಅಧ್ಯಕ್ಷ, ಕನ್ನಡ ಸಾಹಿತ್ಯ ಪರಿಷತ್ ಧಾರವಾಡ ಜಿಲ್ಲಾ ಘಟಕ

'75ರಲ್ಲೂ ಮನೆ ತುಂಬಿದೆ'



ಅಮೃತ ಮಹೋತ್ಸವ ದಿನದಾನಂದಕೆ
ಶುಭವನು ಕೋರುವೆ 'ಪ್ರಜಾವಾಣಿ'ಗೆ
ದೈನಂದಿನ ಈ ಪತ್ರಿಕೆ ನನಗೆ
ಬೆಳಗಿನ ಕಾಫಿಗೆ ಉಪಾಹಾರ
ನಿಜಕೂ 'ಪ್ರಜಾವಾಣಿ'ಯೆ ದಿಟವು
ಜನತೆಯ ದನಿಯಿದು ಎಂಬುದು ಸತ್ಯವು
ತಾಜಾ ಸುದ್ದಿಗಳು ಮುಜಾನೆಯೆ ಮನೆ
ಮುಟ್ಟುವುದು
ಕುಲ ಮತ ಭೇದದ ಪತ್ರಿಕೆಯಲ್ಲ
ರಾಜಕೀಯದ ವಾಸನೆ ಇಲ್ಲ
ಪರ ವಿರೋಧಗಳ ಭಾವವು ಇಲ್ಲ
ಸಮತೆಯದೊಂದೇ ಇದರ ಗುರಿ
ಬುದ್ಧಿಯ ವಿಕಸನಕಿದು ಸಹಕಾರವು
ಎಲ್ಲರ ಮೆಚ್ಚಿನ ಪತ್ರಿಕೆಯು
'ಪ್ರಜಾವಾಣಿ'ಯು ಹುಟ್ಟಿದ ದಿನವೇ
ಕೊಂಡರು ಪತ್ರಿಕೆ ತಂದೆಯವರದನು
ಎಪ್ಪತ್ತೈದರ ಸಂವತ್ಸರದಲು
ಇದೆ ಪತ್ರಿಕೆ ಮನೆ ತುಂಬುತಿದೆ.

ಎಚ್. ಆರ್. ಲೀಲಾವತಿ
ಸುಗಮಸಂಗೀತ ಗಾಯಕಿ, ಮೈಸೂರು

ಹಬ್ಬದ ಬೇಡಿಕೆ: ವಾಹನ ಮಾರಾಟ ಹೆಚ್ಚಳ

ನವದೆಹಲಿ (ಪಿಟಿಐ): ಹಬ್ಬದ ಋತುವಿನ ಕಾರಣದಿಂದಾಗಿ ಅಕ್ಟೋಬರ್‌ನಲ್ಲಿ ವಾಹನಗಳ ರಿಟೇಲ್ ಮಾರಾಟವು ಶೇ 48ರಷ್ಟು ಹೆಚ್ಚಾಗಿದೆ ಎಂದು ವಾಹನ ವಿತರಕರ ಸಂಘಟನೆಗಳ ಒಕ್ಕೂಟ (ಎಫ್‌ಎಡಿಎ) ಹೇಳಿದೆ.

2021ರ ಅಕ್ಟೋಬರ್‌ನಲ್ಲಿ 14.18 ಲಕ್ಷ ವಾಹನಗಳು ಮಾರಾಟ ಆಗಿದ್ದವು. 2022ರ ಅಕ್ಟೋಬರ್‌ನಲ್ಲಿ 20.94 ಲಕ್ಷ ವಾಹನಗಳು ಮಾರಾಟ ಆಗಿವೆ. 2019ರ ಅಕ್ಟೋಬರ್‌ಗೆ ಹೋಲಿಸಿದರೂ ಮಾರಾಟವು ಶೇಕಡ 8ರಷ್ಟು ಹೆಚ್ಚಾಗಿದೆ.

ನಾಲ್ಕು ವರ್ಷಗಳ ಹಬ್ಬದ ಋತುವಿಗೆ ಹೋಲಿಸಿದರೆ ಈ ಬಾರಿ ಮಾರಾಟವು ಉತ್ತಮವಾಗಿದೆ ಎಂದು ಅದು ತಿಳಿಸಿದೆ. ಈ ವರ್ಷ 42 ದಿನಗಳ ಹಬ್ಬದ ಋತುವಿನಲ್ಲಿ ರಿಟೇಲ್ ಮಾರಾಟ 28.88 ಲಕ್ಷ ಆಗಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 29ರಷ್ಟು ಏರಿಕೆ ಕಂಡುಬಂದಿದೆ ಎಂದು ತಿಳಿಸಿದೆ.

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹146

ಆರ್‌ಎಸ್‌ಎಸ್-5 ₹138

ಗುಡ್ ಲಾಟ್ ₹131

(ಪ್ರತಿ ಕೆ.ಜಿಗೆ)

ಮುಂಬೈ ಧಾರಣೆ

ಶೇಂಗಾ

7–11–2022

ಜಾವಾ 70/80(ಹೊಸ)	11200-11250
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	10000-10100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1580)
ಒಂದು ವಾರದ ಡೆಲಿವರಿ	1555 (1575)
ಸೋಯಾ ಕಚ್ಚಾ	1360 (1330)
ಪಾಮ್ ವಾರದ ಡೆಲಿವರಿ	1033 (1038)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,800 (50,850)
ಬೆಳ್ಳಿ ಕೆ.ಜಿ 60,300 (60,550)

ಆವರಣದಲ್ಲಿ ಶನಿವಾರದ ಧಾರಣೆ

ಚಳಿಗಾಲದಿಂದಾಗಿ ಕಡಿಮೆ ಆಗಿರುವ ಬಳಕೆ

ಕುಸಿಯುತ್ತಲೇ ಇದೆ ಕೊಬ್ಬರಿ ಬೆಲೆ

ಪ್ರಜಾವಾಣಿ ವಾರ್ತೆ

ತುಮಕೂರು: ಬಯಲು ಸೀಮೆಯ ರೈತರ ವಾಣಿಜ್ಯ ಬೆಳೆ ತೆಂಗಿನ ಕಾಯಿ ಹಾಗೂ ಕೊಬ್ಬರಿ ಬೆಲೆ ದಿನದಿಂದ ದಿನಕ್ಕೆ ಕುಸಿಯುತ್ತಲೇ ಸಾಗಿದ್ದು, ಬೆಳೆಗಾರರಲ್ಲಿ ಆತಂಕ ಮೂಡಿಸಿದೆ.

ಏಳೆಂಟು ತಿಂಗಳ ಹಿಂದೆ ಕೊಬ್ಬರಿ ಬೆಲೆ ಕ್ವಿಂಟಲ್‌ಗೆ ಗರಿಷ್ಠ ₹18 ಸಾವಿರ ತಲುಪಿತ್ತು. ಆಗ ರೈತರ ಮುಖದಲ್ಲಿ ಮಂದಹಾಸ ಮೂಡಿತ್ತು. ಆದರೆ, ಈ ನಗು ಹೆಚ್ಚು ಕಾಲ ಉಳಿಯಲಿಲ್ಲ. ತಿಂಗಳು ಕಳೆದಂತೆ ದರ ಕುಸಿಯತೊಡಗಿತು. ಪ್ರತಿ ತಿಂಗಳೂ ಇಳಿಕೆಯಾಗುತ್ತ ಸಾಗಿದ ಕೊಬ್ಬರಿ ಜೂನ್ ವೇಳೆಗೆ ₹13 ಸಾವಿರಕ್ಕೆ ಬಂದು ತಲುಪಿತು. ಪ್ರಸ್ತುತ ಕ್ವಿಂಟಲ್ ದರ ₹12,500ಕ್ಕೆ ಕುಸಿದಿದೆ.

'ನಮ್ಮ ಭಾಗದಿಂದ ಉತ್ತರ ಭಾರತದ ರಾಜ್ಯಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಕೊಬ್ಬರಿ ರವಾನೆಯಾಗುತ್ತದೆ. ಆಯುಧ ಪೂಜೆ, ದೀಪಾವಳಿ ಸಮಯದಲ್ಲಿ ಸಿಹಿ ತಿಂಡಿಗೆ ಹೆಚ್ಚು



ಬಳಕೆಯಾಗುತ್ತದೆ. ಆದರೂ ಈ ಬಾರಿ ಬೆಲೆ ಚೇತರಿಸಿಕೊಂಡಿಲ್ಲ. ಜತೆಗೆ ದೆಹಲಿ ಸೇರಿದಂತೆ ಉತ್ತರದ ರಾಜ್ಯಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮಳೆಯಾಗಿದ್ದು, ಈಗಾಗಲೇ ಶೀತದ ವಾತಾವರಣ ನಿರ್ಮಾಣವಾಗಿದೆ. ಇಂತಹ ಸಮಯದಲ್ಲಿ ಕೊಬ್ಬರಿ ಬಳಕೆ ಕಡಿಮೆ ಇರುತ್ತದೆ. ಹಾಗಾಗಿ ಬೆಲೆ ಕುಸಿಯುತ್ತದೆ' ಎಂದು ಮಾರುಕಟ್ಟೆ ಮೂಲಗಳು ತಿಳಿಸಿವೆ.

'ಸಾಮಾನ್ಯವಾಗಿ ಚಳಿಗಾಲದಲ್ಲಿ ಕೊಬ್ಬರಿ ಬಳಕೆ ಕಡಿಮೆ ಮಾಡುತ್ತಾರೆ. ಆವಕವೂ ಸಹ ಕಡಿಮೆ ಇರುತ್ತದೆ. ಸಹಜವಾಗಿ ನವೆಂಬರ್‌ನಿಂದ ಫೆಬ್ರುವರಿವರೆಗೂ ಕೊಬ್ಬರಿ ಬೆಲೆ ಕುಸಿತ ಸಾಮಾನ್ಯ. ಇದನ್ನು ಬೆಲೆ ಕುಸಿತ ಎಂದು ಹೇಳಲಾಗದು. ಇದು ಸಾಮಾನ್ಯ ಪ್ರಕ್ರಿಯೆ' ಎಂದು ವರ್ತಕ ನಾಗರಾಜ್ ತಿಳಿಸಿದರು.

ತೆಂಗಿನಕಾಯಿ ಬೆಲೆಯೂ ಕುಸಿತ

ಮಾರುಕಟ್ಟೆಯಲ್ಲಿ ತೆಂಗಿನಕಾಯಿ ಆವಕ ಹೆಚ್ಚಾಗಿದ್ದು ಬೆಲೆ ಕುಸಿದಿದೆ. ಒಂದು ತೆಂಗಿನಕಾಯಿ ಸಗಟು ಮಾರುಕಟ್ಟೆಯಲ್ಲಿ ₹7ರಿಂದ 9ಕ್ಕೆ ಮಾರಾಟವಾಗುತ್ತಿದೆ. ಕಳೆದ ಮೇ, ಜೂನ್ ಸಮಯದಲ್ಲಿ ₹15–16ರ ವರೆಗೂ ಏರಿಕೆಯಾಗಿತ್ತು.

ಎರಡು ವರ್ಷದಿಂದ ಜಿಲ್ಲೆಯಲ್ಲಿ ಉತ್ತಮ ಮಳೆಯಾಗುತ್ತಿದೆ. ಇದರಿಂದ ಇಳುವರಿ ಹೆಚ್ಚಾಗಿದ್ದು ಬೆಲೆ ಇಳಿದಿದೆ.

10ರಂದು ಕೇನ್ಸ್ ಟೆಕ್ನಾಲಜಿ ಐಪಿಒ

ನವದೆಹಲಿ (ಪಿಟಿಐ): ಕೇನ್ಸ್ ಟೆಕ್ನಾಲಜಿ ಇಂಡಿಯಾ ಲಿಮಿಟೆಡ್‌ನ (ಕೆಟಿಐಎಲ್) ಆರಂಭಿಕ ಸಾರ್ವಜನಿಕ ಕೊಡುಗೆಯು (ಐಪಿಒ) ಇದೇ 10ರಂದು ಆರಂಭ ಆಗಲಿದ್ದು, 14ರಂದು ಮುಕ್ತಾಯ ಆಗಲಿದೆ.

ಇಂಟರ್‌ನೆಟ್ ಆಫ್ ಥಿಂಗ್ಸ್ (ಐಒಟಿ) ಸೇವೆಗಳನ್ನು ನೀಡುವ ಮೈಸೂರು ಮೂಲದ ಎಲೆಕ್ಟ್ರಾನಿಕ್ಸ್ ತಯಾರಿಕಾ ಕಂಪನಿಯು ಪ್ರತಿ ಷೇರಿಗೆ ₹ 559–587 ಬೆಲೆ ನಿಗದಿಪಡಿಸಿದೆ.

ಹೊಸದಾಗಿ ₹ 530 ಕೋಟಿ ಮೌಲ್ಯದ ಷೇರುಗಳನ್ನು ಹಾಗೂ ಆಫರ್ ಫರ್ ಸೇಲ್ (ಒಎಫ್‌ಎಸ್) ಅಡಿ 55.85 ಲಕ್ಷ ಈಕ್ವಿಟಿ ಷೇರುಗಳನ್ನು ಮಾರಾಟ ಮಾಡಲು ಉದ್ದೇಶಿಸಿರುವುದಾಗಿ ಕಂಪನಿಯು ತಿಳಿಸಿದೆ.


ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	250-300
ನಡುಗೋಲು	450-480
ರಾಶಿ	480-500
ರಾಶಿ ಉತ್ತಮ	550-600
ಜರಡಿ	700-750
ಹರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1250-1350
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-56000
ಕಾರ್ಕಳ	
ಹೊಸತು	25000-38000
ಹಳತು	40000-56000
ಸಾಗರ	
ಬಿಳಿಗೋಟು	19110-30589
ಚಾಲಿ	31899-38019
ಕೋಕ	12199-31399
ಕೆಂಪುಗೋಟು	16899-36699
ರಾಶಿ	35019-47269
ಸಿಪ್ಪೆಗೋಟು	10290-20679
ಶಿವಮೊಗ್ಗ	
ಬೆಟ್ಟೆ	50500-53001
ಗೊರಬಲು	17000-36399
ಹೊಸತು	44096-46599
ರಾಶಿ	44099-47219
ಸರಕು	56166-78396
ಸಿದ್ದಾಪುರ	
ಬಿಳಿಗೋಟು	27599-33599
ಚಾಲಿ	37399-41599
ಕೋಕ	26819-33199
ಕೆಂಪುಗೋಟು	27119-32699
ರಾಶಿ	42609-46299
ತಟ್ಟಿಬೆಟ್ಟೆ	37109-44749
ಶಿರಸಿ	
ಬೆಟ್ಟೆ	41888-44299
ಬಿಳಿಗೋಟು	24709-36199
ಚಾಲಿ	38199-42800
ರಾಶಿ	45099-46869
ಯಲ್ಲಾಪುರ	
ಬಿಳಿಗೋಟು	28619-34869
ಚಾಲಿ	37051-42160
ಕೋಕ	18699-28899
ಕೆಂಪುಗೋಟು	28069-34745
ರಾಶಿ	46040-52499
ತಟ್ಟಿಬೆಟ್ಟೆ	37969-45809

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14500	14500	14200	175.75 ಸೆಂಟ್ಸ್
ಎಸಿ	7280	7300	7300	
ಆರ್‌ಪಿ	8500	8000	8800	ಲಂಡನ್
ಆರ್‌ಸಿ	4600	4300	4300	1869 ಡಾಲರ್ಸ್

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,117
ಇಂದಿನ ಅಂತ್ಯ	18,203
▲	86
ದಿನದ ಗರಿಷ್ಠ	18,225

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು
100 ಮೊಟ್ಟೆಗೆ ₹520
12 ಮೊಟ್ಟೆಗೆ ₹67
ಮೈಸೂರು
100 ಮೊಟ್ಟೆಗೆ ₹520

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹353-655
ದ್ವಿತಳಿ (ಬಿ.ವಿ) ₹542-865

ಬೆಳವಣಿಗೆ ಹೆಚ್ಚಿರುವ ಕ್ಷೇತ್ರಗಳಲ್ಲಿ ಹೂಡಿಕೆಗೆ ಕಂಪನಿ ಆದ್ಯತೆ

ನೌಕರರ ವಜಾ: ಮೆಟಾ ಚಿಂತನೆ

ನ್ಯೂಯಾರ್ಕ್ (ಪಿಟಿಐ): ಫೇಸ್‌ಬುಕ್‌ನ ಮಾತೃಸಂಸ್ಥೆಯಾಗಿರುವ ಮೆಟಾ ದೊಡ್ಡ ಪ್ರಮಾಣದಲ್ಲಿ ನೌಕರರನ್ನು ಕೆಲಸದಿಂದ ತೆಗೆಯಲು ಚಿಂತನೆ ನಡೆಸಿದೆ ಎಂದು ವರದಿಯಾಗಿದೆ.

ಅಲ್ಲದೆ, ಇದು ತಂತ್ರಜ್ಞಾನ ವಲಯದ ಪ್ರಮುಖ ಕಂಪನಿಯೊಂದರಲ್ಲಿ ಒಂದು ವರ್ಷದ ಅವಧಿಯಲ್ಲಿ ನಡೆಯುವ ಅತಿದೊಡ್ಡ ನೌಕರಿ ಕಡಿತ ಆಗಬಹುದು ಎಂದು ಕೂಡ ವರದಿ ಹೇಳಿದೆ.

ಮೆಟಾ ಕಂಪನಿಯಲ್ಲಿ 87 ಸಾವಿರಕ್ಕೂ ಹೆಚ್ಚು ನೌಕರರು ಇದ್ದಾರೆ. ಸಹಸ್ರಾರು ಮಂದಿಯನ್ನು ಕೆಲಸದಿಂದ ತೆಗೆಯುವ ಸಾಧ್ಯತೆ ಇದೆ. ಕೆಲಸದಿಂದ ತೆಗೆಯುವ ಪ್ರಕ್ರಿಯೆಯು ಬುಧವಾರದಿಂದಲೇ ಆರಂಭವಾಗಬಹುದು ಎಂದು ದಿ ವಾಲ್ ಸ್ಟ್ರೀಟ್ ಜರ್ನಲ್ ವರದಿ ಮಾಡಿದೆ.

ನೌಕರರು ಅಗತ್ಯವಲ್ಲದ ಪ್ರವಾಸಗಳನ್ನು ರದ್ದು ಮಾಡಬೇಕು ಎಂದು ಕಂಪನಿಯ ಹಿರಿಯ ಅಧಿಕಾರಿಗಳು ಸೂಚಿಸಿದ್ದಾರೆ ಎಂದು ಈ ವರದಿಯು ತಿಳಿಸಿದೆ.

ಹೆಚ್ಚಿನ ಆದ್ಯತೆಯ ಬೆಳವಣಿಗೆಯ ಕ್ಷೇತ್ರಗಳಲ್ಲಿ ಹೂಡಿಕೆಗೆ ಕಂಪನಿಯು ಗಮನ ನೀಡಲಿದೆ ಎಂದು ಮೆಟಾ ಸಿಇಒ ಮಾರ್ಕ್ ಝುಕರ್‌ಬರ್ಗ್ ಹೇಳಿದ್ದಾರೆ. 'ಅಂದರೆ ಕೆಲವು ತಂಡಗಳು ಅರ್ಥಪೂರ್ಣ ಬೆಳವಣಿಗೆ ಕಾಣುತ್ತವೆ. ಇತರ ಹಲವು ತಂಡಗಳು ಬೆಳವಣಿಗೆ ಕಾಣುವುದಿಲ್ಲ ಹಾಗೂ ಮುಂದಿನ ವರ್ಷದಲ್ಲಿ ಅವು ಸಣ್ಣದಾಗಬಹುದು' ಎಂದು ಅವರು ಹಿಂದಿನ ತಿಂಗಳು ಹೇಳಿದ್ದರು.

'ವಾಸ್ತವದಲ್ಲಿ, ಕಂಪನಿಯಲ್ಲಿ ಇರಬಾರದ ಒಂದಿಷ್ಟು ಜನ ಇದ್ದಾರೆ' ಎಂದು ಕೂಡ ಅವರು ಹೇಳಿದ್ದರು. ಟ್ವಿಟರ್ ಕಂಪನಿಯಲ್ಲಿ ನೌಕರರನ್ನು ಕೆಲಸದಿಂದ ತೆಗೆಯುವ ಪ್ರಕ್ರಿಯೆ ಶುರುವಾದ ಬೆನ್ನಲ್ಲೇ ಮೆಟಾದಲ್ಲಿಯೂ ಈ ಪ್ರಕ್ರಿಯೆ ಆರಂಭವಾಗಿದೆ. ಮೆಟಾ ಕಂಪನಿಯ ಷೇರು ಮೌಲ್ಯವು ಈ ವರ್ಷದಲ್ಲಿ ಶೇಕಡ 70ರಷ್ಟು ಕುಸಿತ ಕಂಡಿದೆ.

ಮುಖ್ಯಾಂಶಗಳು

- ಬೆಳವಣಿಗೆ ಹೆಚ್ಚಿರುವ ಕ್ಷೇತ್ರದಲ್ಲಿ ಹೂಡಿಕೆ ಮಾಡಲಿರುವ ಮೆಟಾ
- ಕಂಪನಿಯ ಷೇರುಮೌಲ್ಯ ವರ್ಷದಲ್ಲಿ ಶೇ 70ರಷ್ಟು ಇಳಿಕೆ
- 87 ಸಾವಿರಕ್ಕೂ ಹೆಚ್ಚು ನೌಕರರನ್ನು ಹೊಂದಿರುವ ಕಂಪನಿ



ಭಾರತೀಯ ವಾಣಿಜ್ಯೋದ್ಯಮ ಮಹಾಸಂಘದ ವರದಿ

'ತಯಾರಿಕೆ: ಬೆಳವಣಿಗೆ ಅಬಾಧಿತ'

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಈಗಿನ ಬೆಳವಣಿಗೆಯ ವೇಗವು ಮುಂದಿನ ಆರರಿಂದ ಒಂಬತ್ತು ತಿಂಗಳವರೆಗೂ ಇದೇ ಮಟ್ಟದಲ್ಲಿ ಮುಂದುವರಿಯುವ ಸಾಧ್ಯತೆ ಇದೆ ಎಂದು ಭಾರತೀಯ ವಾಣಿಜ್ಯೋದ್ಯಮ ಮಹಾಸಂಘ (ಫಿಕ್ಕಿ) ಹೇಳಿದೆ.

ಸಂಘವು ನಡೆಸಿರುವ ಸಮೀಕ್ಷೆಯ ಪ್ರಕಾರ, ತಯಾರಿಕಾ ವಲಯದ ಸರಾಸರಿ ಸಾಮರ್ಥ್ಯದ ಬಳಕೆಯು ಈಗ ಶೇಕಡ 70ಕ್ಕೂ ಹೆಚ್ಚಿದೆ. ಈ ವಲಯದಲ್ಲಿ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿವೆ ಎನ್ನುವುದನ್ನು ಇದು ಸೂಚಿಸುತ್ತಿದೆ. ಭವಿಷ್ಯದ ಹೂಡಿಕೆಯ ಮುನ್ನೋಟ ಸಹ ಹಿಂದಿನ ತ್ರೈಮಾಸಿಕಕ್ಕೆ ಹೋಲಿಸಿದರೆ ತುಸು ಸುಧಾರಿಸಿದೆ.

ಹೀಗಿದ್ದರೂ, ರಷ್ಯಾ–ಉಕ್ರೇನ್ ಬಿಕ್ಕಟ್ಟಿನಿಂದಾಗಿ ಜಾಗತಿಕ ಆರ್ಥಿಕತೆಯಲ್ಲಿ



ಎದುರಾಗಿರುವ ಅನಿಶ್ಚಿತ ಸ್ಥಿತಿ ಹಾಗೂ ಕೋವಿಡ್‌ನ ಹಲವು ರೂಪಾಂತರಿ ತಳಿಗಳು ಪ್ರಮುಖ ಆರ್ಥಿಕತೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿವೆ ಎಂದು ಸಮೀಕ್ಷೆಯು ತಿಳಿಸಿದೆ.

ಕಚ್ಚಾ ವಸ್ತುಗಳ ದರ ಗರಿಷ್ಠ ಮಟ್ಟದಲ್ಲಿ ಇರುವುದು, ನಿಯಮಗಳು ಮತ್ತು ಅನುಮತಿ ಸಿಗುವುದರಲ್ಲಿ ತೊಡಕು, ದುಡಿಯುವ ಬಂಡವಾಳದ ಕೊರತೆ, ಸರಕು ಸಾಗಣೆ ವೆಚ್ಚ, ದೇಶಿ ಮತ್ತು ಜಾಗತಿಕ ಮಟ್ಟದಲ್ಲಿ ತಗ್ಗಿದ ಬೇಡಿಕೆ, ಅಸ್ಥಿರ ಮಾರುಕಟ್ಟೆ ಹಾಗೂ ಪೂರೈಕೆಗೆ ಸಂಬಂಧಿಸಿದ ಇತರೆ ಸಮಸ್ಯೆಗಳು ವಹಿವಾಟು ವಿಸ್ತರಣೆಗೆ ತೊಡಕಾಗಿವೆ ಎಂದು ಕಂಪನಿಗಳು ಹೇಳಿವೆ.

2022–23ರ ಎರಡನೇ ತ್ರೈಮಾಸಿಕಕ್ಕೆ ಸಂಬಂಧಿಸಿದಂತೆ, ಆಟೊಮೊಟಿವ್ ಮತ್ತು ವಾಹನ ಬಿಡಿಭಾಗಗಳು, ಬಂಡವಾಳ ಸರಕುಗಳು, ಸಿಮೆಂಟ್, ರಾಸಾಯನಿಕ, ರಸಗೊಬ್ಬರ, ಔಷಧ, ಎಲೆಕ್ಟ್ರಾನಿಕ್ಸ್, ಮಷಿನ್ ಟೂಲ್ಸ್, ಲೋಹ, ಜವಳಿ, ಜವಳಿ ಯಂತ್ರೋಪಕರಣ ವಲಯಗಳ ಪರಿಸ್ಥಿತಿಯನ್ನು ಅವಲೋಕಿಸಿ ಸಮೀಕ್ಷಾ ವರದಿ ಸಿದ್ಧಪಡಿಸಲಾಗಿದೆ ಎಂದು ತಿಳಿಸಿದೆ.

ತಯಾರಿಕಾ ವಲಯದ ಬೆಳವಣಿಗೆ ತಿಳಿಸುವ ಸೂಚ್ಯಂಕವು (ಪಿಎಂಐ) ಸತತ 16ನೇ ತಿಂಗಳಿನಲ್ಲಿಯೂ ಸಕಾರಾತ್ಮಕ ಮಟ್ಟದಲ್ಲಿಯೇ ಇದೆ.

20 ಲಕ್ಷ ದಾಟಿದ ಹೋಂಡಾ ಕಾರ್ಸ್ ತಯಾರಿಕೆ

ನವದೆಹಲಿ (ಪಿಟಿಐ): ಹೋಂಡಾ ಕಾರ್ಸ್ ಇಂಡಿಯಾದ ಒಟ್ಟು ತಯಾರಿಕೆಯು 20 ಲಕ್ಷದ ಮೈಲಿಗಲ್ಲು ದಾಟಿದೆ ಎಂದು ಕಂಪನಿಯು ಸೋಮವಾರ ತಿಳಿಸಿದೆ.

ಕಂಪನಿಯು 1997ರ ಡಿಸೆಂಬರ್‌ನಲ್ಲಿ ತಯಾರಿಕೆ ಆರಂಭಿಸಿದ್ದು, ಈವರೆಗೆ ಒಟ್ಟು ₹ 10 ಸಾವಿರ ಕೋಟಿ ಹೂಡಿಕೆ ಮಾಡಿದೆ.

ಭಾರತದಲ್ಲಿ ತಯಾರಿಸಿ ಅಭಿಯಾನಕ್ಕೆ ಕಂಪನಿ ಹೊಂದಿರುವ ಬದ್ಧತೆಯನ್ನು ಇದು ತೋರಿಸುತ್ತಿದೆ ಎಂದು ಕಂಪನಿಯ ಭಾರತದ ಅಧ್ಯಕ್ಷ ಟಕುಯಾ ಸುಮುರಾ ತಿಳಿಸಿದ್ದಾರೆ.

ದೇಶದಲ್ಲಿ ಮಾರಾಟ ಮಾಡುವುದಷ್ಟೇ ಅಲ್ಲದೆ, ತನ್ನ ಸಿಟಿ ಮತ್ತು ಅಮೇಜ್ ಕಾರನ್ನು ಜಗತ್ತಿನ 15 ಮಾರುಕಟ್ಟೆಗಳಿಗೆ ರಫ್ತನ್ನೂ ಮಾಡುತ್ತಿದೆ.

ಬಿಜೆಪಿ, ಕಾಂಗ್ರೆಸ್ ಸ್ವಾಗತ; ಸಾಮಾಜಿಕ ನ್ಯಾಯ ಹೋರಾಟಕ್ಕೆ ಹಿನ್ನಡೆ ಎಂದ ಸ್ಟಾಲಿನ್

ಇಡಬ್ಲ್ಯುಎಸ್ ತೀರ್ಪು: ಪ್ರತಿಪಕ್ಷಗಳ ಭಿನ್ನ ನಿಲುವು

ಪ್ರಜಾವಾಣಿ ವಾರ್ತೆ

ನವದೆಹಲಿ: ಆರ್ಥಿಕವಾಗಿ ದುರ್ಬಲ ವರ್ಗದವರಿಗೆ (ಇಡಬ್ಲ್ಯುಎಸ್) ಶಿಕ್ಷಣ ಹಾಗೂ ಉದ್ಯೋಗದಲ್ಲಿ ಶೇ 10ರಷ್ಟು ಮೀಸಲಾತಿ ನೀಡುವ ಕೇಂದ್ರದ ನಿರ್ಧಾರವನ್ನು ಎತ್ತಿಹಿಡಿದಿರುವ ಸುಪ್ರೀಂ ಕೋರ್ಟ್ ತೀರ್ಪಿಗೆ ವಿರೋಧ ಪಕ್ಷಗಳು ಭಿನ್ನ ನಿಲುವು ವ್ಯಕ್ತಪಡಿಸಿವೆ.

ತಮಿಳುನಾಡಿನಲ್ಲಿ ಡಿಎಂಕೆ ಸೇರಿದಂತೆ ಬಹುತೇಕ ಪಕ್ಷಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿವೆ. ಈ ಬಗ್ಗೆ ಪ್ರತಿಕ್ರಿಯೆ ನೀಡುವುದಿಲ್ಲ ಎಂದು ತೃಣಮೂಲ ಕಾಂಗ್ರೆಸ್ ಹೇಳಿದೆ. ತೀರ್ಪು ಸರಿ ಎಂದು ಕಾಂಗ್ರೆಸ್ ಹೇಳಿದ್ದರೂ, ಪಕ್ಷದ ಮುಖಂಡ ಉದಿತ್ ರಾಜ್ ನೀಡಿರುವ ಹೇಳಿಕೆ ವಿವಾದಕ್ಕೆ ಕಾರಣವಾಗಿದೆ. ನಿರೀಕ್ಷೆಯಂತೆ ಆಡಳಿತಾರೂಢ ಬಿಜೆಪಿಯು ತೀರ್ಪು ಸ್ವಾಗತಿಸಿದೆ.

ಸುಪ್ರೀಂ ಕೋರ್ಟ್ ತೀರ್ಪನ್ನು ಸ್ವಾಗತಿಸಿರುವ ಕಾಂಗ್ರೆಸ್, ತಮ್ಮ ಸರ್ಕಾರದ ಅವಧಿಯಲ್ಲಿ ಮೀಸಲಾತಿ ನೀಡಿಕೆ ಪ್ರಕ್ರಿಯೆ ಶುರುವಾಗಿತ್ತು ಎಂದು ಹೇಳಿಕೊಂಡಿದೆ. ಡಾ. ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರವು ಮೀಸಲಾತಿ ನೀಡುವ ಕುರಿತಂತೆ 2005–06ರಲ್ಲಿ ಸಿನ್ಹಾ ಆಯೋಗವನ್ನು ನೇಮಿಸಿತ್ತು. 2010ರ ಜುಲೈನಲ್ಲಿ ಅದು ವರದಿ ಸಲ್ಲಿಸಿತ್ತು. ಇಂದಿನ ತೀರ್ಪು ಮನಮೋಹನ್ ಸಿಂಗ್ ಅವರು ಆರಂಭಿಸಿದ್ದ ಪ್ರಕ್ರಿಯೆಯ ಫಲ ಎಂದು ಕಾಂಗ್ರೆಸ್ ಹೇಳಿದೆ.

ಬಿಜೆಪಿ ಸಂತಸ: ಈ ತೀರ್ಪು ಪ್ರಧಾನಿ ನರೇಂದ್ರ ಮೋದಿ ಅವರ ಗೆಲುವು ಎಂದು ಬಿಜೆಪಿ ಬಣ್ಣಿಸಿದೆ. ದೇಶದ ಬಡವರಿಗೆ ಸಾಮಾಜಿಕ ನ್ಯಾಯ ಕಲ್ಪಿಸುವ ಪ್ರಧಾನಿಯವರ ಕಾರ್ಯಕ್ರಮಕ್ಕೆ ಸಿಕ್ಕಿರುವ ಜಯ ಎಂದಿದೆ.

ಹೆಮ್ಮೆ ಎಂದ ಹಾರ್ದಿಕ್: 2015ರಲ್ಲಿ ಗುಜರಾತ್‌ನಲ್ಲಿ ಪಾಟೀದಾರ್ ಸಮುದಾಯಕ್ಕೆ ಮೀಸಲಾತಿ ನೀಡುವಂತೆ ಪ್ರತಿಭಟನೆ ನಡೆಸಿದ್ದ ಸಂಘಟನೆಗಳು ಹಾಗೂ ರಾಜಕೀಯ ಪಕ್ಷಗಳ ನಾಯಕರು ತೀರ್ಪು ಸ್ವಾಗತಿಸಿದ್ದಾರೆ. 'ಕೋರ್ಟ್ ತೀರ್ಪಿನಿಂದ 68 ಸಮುದಾಯಗಳು ಮೀಸಲಾತಿಯ ಲಾಭ ಪಡೆಯಲಿವೆ. ನಾವು ಮಾಡಿದ್ದ ಪ್ರತಿಭಟನೆಯಿಂದಾಗಿ ಜನರು ಅನುಕೂಲ ಪಡೆಯುವಂತಾಗಿದೆ ಎಂಬುದು ಹೆಮ್ಮೆಯ ವಿಚಾರ' ಎಂದು ಪಾಟೀದಾರ್ ಪ್ರತಿಭಟನೆಯ ನೇತೃತ್ವ ವಹಿಸಿದ್ದ ಹಾರ್ದಿಕ್ ಪಟೇಲ್ ಅವರು ಹೇಳಿದ್ದಾರೆ.

ತಮಿಳುನಾಡಿನಲ್ಲಿ ಭಾರಿ ವಿರೋಧ

ಡಿಎಂಕೆ ವರಿಷ್ಠ, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಸುಪ್ರೀಂ ಕೋರ್ಟ್ ತೀರ್ಪನ್ನು ಹಿನ್ನಡೆ ಎಂದು ಕರೆದಿದ್ದಾರೆ. ಡಿಎಂಕೆ ಮಿತ್ರಪಕ್ಷಗಳಾದ ವಿಸಿಕೆ, ಪಿಎಂಕೆ, ಎಎಂಎಂಕೆ ಪಕ್ಷಗಳೂ ದನಿಗೂಡಿಸಿವೆ. ಆರ್ಥಿಕ ಸ್ಥಿತಿಗತಿಯನ್ನು ಸಾಮಾಜಿಕ ನ್ಯಾಯದ ಸೂಚಕವಾಗಿ ಪರಿಗಣಿಸಲು ಬರುವುದಿಲ್ಲ ಎಂದು ಪಕ್ಷಗಳು ಪ್ರತಿಪಾದಿಸಿವೆ. ಆದರೆ ತಮಿಳುನಾಡಿನ ಪ್ರತಿಪಕ್ಷ ಎಐಎಡಿಎಂಕೆ ಪ್ರತಿಕ್ರಿಯಿಸಿಲ್ಲ.

ದೇಶದ ಸುದೀರ್ಘ ಸಾಮಾಜಿಕ ನ್ಯಾಯ ಹೋರಾಟಕ್ಕೆ ಈ ತೀರ್ಪಿನಿಂದ ಹಿನ್ನಡೆಯಾಗಿದೆ ಎಂದು ಸ್ಟಾಲಿನ್ ಹೇಳಿದ್ದು, ಸಮಾನ ಮನಸ್ಕ ಪಕ್ಷಗಳು ಈ ಬಗ್ಗೆ ಒಕ್ಕೊರಲ ದನಿ ಎತ್ತಬೇಕು ಎಂದು ಕರೆ ನೀಡಿದ್ದಾರೆ. ತೀರ್ಪಿನ ವಿಸ್ತೃತ ಅಧ್ಯಯನ ಹಾಗೂ ಕಾನೂನು ತಜ್ಞರ ಸಲಹೆ ಬಳಿಕ ಮುಂದಿನ ನಿರ್ಧಾರ ಪ್ರಕಟಿಸಲಾಗುವುದು ಎಂದು ಹೇಳಿದ್ದಾರೆ.

ವಿಸಿಕೆ ಪಕ್ಷದ ತೋಲ್ ತಿರುಮಾವಳವನ್ ಅವರು ಮರುಪರಿಶೀಲನಾ ಅರ್ಜಿ ಸಲ್ಲಿಸುವುದಾಗಿ ತಿಳಿಸಿದ್ದಾರೆ. ರಾಜ್ಯದಲ್ಲಿ ಜಾರಿಯಲ್ಲಿರುವ ಶೇ 69ರಷ್ಟು ಮೀಸಲಾತಿಗೆ ಈ ತೀರ್ಪಿನಿಂದ ಧಕ್ಕೆಯಾಗುವುದಿಲ್ಲ ಎಂಬುದನ್ನು ಮುಖ್ಯಮಂತ್ರಿ ಸ್ಟಾಲಿನ್ ಅವರು ಖಚಿತಪಡಿಸಬೇಕು ಎಂದು ಎಎಂಎಂಕೆ ಮುಖಂಡ ಟಿ.ಟಿ.ವಿ ದಿನಕರನ್ ಆಗ್ರಹಿಸಿದ್ದಾರೆ.

'ಸುಪ್ರೀಂ ಕೋರ್ಟ್ ಜಾತಿವಾದಿ'

ಕಾಂಗ್ರೆಸ್‌ನ ಎಸ್‌ಸಿ, ಎಸ್‌ಟಿ ವಿಭಾಗದ ಮುಖ್ಯಸ್ಥ ಉದಿತ್ ರಾಜ್ ಅವರು ತೀರ್ಪಿನ ಕುರಿತು ವ್ಯಕ್ತಪಡಿಸಿರುವ ಅಭಿಪ್ರಾಯಕ್ಕೆ ಆಕ್ಷೇಪ ವ್ಯಕ್ತವಾಗಿದೆ. 'ನಾನು ಇಡಬ್ಲ್ಯುಎಸ್ ವಿರೋಧಿಯಲ್ಲ. ಆದರೆ, ಸುಪ್ರೀಂ ಕೋರ್ಟ್ ಜಾತಿವಾದಿಯಾಗಿ ವರ್ತಿಸುತ್ತಿದೆ ಎಂಬುದರಲ್ಲಿ ಸಂಶಯವಿಲ್ಲ. ಎಸ್‌ಸಿ, ಎಸ್‌ಟಿ, ಒಬಿಸಿ ಮೀಸಲಾತಿ ವಿಚಾರದಲ್ಲಿ ಇಂದಿರಾ ಸಹಾನಿ ಪ್ರಕರಣ ಉಲ್ಲೇಖಿಸಿ ಶೇ 50ರ ಮಿತಿಯನ್ನು ಅಡ್ಡ ತರಲಾಗುತ್ತದೆ. ಆದರೆ ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ನೀಡುವಾಗ ಸುಪ್ರೀಂ ಕೋರ್ಟ್ ತಿರುವು ತೆಗೆದುಕೊಂಡಿದೆ' ಎಂದು ಉದಿತ್ ಟ್ವೀಟ್ ಮಾಡಿದ್ದಾರೆ.

ಉದಿತ್ ರಾಜ್ ಹೇಳಿಕೆಗೆ ಬಿಜೆಪಿ ವಕ್ತಾರ ಗೌರವ ಭಾಟಿಯಾ ಕಿಡಿಕಾರಿದ್ದಾರೆ. 'ಸುಪ್ರೀಂಕೋರ್ಟ್ ಅನ್ನು ಜಾತಿವಾದಿ ಎಂದು ಕರೆಯುವ ಮೂಲಕ ಉದಿತ್ ರಾಜ್ ಅವರು ತಮ್ಮ ಬಡವರ ವಿರೋಧಿ ಮನಸ್ಥಿತಿಯನ್ನು ಹೊರಹಾಕಿದ್ದಾರೆ' ಎಂದು ಆರೋಪಿಸಿದ್ದಾರೆ. ರಾಜ್ ಅವರ ಹೇಳಿಕೆ ನ್ಯಾಯಾಂಗ ನಿಂದನೆಯಾಗಿದ್ದು, ಕೋರ್ಟ್ ಅವರ ವಿರುದ್ಧ ಕ್ರಮ ಜರುಗಿಸಬೇಕು ಎಂದೂ ಅವರು ಒತ್ತಾಯಿಸಿದ್ದಾರೆ. ಉದಿತ್ ರಾಜ್ ಅವರ ನಿಲುವು ಕಾಂಗ್ರೆಸ್ ನಿಲುವೇ ಎಂದು ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸ್ಪಷ್ಟನೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಇಡಬ್ಲ್ಯುಎಸ್ ಹಾದಿ

2019

- ಜ.8; ಸಂವಿಧಾನದ 103ನೇ ತಿದ್ದುಪಡಿ ಮಸೂದೆಗೆ ಲೋಕಸಭೆ ಅಂಗೀಕಾರ
- ಜ.9; ತಿದ್ದುಪಡಿ ಮಸೂದೆಗೆ ರಾಜ್ಯಸಭೆ ಅನುಮೋದನೆ
- ಜ.12; ಮಸೂದೆಗೆ ಸಹಿ ಹಾಕಿದ ರಾಷ್ಟ್ರಪತಿ ಕೋವಿಂದ್; ಪ್ರಕಟಣೆ ಹೊರಡಿಸಿದ ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವಾಲಯ
- ಫೆಬ್ರುವರಿ: ಹೊಸ ಕಾನೂನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ
- ಫೆ.6; ತಿದ್ದುಪಡಿ ಪ್ರಶ್ನಿಸಿ ಸಲ್ಲಿಸಲಾದ ಅರ್ಜಿ ಆಧರಿಸಿ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ನೋಟಿಸ್
- ಫೆ.8; ಮೀಸಲಾತಿಗೆ ತಡೆ ನೀಡಲು ಸುಪ್ರೀಂ ನಕಾರ

2022


- ಸೆ.8; ಅರ್ಜಿಗಳ ವಿಚಾರಣೆ ನಡೆಸಲು ನ್ಯಾಯಪೀಠ ರಚಿಸಿದ ಸುಪ್ರೀಂ ಕೋರ್ಟ್ ಮುಖ್ಯನ್ಯಾಯಮೂರ್ತಿ ಯು.ಯು. ಲಲಿತ್
- ಸೆ.13; ವಾದ–ಪ್ರತಿವಾದ ಆರಂಭಿಸಿದ ಕೋರ್ಟ್
- ಸೆ.27; ತೀರ್ಪು ಕಾಯ್ದಿರಿಸಿದ ಸುಪ್ರೀಂ ಕೋರ್ಟ್
- ನ.7; ಆರ್ಥಿಕವಾಗಿ ಹಿಂದುಳಿದವರಿಗೆ ಶಿಕ್ಷಣ ಹಾಗೂ ಸರ್ಕಾರಿ ಉದ್ಯೋಗದಲ್ಲಿ ಶೇ 10ರಷ್ಟು ಮೀಸಲಾತಿ ನೀಡುವ 103ನೇ ಸಂವಿಧಾನ ತಿದ್ದುಪಡಿ ಕಾಯ್ದೆಯ ಸಿಂಧುತ್ವವನ್ನು 3:2 ಬಹುಮತದೊಂದಿಗೆ ಎತ್ತಿಹಿಡಿದ ಸುಪ್ರೀಂ ಕೋರ್ಟ್

'ನೋ ಕಮೆಂಟ್ಸ್' ಎಂದ ಟಿಎಂಸಿ

ಸುಪ್ರೀಂ ತೀರ್ಪಿನ ಬಗ್ಗೆ ಸದ್ಯಕ್ಕೆ ಯಾವುದೇ ಪ್ರತಿಕ್ರಿಯೆ ನೀಡದಿರಲು ತೃಣಮೂಲ ಕಾಂಗ್ರೆಸ್ ಪಕ್ಷ (ಟಿಎಂಸಿ) ನಿರ್ಧರಿಸಿದೆ. 'ನೋ ಕಮೆಂಟ್ಸ್' ಎಂದು ವಕ್ತಾರ ಸುಖೇಂದು ಶೇಖರ್ ರಾಯ್ ಹೇಳಿದ್ದಾರೆ. ಆದರೆ ಪಕ್ಷದ ಮತ್ತೊಬ್ಬ ಮುಖಂಡ, ಸಂಸದ ಸೌಗತಾ ರಾಯ್ ಅವರು 'ಆರ್ಥಿಕ ಸಮಾನತೆ ಸಾಧಿಸುವ ಮಾರ್ಗದಲ್ಲಿ ದೊಡ್ಡ ಹೆಜ್ಜೆ' ಎಂದು ಕೋರ್ಟ್ ತೀರ್ಪನ್ನು ಬಣ್ಣಿಸಿದ್ದಾರೆ.

ಪ್ರಮುಖರ ಅಭಿಪ್ರಾಯಗಳು


'ರಾಜ್ಯದಲ್ಲೂ ಶೇ 10 ಮೀಸಲಾತಿ'



ಸಮಾಜದಲ್ಲಿರುವ ಎಲ್ಲ ವರ್ಗದ ಬಡವರಿಗೆ ಶೇ 10 ಮೀಸಲಾತಿ ನೀಡುವ ಕೇಂದ್ರ ಸರ್ಕಾರದ ಮಹತ್ವದ ನಿರ್ಧಾರವನ್ನು ಸುಪ್ರೀಂಕೋರ್ಟ್ ಎತ್ತಿ ಹಿಡಿದಿದೆ. ಮುಂದೆ ಕರ್ನಾಟಕದಲ್ಲೂ ಮೀಸಲಾತಿ ಇಲ್ಲದ ಬಡ ವರ್ಗದವರಿಗೆ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಶೇ 10 ಮೀಸಲಾತಿ ಸಿಗಲಿದೆ.

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

'ಪುನರ್ ಪರಿಶೀಲನೆ ಅಗತ್ಯವಿದೆ'



ಆರ್ಥಿಕವಾಗಿ ಹಿಂದುಳಿದವರಿಗೆ ಶೇಕಡ 10ರಷ್ಟು ಮೀಸಲಾತಿ ಕಲ್ಪಿಸುವ ತೀರ್ಮಾನವನ್ನು ಮೂವರು ನ್ಯಾಯಮೂರ್ತಿಗಳು ಎತ್ತಿ ಹಿಡಿದಿದ್ದರೆ, ಇಬ್ಬರು ತಿರಸ್ಕರಿಸಿದ್ದಾರೆ. ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವವರು, ಶೋಷಣೆ ಅನುಭವಿಸಿದವರಿಗೆ ಮಾತ್ರ ಮೀಸಲಾತಿ ಒದಗಿಸಲು ನಮ್ಮ ಸಂವಿಧಾನದಲ್ಲಿ ಅವಕಾಶವಿದೆ. ಆರ್ಥಿಕ ಮಾನದಂಡದ ಆಧಾರದಲ್ಲಿ ಮೀಸಲಾತಿ ಕಲ್ಪಿಸಲು ಅವಕಾಶ ಇರಲಿಲ್ಲ. ಅದನ್ನು ತಿದ್ದುಪಡಿ ಮಾಡಿ ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ಕಲ್ಪಿಸುವುದು ಸಂವಿಧಾನ ಮತ್ತು ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾದುದು. ಹಂಚಿಕೆ ಮತ್ತು ಮೀಸಲಾತಿ ಎರಡೂ ಒಂದೇ ಅಲ್ಲ. ಈ ವಿಷಯದಲ್ಲಿ ಸುಪ್ರೀಂ ಕೋರ್ಟ್ ತೀರ್ಮಾನದಲ್ಲಿ ಕೊಂಡಿ ಕಳಚಿದಂತಿದೆ ಅನಿಸುತ್ತಿದೆ. ಐವರು ನ್ಯಾಯಮೂರ್ತಿಗಳ ಪೀಠದ ತೀರ್ಪನ್ನು ಪ್ರಶ್ನಿಸಿ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಬೇಕು. ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಬೇಕು.

ನ್ಯಾ. ಎಚ್.ಎನ್. ನಾಗಮೋಹನ್ ದಾಸ್, ನಿವೃತ್ತ ನ್ಯಾಯಮೂರ್ತಿ

'ಕೋರ್ಟ್ ತೀರ್ಮಾನ ಸರಿಯಾಗಿದೆ'



ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಮತ್ತು ಹಿಂದುಳಿದ ವರ್ಗಗಳಿಗೆ ಶೇ 50ರಷ್ಟು ಮೀಸಲಾತಿ ಇದೆ. ಸಾಮಾನ್ಯ ವರ್ಗಕ್ಕೆ ಲಭ್ಯವಿದ್ದ ಶೇ 50ರಲ್ಲಿ ಶೇ 10ರಷ್ಟನ್ನು ಆರ್ಥಿಕವಾಗಿ ಹಿಂದುಳಿದವರಿಗೆ ನೀಡುವ ತೀರ್ಮಾನವನ್ನು ಎತ್ತಿ ಹಿಡಿದಿರುವ ಸುಪ್ರೀಂ ಕೋರ್ಟ್ ತೀರ್ಮಾನ ಸರಿಯಾಗಿದೆ. ಮೀಸಲಾತಿ ಮತಬ್ಯಾಂಕ್ ರಾಜಕಾರಣದ ಅಸ್ತ್ರವಾಗಿ ಬಳಕೆಯಾಗುತ್ತಿದೆ. ಜನರು ಹೀಗೆಯೇ ಇರಲಿ ಎಂಬುದು ರಾಜಕಾರಣಿಗಳ ಬಯಕೆ. ಮೀಸಲಾತಿ ನೀತಿಯನ್ನು ನಿಧಾನವಾಗಿ ಬದಲಾಯಿಸಿ ಆರ್ಥಿಕ ಮಾನದಂಡಗಳ ಆಧಾರದಲ್ಲೇ ಸೌಲಭ್ಯ ಕಲ್ಪಿಸುವ ವ್ಯವಸ್ಥೆ ಜಾರಿಗೆ ತರಬೇಕು.

ಬಿ.ವಿ. ಆಚಾರ್ಯ, ಹಿರಿಯ ವಕೀಲ

'ಸಂವಿಧಾನಕ್ಕೆ ವಿರುದ್ಧ'



ಬ್ರಾಹ್ಮಣರು ಹಾಗೂ ಬ್ರಾಹ್ಮಣೇತರ ಮೇಲ್ಜಾತಿಗಳಿಗೆ ನೀಡಿರುವ ಆರ್ಥಿಕತೆ ಆಧಾರಿತ ಶೇ 10ರಷ್ಟು ಮೀಸಲಾತಿಯನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿರುವುದು ಚಾತುರ್ವರ್ಣ್ಯ ವ್ಯವಸ್ಥೆಯ ಜಾರಿಗೆ ಹಾದಿ ಸುಗಮವಾದಂತೆ. ಇದೊಂದು ಬಹುದೊಡ್ಡ ಸಾಮಾಜಿಕ ವಂಚನೆ. ಸಂವಿಧಾನದ ಪರಿಚ್ಛೇದ 15(4), 16(4)ಕ್ಕೆ ಹಿನ್ನಡೆ. ತರ್ಕ ಮತ್ತು ಅರ್ಥ ವಿವರಣೆಯಲ್ಲಿ (logic and reasoning) ಸಂಪೂರ್ಣ ವೈಫಲ್ಯ ಕಾಣಬಹುದು. ದೇಶದ ಚಿಂತಕರು, ಸಂಘಟನೆಗಳು ಸಾಮಾಜಿಕ ನ್ಯಾಯ ಪರವಾದ ಹೋರಾಟದ ಮುಂದಿನ ಸ್ವರೂಪ ನಿರ್ಧರಿಸಬೇಕಿದೆ. ಅವರ ಬಳಿ ಯಾವ ಕಾರ್ಯ ಯೋಜನೆಗಳಿವೆ ಎನ್ನುವುದನ್ನು ಸಮಾಜದ ಮುಂದಿಡಬೇಕು.

ಬಿ. ಶ್ರೀಪಾದ ಭಟ್, ಶಿಕ್ಷಣ ತಜ್ಞ

'ಎಲ್ಲ ಬಡವರೂ ಸೇರಬೇಕಿತ್ತು'



ಸುಪ್ರೀಂಕೋರ್ಟ್ 103ನೇ ಸಂವಿಧಾನ ತಿದ್ದುಪಡಿಯನ್ನು ಎತ್ತಿ ಹಿಡಿಯುವಾಗ, ಆರ್ಥಿಕವಾಗಿ ಹಿಂದುಳಿದವರ ವ್ಯಾಖ್ಯಾನದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದವರನ್ನು ಸೇರಿಸದಿರುವುದು ಎಷ್ಟು ಸಮಂಜಸ? ಸಂಸತ್ತಿಗೆ ಶೇ 50ಕ್ಕಿಂತ ಹೆಚ್ಚಿನ ಮೀಸಲಾತಿ ನೀಡುವ ಅಧಿಕಾರ ಇದೆ. ಆದರೆ, ಮೀಸಲಾತಿಯನ್ನು ನೀಡುವಾಗ, ವೈಜ್ಞಾನಿಕ ತಳಹದಿಯ ಅಂಕಿ ಅಂಶಗಳನ್ನ ಕಲೆ ಹಾಕಬೇಕು. ಆಯೋಗಗಳ ಮೂಲಕ ಮೀಸಲಾತಿ ನಿಗದಿ ಮನದಟ್ಟು ಮಾಡಿಕೊಳ್ಳಬೇಕು. ಆಗ ಮಾತ್ರ ಸಂವಿಧಾನ ಅನುಚ್ಛೇದ 15 ಹಾಗೂ 16ರಲ್ಲಿ ಹೇಳಿರುವ 'ಸಂರಕ್ಷಣಾ ತಾರತಮ್ಯ ನಿಯಮ'ಕ್ಕೆ ಒಂದು ಅರ್ಥ ಸಿಗುತ್ತದೆ.

ಡಾ.ಎನ್.ಸತೀಶ್ ಗೌಡ, ಸಹ ಪ್ರಾಧ್ಯಾಪಕ, ವಿಶ್ವವಿದ್ಯಾಲಯ ಕಾನೂನು ಕಾಲೇಜು, ಬೆಂಗಳೂರು

ತೀರ್ಪು ಸ್ವಾಗತಾರ್ಹ



ಸುಪ್ರೀಂ ಕೋರ್ಟ್ ಪ್ರಕಟಿಸಿರುವ ತೀರ್ಪು ಸ್ವಾಗತಾರ್ಹ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಹಾಗೂ ಮುಖ್ಯಮಂತ್ರಿ ನಾಲ್ಕು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಇಡಬ್ಲ್ಯುಎಸ್ ವರ್ಗಕ್ಕೆ ಕೊಡಬೇಕಾಗಿರುವ ಶೇ 10ರಷ್ಟು ಮೀಸಲಾತಿ ಕಾಯ್ದೆಯನ್ನು ಸಮರ್ಪಕವಾಗಿ ಜಾರಿಗೆ ತರಲು ಕಾರ್ಯಪ್ರವೃತ್ತರಾಗಬೇಕು.

ಅಶೋಕ ಹಾರನಹಳ್ಳಿ
ಹಿರಿಯ ವಕೀಲ, ಅಖಿಲ ಭಾರತ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ

2 ವಾಹಿನಿಗಳನ್ನು ಹೊರಗಿಟ್ಟು ಕೇರಳ ರಾಜ್ಯಪಾಲರ ಸುದ್ದಿಗೋಷ್ಠಿ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳದ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ಸೋಮವಾರ ಕೊಚ್ಚಿಯಲ್ಲಿ ತಾವು ನಡೆಸುತ್ತಿದ್ದ ಸುದ್ದಿಗೋಷ್ಠಿಯಿಂದ, ಹೊರ ಹೋಗುವಂತೆ ಎರಡು ಸುದ್ದಿ ವಾಹಿನಿಗಳ ಪ್ರತಿನಿಧಿಗಳಿಗೆ ಸೂಚಿಸಿದರು.

ಸಿಪಿಎಂ ನಡೆಸುತ್ತಿರುವ 'ಕೈರಳಿ' ಮತ್ತು ಕೇರಳದ 'ಜಮಾತ್‌–ಎ– ಇಸ್ಲಾಮಿ' ಸಂಘಟನೆ ಬೆಂಬಲಿತ 'ಮೀಡಿಯಾ ಒನ್'ನ ಸುದ್ದಿ ವಾಹಿನಿಗಳ ವರದಿಗಾರರು ಮತ್ತು ಕ್ಯಾಮೆರಾ ಸಿಬ್ಬಂದಿಯನ್ನು ಸುದ್ದಿಗೋಷ್ಠಿಯಿಂದ ಹೊರ ನಡೆಯುವಂತೆ ರಾಜ್ಯಪಾಲರು ಸೂಚನೆ ನೀಡಿದರು. ಈ ಸುದ್ದಿ ವಾಹಿನಿಗಳು ತಮ್ಮ ವಿರುದ್ಧ ಅಪಪ್ರಚಾರ ಮಾಡುತ್ತಿವೆ ಎಂದು ದೂರಿದರು.

ಶಾ ಬಾನು ಪ್ರಕರಣದಲ್ಲಿ 'ಮೀಡಿಯಾ ಒನ್' ವಾಹಿನಿಯು ತಮ್ಮ ವಿರುದ್ಧ ಪ್ರಚಾರ ಮಾಡುತ್ತಿದೆ ಎಂದು ರಾಜ್ಯಪಾಲರು ಆರೋಪಿಸಿದರು. ರಾಜ್ಯಪಾಲರ ಕಚೇರಿಯ ಅನುಮತಿ ಮೇರೆಗೆ ಸುದ್ದಿಗೋಷ್ಠಿಗೆ ಬಂದಿರುವುದಾಗಿ ಈ ವಾಹಿನಿಗಳ ಪ್ರತಿನಿಧಿಗಳು ತಿಳಿಸಿದರೂ, ರಾಜ್ಯಪಾಲರು ತಮ್ಮ ನಿಲುವು ಬದಲಿಸಲಿಲ್ಲ.

ಈ ಹಿಂದೆಯೂ ರಾಜಭವನದ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸದಂತೆ ನಾಲ್ಕು ಸುದ್ದಿ ವಾಹಿನಿಗಳನ್ನು ರಾಜಭವನ ನಿರ್ಬಂಧಿಸಿತ್ತು ಎಂಬ ಆರೋಪವಿದೆ. ರಾಜ್ಯಪಾಲರ ಈ ನಡೆಯನ್ನು ಖಂಡಿಸಿರುವ ಕೇರಳ ಕಾರ್ಯನಿರತ ಪತ್ರಕರ್ತರ ಸಂಘವು ರಾಜ್ಯಪಾಲರು ಕ್ಷಮೆ ಕೋರಬೇಕು ಎಂದು ಆಗ್ರಹಿಸಿದೆ.

'ಹಿಂದೂ ಪರ್ಷಿಯನ್ ಪದ, ಅದಕ್ಕೆ ಕೆಟ್ಟ ಅರ್ಥವಿದೆ'

ಒಂದನೇ ಪುಟದಿಂದ

'ನಮಗೆ ತಪ್ಪು ಇತಿಹಾಸ ಹೇಳಲಾಗುತ್ತಿದೆ. ಶಿವಾಜಿ ಮಹಾರಾಜರು, ಸಂಭಾಜಿ ಮಹಾರಾಜರು, ಬಸವೇಶ್ವರರು, ಸಂತ ತುಕಾರಾಮರು ಸಾವನ್ನಪ್ಪಿದ ಇತಿಹಾಸ ತಿರುಚಲಾಗಿದೆ' ಎಂದರು.

'ಶಿವಾಜಿ ಮಹಾರಾಜರ ಕಾಲದಲ್ಲಿ ಹಿಂದೂ- ಮುಸ್ಲಿಂ ಹೋರಾಟ ಇರಲಿಲ್ಲ. ಅವರು ಎಲ್ಲರನ್ನೂ ಸಮಾನವಾಗಿ ಕಂಡವರು. ಆದರೆ, ಈಗ ಕೆಲವರು ತಮ್ಮ ಸ್ವಾರ್ಥಕ್ಕಾಗಿ ಹಿಂದೂ, ಮುಸ್ಲಿಂ, ದಲಿತರಲ್ಲಿ ಹೋರಾಟ ಮಾಡಿಸುತ್ತಿದ್ದಾರೆ. ಶಿವಾಜಿ ಅವರದ್ದು ವಿಶ್ವವಿಖ್ಯಾತ ಒಂದೇ ಪೇಂಟಿಂಗ್ ಇದೆ. ಅದನ್ನು ರಚಿಸಿರುವುದು ಕುಲಕರ್ಣಿಯೋ, ದೇಶಪಾಂಡೆಯೋ ಅಲ್ಲ. ಮಹಮ್ಮದ್ ಮದಾರಿ ಎನ್ನುವ ಮುಸ್ಲಿಂ ಕಲಾವಿದ' ಎಂದು ಹೇಳಿದರು.

'ನಮ್ಮ ಹಕ್ಕುಗಳನ್ನು ಕಸಿದುಕೊಳ್ಳುವ ಪ್ರಯತ್ನ ನಡೆದಿವೆ. ಅವುಗಳನ್ನು ಪಡೆಯಲು ಮಾನವ ಬಂಧುತ್ವ ವೇದಿಕೆ ಮೂಲಕ ಹೋರಾಟ ಆರಂಭಿಸಲಾಗಿದೆ' ಎಂದರು.

'ನನ್ನ ಭಾಷಣ ತಪ್ಪಾಗಿ ಅರ್ಥೈಸಬೇಡಿ'

ಒಂದನೇ ಪುಟದಿಂದ

'ಹಿಂದೂ ಧರ್ಮದ ಬಗ್ಗೆ ಅಟಲ್ ಬಿಹಾರಿ ವಾಜಪೇಯಿ ಅವರು ಭಾಷಣದಲ್ಲಿ 'ಹಿಂದೂ ಎಂಬುದು ಜೀವನಕ್ರಮ' ಎಂದು ಹೇಳಿದ್ದಾರೆ. ಅದನ್ನೇ ನಾನು ಹೇಳಿದ್ದೇನೆ. ನಾನೇನು ಬಹಳ ದೊಡ್ಡ ಅಪರಾಧ ಮಾಡಿದ್ದೇನೆ ಎಂಬಂತೆ ಬಿಂಬಿಸಬೇಡಿ. ನಾನು ಯಾವುದೇ ಧರ್ಮ, ಭಾಷೆಗೆ ಅವಮಾನ ಮಾಡಿದವನಲ್ಲ. ಆ ಉದ್ದೇಶ ನನಗೆ ಇಲ್ಲ' ಎಂದು ಹೇಳಿದ್ದಾರೆ.

ಶೇ 10 ಮೀಸಲಾತಿ ಎತ್ತಿಹಿಡಿದ 'ಸುಪ್ರೀಂ'

ಒಂದನೇ ಪುಟದಿಂದ

'ಆರ್ಥಿಕವಾಗಿ ದುರ್ಬಲರಾದವರು ಎಂಬುದನ್ನು ಒಂದು ಅನಗತ್ಯವಾದ ವರ್ಗೀಕರಣ ಎಂದು ಪರಿಗಣಿಸಬೇಕಿಲ್ಲ. ಸಮಾನರನ್ನು ಅಸಮಾನವಾಗಿ ಪರಿಗಣಿಸಲು ಹೇಗೆ ಸಾಧ್ಯವಿಲ್ಲವೋ, ಹಾಗೆಯೇ ಅಸಮಾನರನ್ನು ಸಮಾನವಾಗಿ ಪರಿಗಣಿಸುವುದೂ ಸಂವಿಧಾನದ ಉಲ್ಲಂಘನೆಯಾಗುತ್ತದೆ. ಆರ್ಥಿಕವಾಗಿ ದುರ್ಬಲರು ಎಂಬುದು ಒಂದು ಪ್ರತ್ಯೇಕ ವರ್ಗವಾಗುತ್ತದೆ. ಹೀಗಾಗಿ ಈ ಮೀಸಲಾತಿಯಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗದವರನ್ನು ಹೊರಗಿಡುವುದು ಅಸಮಾನತೆಯಾಗಲೀ ಅಥವಾ ಸಂವಿಧಾನದ ಉಲ್ಲಂಘನೆಯಾಗಲೀ ಆಗುವುದಿಲ್ಲ' ಎಂದು ಈ ಮೂವರು ನ್ಯಾಯಮೂರ್ತಿಗಳು ತೀರ್ಪಿನಲ್ಲಿ ಹೇಳಿದ್ದಾರೆ.

ಯಾರಿಗೆ ಶೇ 50ರ ಮಿತಿ: ಮಂಡಲ್ ಆಯೋಗದ ಪ್ರಕರಣದಲ್ಲಿ 9 ಸದಸ್ಯರ ಪೀಠ 1992ರಲ್ಲಿ ನೀಡಿದ್ದ ತೀರ್ಪಿನ ಅನುಸಾರ, ಶೇ 50ರ ಮೀಸಲು ಮಿತಿ ಪರಿಶಿಷ್ಟ ಜಾತಿ, ಪಂಗಡ ಮತ್ತು ಒಬಿಸಿ ವರ್ಗಕ್ಕಷ್ಟೇ ಅನ್ವಯವಾಗಲಿದೆ. ಈ ಮಿತಿ ಹೊರತಾಗಿ ಶೇ 10ರ ಇಡಬ್ಲ್ಯುಎಸ್ ಕೋಟಾ ನಿಗದಿಪಡಿಸಲಾಗಿದೆ ಎಂದೂ ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿತು.

ಇಡಬ್ಲ್ಯುಎಸ್ ಮೀಸಲಾತಿಯ ಪ್ರಯೋಜನ ಪಡೆದು, ಮುಂದುವರಿದವರನ್ನು ಮುಂದಿನ ದಿನಗಳಲ್ಲಿ ಆ ವರ್ಗದಿಂದ ಹೊರಗಿಡಬೇಕು ಎಂದು ನ್ಯಾಯಮೂರ್ತಿ ಜೆ.ಬಿ.ಪಾರ್ದಿವಾಲಾ ತಮ್ಮ ತೀರ್ಪಿನಲ್ಲಿ ಹೇಳಿದ್ದಾರೆ.

ಮುಖ್ಯ ನ್ಯಾಯಮೂರ್ತಿ ಯು.ಯು. ಲಲಿತ್ ಅವರು ಮಂಗಳವಾರ ನಿವೃತ್ತರಾಗಲಿದ್ದಾರೆ.

ಯಾರು, ಏನೆಂದರು?

ನಾಗರಿಕರ ನಡುವೆ ವೈಷಮ್ಯ ಬಿತ್ತಲು ಯತ್ನಿಸಿದ್ದ ಪಟ್ಟಭದ್ರ ಹಿತಾಸಕ್ತಿಯ ರಾಜಕೀಯ ಪಕ್ಷಗಳಿಗೆ ಸುಪ್ರೀಂ ಕೋರ್ಟ್ ತೀರ್ಪಿನಿಂದ ಕಪಾಳಮೋಕ್ಷವಾಗಿದೆ

ಧರ್ಮೇಂದ್ರ ಪ್ರಧಾನ್, ಕೇಂದ್ರ ಸಚಿವ

ಬಡಜನರಿಗೆ ನ್ಯಾಯ ಸಿಕ್ಕಿದೆ. ಯಾವ ಸಮುದಾಯಕ್ಕೆ ಸೇರಿದ್ದಾರೆ ಎಂಬುದನ್ನು ಪರಿಗಣಿಸದೇ, ಬಡವರಿಗೆ ನ್ಯಾಯ ಕಲ್ಪಿಸುವುದು ನಮ್ಮ ಗುರಿಯಾಗಿರಬೇಕು. ನಾನು ರಾಜಸ್ಥಾನದಲ್ಲಿ ದೇಶದಲ್ಲೇ ಮೊದಲ ಬಾರಿಗೆ ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಮೀಸಲಾತಿ ಕಲ್ಪಿಸುವ ನಿರ್ಣಯವನ್ನು ವಿಧಾನಸಭೆಯಲ್ಲಿ ಕೈಗೊಂಡಿದ್ದೆ

ಅಶೋಕ್ ಗೆಹಲೋತ್, ರಾಜಸ್ಥಾನ ಮುಖ್ಯಮಂತ್ರಿ

ಬಡಜನರೆಲ್ಲ ಒಂದೇ ಜಾತಿ. ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿ ಜಾರಿಗೊಳಿಸಬೇಕು. ಒಬಿಸಿ ಜನ ಅಧಿಕವಾಗಿರುವ ರಾಜ್ಯಗಳಲ್ಲಿ ಮಧ್ಯಪ್ರದೇಶದ ಮಾದರಿಯಲ್ಲಿ ವಿಶೇಷ ಸಂದರ್ಭದಲ್ಲಿ ಶೇ 27ರಷ್ಟು ಮೀಸಲಾತಿ ನೀಡಬಹುದು

ಉಮಾ ಭಾರತಿ, ಬಿಜೆಪಿ ನಾಯಕಿ

ಮೀಸಲಾತಿ ವಿಚಾರವು ರಾಜಕೀಯವಾಗಿ ಇತ್ಯರ್ಥವಾಗಬೇಕೇ ಹೊರತು ನ್ಯಾಯಾಂಗದ ಪರಿಧಿಯಲ್ಲಿ ಅಲ್ಲ. ಹಿಂದೂಗಳಲ್ಲಿ ಬಹುಸಂಖ್ಯಾತರಾಗಿರುವ ಒಬಿಸಿ ಸಮುದಾಯಕ್ಕೆ ವಿರುದ್ಧವಾಗಿರುವ ಈ ಮೀಸಲಾತಿ ಖಂಡಿಸಿ ಬಿಜೆಪಿ ಸರ್ಕಾರದ ವಿರುದ್ಧ ಎಲ್ಲರೂ ಹೋರಾಟಕ್ಕೆ ಕೈಜೋಡಿಸಬೇಕು. ಕಾಂಗ್ರೆಸ್ ಹಾಗೂ ಎಡಪಕ್ಷಗಳು ತಮ್ಮ ನಿಲುವು ಬದಲಿಸಿ, ಮೀಸಲಾತಿ ವಿರೋಧಿಸಬೇಕು

ತಿರುಮಾವಳವನ್, ವಿಸಿಕೆ ಮುಖಂಡ

ದಿಗ್ಗಜ ಆಟಗಾರ ಸುನಿಲ್ ಗಾವಸ್ಕರ್ ಬಣ್ಣನೆ; 'ಸ್ಕೂಪ್ ಶಾಟ್' ಸಿಕ್ಸರ್‌ಗೆ ಮೆಚ್ಚುಗೆ

ಸೂರ್ಯ 'ಭಾರತದ ಮಿಸ್ಟರ್ 360'

ಮೆಲ್ಬರ್ನ್/ ನವದೆಹಲಿ (ಪಿಟಿಐ): ಟಿ20 ವಿಶ್ವಕಪ್ ಟೂರ್ನಿಯ ಕೊನೆಯ ಲೀಗ್ ಪಂದ್ಯದಲ್ಲಿ ಭಾರತದ ಸೂರ್ಯಕುಮಾರ್ ಯಾದವ್ ಅವರು ಜಿಂಬಾಬ್ವೆಯ ರಿಚರ್ಡ್ ಎಂಗರವ ಬೌಲಿಂಗ್‌ನಲ್ಲಿ 'ಸ್ಕೂಪ್ ಶಾಟ್' ಮೂಲಕ ಹೊಡೆದ ಸಿಕ್ಸರ್ ಬಗ್ಗೆ ಕ್ರಿಕೆಟ್ ವಲಯದಲ್ಲಿ ಸಾಕಷ್ಟು ಚರ್ಚೆ ನಡೆದಿದೆ.

ತಮ್ಮ ವಿಶಿಷ್ಟ ರೀತಿಯ ಬ್ಯಾಟಿಂಗ್ ಮೂಲಕ ಈಗಾಗಲೇ ಅಭಿಮಾನಿಗಳ ಮನಗೆದ್ದಿರುವ 'ಸೂರ್ಯ'ನ ಪ್ರಖರತೆ ಪಂದ್ಯದಿಂದ ಪಂದ್ಯಕ್ಕೆ ಹೆಚ್ಚುತ್ತಿದೆ. ಭಾನುವಾರ ಎಂಸಿಜಿಯಲ್ಲಿ ನೆರೆದಿದ್ದ 80 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರ ಮುಂದೆ ಅಮೋಘ ಆಟವಾಡಿದ್ದ ಅವರು 25 ಎಸೆತಗಳಲ್ಲಿ 61 ರನ್ ಗಳಿಸಿದ್ದರು.

ನಾಲ್ಕು ಸಿಕ್ಸರ್ ಹಾಗೂ ಆರು ಬೌಂಡರಿ ಹೊಡೆದಿದ್ದರಲ್ಲದೆ, ಭಾರತದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಸೂರ್ಯಕುಮಾರ್ ಆಟವನ್ನು ದಿಗ್ಗಜ ಆಟಗಾರ ಸುನಿಲ್ ಗಾವಸ್ಕರ್ ಸೇರಿದಂತೆ ಹಲವರು ಕೊಂಡಾಡಿದ್ದಾರೆ.

ಮುಂಬೈನ ಬ್ಯಾಟರ್ ಈ ವಿಶ್ವಕಪ್‌ನಲ್ಲಿ ಆಡಿರುವ ಐದು ಪಂದ್ಯಗಳಿಂದ 225 ರನ್‌ಗಳನ್ನು ಪೇರಿಸಿದ್ದಾರೆ. ಅವರ ಸ್ಟ್ರೈಕ್‌ರೇಟ್ 193.26 ಆಗಿದೆ. ಇಂಗ್ಲೆಂಡ್ ವಿರುದ್ಧದ ಸೆಮಿಫೈನಲ್‌ನಲ್ಲೂ ಭಾರತ ತಂಡ ಅವರಿಂದ ಇಂತಹದೇ ಆಟ ನಿರೀಕ್ಷಿಸುತ್ತಿದೆ.

ಭಾರತದ 'ಮಿಸ್ಟರ್ 360': 'ಸೂರ್ಯಕುಮಾರ್ ಅವರು ಭಾರತದ 'ಮಿಸ್ಟರ್ 360 ಡಿಗ್ರಿ' ಆಟಗಾರನಾಗಿ ಹೊರಹೊಮ್ಮಿದ್ದಾರೆ' ಎಂದು ಸುನಿಲ್ ಗಾವಸ್ಕರ್ ಬಣ್ಣಿಸಿದ್ದಾರೆ.

ದಕ್ಷಿಣ ಆಫ್ರಿಕಾದ ಎಬಿ ಡಿವಿಲಿಯರ್ಸ್ ಕ್ರಿಕೆಟ್ ವಲಯದಲ್ಲಿ 'ಮಿ.360' ಎಂಬ ಹೆಸರು ಪಡೆದುಕೊಂಡಿದ್ದಾರೆ. ಸ್ಕೂಪ್ ಶಾಟ್‌ಗಳ ಮೂಲಕ ವಿಕೆಟ್ ಕೀಪರ್ ತಲೆಮೇಲಿಂದ ಸೇರಿದಂತೆ ಅಂಗಳದ ಎಲ್ಲ ಕಡೆಗೂ ಸಿಕ್ಸರ್, ಬೌಂಡರಿ ಹೊಡೆಯಬಲ್ಲ ಸಾಮರ್ಥ್ಯ ಅವರಿಗೆ ಈ ಹೆಸರು ತಂದುಕೊಟ್ಟಿದೆ. ಇದೀಗ ಸೂರ್ಯ ಅವರಿಗೂ ಅದೇ ಹೆಸರು ದೊರೆತಿದೆ.

'ಸೂರ್ಯಕುಮಾರ್ ಆಟ ದಿಂದಾಗಿಯೇ ಭಾರತ ತಂಡಕ್ಕೆ ಆಸ್ಟ್ರೇಲಿಯಾದ ಪಿಚ್‌ಗಳಲ್ಲಿ ಡಿಫೆಂಡ್ ಮಾಡಬಲ್ಲಂತಹ ಸ್ಕೋರ್ ಗಳಿಸಲು ಸಾಧ್ಯವಾಗುತ್ತಿದೆ. ಇಲ್ಲದಿದ್ದರೆ 140–150 ರನ್ ಗಳಿಸಲೂ ಪರದಾಡಬೇಕಾಗುತ್ತದೆ' ಎಂದು ಗಾವಸ್ಕರ್ ಅಭಿಪ್ರಾಯಪಟ್ಟಿದ್ದಾರೆ.

1,000 ರನ್ ಸಾಧನೆ: ಸೂರ್ಯಕುಮಾರ್ 2022ರ ಕ್ಯಾಲೆಂಡರ್ ಋತುವಿನಲ್ಲಿ ಟಿ20 ಕ್ರಿಕೆಟ್‌ನಲ್ಲಿ ಸಾವಿರ ರನ್ ಪೂರೈಸಿದ ಮೊದಲ ಹಾಗೂ ಏಕೈಕ ಬ್ಯಾಟರ್ ಎನಿಸಿಕೊಂಡಿದ್ದಾರೆ.

ಟಿ20ಯಲ್ಲಿ ಒಂದು ವರ್ಷದಲ್ಲಿ ಸಾವಿರ ರನ್ ಪೇರಿಸಿದ ವಿಶ್ವದ ಎರಡನೇ ಬ್ಯಾಟರ್ ಎಂಬ ಗೌರವ ಒಲಿದಿದೆ.

ಪಾಕಿಸ್ತಾನದ ಮೊಹಮ್ಮದ್ ರಿಜ್ವಾನ್ ಕಳೆದ ವರ್ಷ ಇಂತಹ ಸಾಧನೆ ಮಾಡಿದ್ದರು. ಅವರು ಒಂದೇ ವರ್ಷದಲ್ಲಿ 1,326 ರನ್ ಕಲೆಹಾಕಿದ್ದರು. ಈ ವರ್ಷ 924 ರನ್‌ಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ.

'ರಬ್ಬರ್ ಬಾಲ್‌ನಲ್ಲಿ ಆಡಿ ಸ್ಕೂಪ್ ಶಾಟ್ ಕಲಿತೆ'

'ರಬ್ಬರ್ ಬಾಲ್ ಬಳಸಿ ಕ್ರಿಕೆಟ್ ಆಡುತ್ತಿದ್ದಾಗ ಇಂತಹ ಸ್ಕೂಪ್ ಶಾಟ್‌ಗಳನ್ನು ಹೊಡೆಯಲು ಕಲಿತೆ. ಅದನ್ನು ಇಲ್ಲೂ ಕಾರ್ಯರೂಪಕ್ಕಿಳಿಸಿದ್ದೇನೆ' ಎಂದು ಸೂರ್ಯಕುಮಾರ್ ತಮ್ಮ ಆಟದ ಬಗ್ಗೆ ಹೇಳಿದ್ದಾರೆ.

'ಬೌಲರ್ ಯಾವ ರೀತಿ ಬೌಲ್ ಮಾಡುವನು ಎಂಬುದನ್ನು ಮುಂಚಿತವಾಗಿಯೇ ಅಂದಾಜಿಸಿ, ಸ್ಕೂಪ್ ಶಾಟ್‌ಗಳಿಗೆ ಮುಂದಾಗುವೆ' ಎಂದು ಭಾನುವಾರದ ಇನಿಂಗ್ಸ್ ಬಗ್ಗೆ ಪ್ರತಿಕ್ರಿಯಿಸಿದ್ದಾರೆ.


ಸೂರ್ಯಕುಮಾರ್ ಯಾದವ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ಲೀಗ್ ಹಂತದಲ್ಲಿ 'ಸೂರ್ಯ' ಸಾಧನೆ

ಎದುರಾಳಿ	ರನ್	ಎಸೆತ	ಸ್ಟ್ರೈಕ್‌ರೇಟ್
ಪಾಕಿಸ್ತಾನ	15	10	150.00
ನೆದರ್ಲೆಂಡ್ಸ್	51	25	204.00
ದಕ್ಷಿಣ ಆಫ್ರಿಕಾ	68	40	170.00
ಬಾಂಗ್ಲಾದೇಶ	30	16	187.50
ಜಿಂಬಾಬ್ವೆ	61	25	244.00

ಈ ವರ್ಷ ಟಿ20ಯಲ್ಲಿ ಹೆಚ್ಚು ರನ್ ಗಳಿಸಿದವರು

ಆಟಗಾರ	ದೇಶ	ಪಂದ್ಯ	ರನ್	ಗರಿಷ್ಠ	ಸ್ಟ್ರೈಕ್‌ರೇಟ್
ಸೂರ್ಯಕುಮಾರ್ ಯಾದವ್	ಭಾರತ	28	1,026	117	186.54
ಮೊಹಮ್ಮದ್ ರಿಜ್ವಾನ್	ಪಾಕಿಸ್ತಾನ	23	924	88	122.70
ಸಿಕಂದರ್ ರಜಾ	ಜಿಂಬಾಬ್ವೆ	24	735	87	150.92
ವಿರಾಟ್ ಕೊಹ್ಲಿ	ಭಾರತ	19	731	122	139.23
ಪಥುಮ್ ನಿಸಾಂಕ	ಶ್ರೀಲಂಕಾ	24	713	75	112.99

ವಿರಾಟ್ ಕೊಹ್ಲಿಗೆ ಐಸಿಸಿ ತಿಂಗಳ ಆಟಗಾರ ಗೌರವ

ದುಬೈ: ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡವನ್ನು ಸೆಮಿಫೈನಲ್ ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಬ್ಯಾಟರ್ ವಿರಾಟ್ ಕೊಹ್ಲಿ ಅವರು ಐಸಿಸಿ ನೀಡುವ ಅಕ್ಟೋಬರ್ ತಿಂಗಳ ಆಟಗಾರ ಗೌರವಕ್ಕೆ ಪಾತ್ರರಾಗಿದ್ದಾರೆ.

ಪಾಕಿಸ್ತಾನ ಕ್ರಿಕೆಟ್ ತಂಡದ ಆಲ್‌ರೌಂಡರ್ ನಿದಾ ದಾರ್ ಅವರಿಗೆ ಮಹಿಳೆಯರ ವಿಭಾಗದಲ್ಲಿ ಈ ಗೌರವ ಒಲಿದಿದೆ. ಏಷ್ಯಾಕಪ್ ಟೂರ್ನಿಯಲ್ಲಿ ಉತ್ತಮ ಸಾಮರ್ಥ್ಯ ತೋರಿದ ಹಿನ್ನೆಲೆಯಲ್ಲಿ ನಿದಾ ಅವರಿಗೆ ಪ್ರಶಸ್ತಿ ಸಂದಿದೆ.


ವಿರಾಟ್ ಕೊಹ್ಲಿ

ವಿರಾಟ್ ಅವರು ಅಕ್ಟೋಬರ್‌ನಲ್ಲಿ ಒಟ್ಟು 205 ರನ್ ಗಳಿಸಿದ್ದಾರೆ. ವಿಶ್ವಕಪ್ ಟೂರ್ನಿಯಲ್ಲಿ ನೆದರ್ಲೆಂಡ್ಸ್ ಎದುರಿನ ಪಂದ್ಯದಲ್ಲಿ ಗಳಿಸಿದ ಸುಂದರ ಅರ್ಧಶತಕವೂ ಅಲ್ಲದೆ ಪಾಕಿಸ್ತಾನ ಎದುರಿನ ಸ್ಮರಣೀಯ ಇನಿಂಗ್ಸ್ (82, 53 ಎ) ಇದರಲ್ಲಿ ಸೇರಿವೆ.

ತಿಂಗಳ ಆಟಗಾರ ಸ್ಪರ್ಧೆಯಲ್ಲಿ ವಿರಾಟ್ ಅವರು ದಕ್ಷಿಣ ಆಫ್ರಿಕಾದ ಡೇವಿಡ್ ಮಿಲ್ಲರ್, ಜಿಂಬಾಬ್ವೆಯ ಸಿಕಂದರ್ ರಾಜಾ ಅವರನ್ನು ಹಿಂದಿಕ್ಕಿದರು.

ಮಲಾನ್‌ಗೆ ಗಾಯ: ಸೆಮಿಗೆ ಅನುಮಾನ



ಅಡಿಲೇಡ್ (ಪಿಟಿಐ): ಇಂಗ್ಲೆಂಡ್‌ನ ಬ್ಯಾಟರ್ ಡೇವಿಡ್ ಮಲಾನ್ ಅವರು ತೊಡೆಯ ಸ್ನಾಯು ಸೆಳೆತಕ್ಕೆ ಒಳಗಾಗಿದ್ದು, ಭಾರತದ ವಿರುದ್ಧ ಸೆಮಿಫೈನಲ್‌ನಲ್ಲಿ ಆಡುವುದು ಅನುಮಾನ.

ಶ್ರೀಲಂಕಾ ಎದುರು ಶನಿವಾರ ನಡೆದ 'ಸೂಪರ್ 12' ಹಂತದ ತಮ್ಮ ಕೊನೆಯ ಲೀಗ್ ಪಂದ್ಯದಲ್ಲಿ ಅವರು ಗಾಯಗೊಂಡಿದ್ದರು. ಫೀಲ್ಡಿಂಗ್ ವೇಳೆ ಗಾಯಗೊಂಡಿದ್ದ ಅವರು ಇಂಗ್ಲೆಂಡ್‌ನ ಇನಿಂಗ್ಸ್ ವೇಳೆ ಬ್ಯಾಟ್ ಮಾಡಲು ಬಂದಿರಲಿಲ್ಲ.

ಭಾರತ– ಇಂಗ್ಲೆಂಡ್ ನಡುವಣ ಸೆಮಿ ಪಂದ್ಯ ಗುರುವಾರ ನಡೆಯಲಿದೆ. ಆ ವೇಳೆಗೆ ಮಲಾನ್ ಚೇತರಿಸಿಕೊಳ್ಳದಿದ್ದರೆ, ಫಿಲ್ ಸಾಲ್ಟ್‌ಗೆ ಅವಕಾಶ ಲಭಿಸುವ ಸಾಧ್ಯತೆಯಿದೆ.

ಧರ್ಮಸೇನ, ರೈಫೆಲ್ ಅಂಪೈರ್

ದುಬೈ (ಪಿಟಿಐ): ಶ್ರೀಲಂಕಾದ ಕುಮಾರ ಧರ್ಮಸೇನ ಮತ್ತು ಆಸ್ಟ್ರೇಲಿಯಾದ ಪಾಲ್ ರೈಫೆಲ್ ಅವರು ಭಾರತ–ಇಂಗ್ಲೆಂಡ್ ನಡುವಣ ಗುರುವಾರ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಅಂಪೈರ್ ಆಗಿ ಕಾರ್ಯನಿರ್ವಹಿಸಲಿದ್ದಾರೆ.

ಕ್ರಿಸ್ ಗಫಾನಿ ಅವರು ಮೂರನೇ ಅಂಪೈರ್ ಆಗಿರುವರು ಎಂದು ಐಸಿಸಿ ಸೋಮವಾರ ಹೊರಡಿಸಿದ ಪ್ರಕಟಣೆ ತಿಳಿಸಿದೆ.

ನ. 9ರಂದು ನಡೆಯಲಿರುವ ನ್ಯೂಜಿಲೆಂಡ್– ಪಾಕಿಸ್ತಾನ ಸೆಮಿಫೈನಲ್‌ಗೆ ಮರಾಯಸ್ ಎರಾಸ್ಮಸ್ ಮತ್ತು ರಿಚರ್ಡ್ ಇಲಿಂಗ್‌ವರ್ತ್ ಫೀಲ್ಡ್ ಅಂಪೈರ್‌ಗಳಾಗಿ ಹಾಗೂ ರಿಚರ್ಡ್ ಕೆಟಲ್‌ಬರೋ ಮೂರನೇ ಅಂಪೈರ್ ಆಗಿ ಕಾರ್ಯನಿರ್ವಹಿಸಲಿದ್ದಾರೆ.

ಫುಟ್‌ಬಾಲ್: ರೆಬೆಲ್ಸ್‌ಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಆಟವಾಡಿದ ರೆಬೆಲ್ಸ್ ಎಫ್‌ಸಿ ಆಟಗಾರರು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಗೆಲುವು ಸಾಧಿಸಿದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ರೆಬೆಲ್ಸ್ 3–0ಯಿಂದ ಎಎಸ್‌ಸಿ ಸೆಂಟರ್ ಎಫ್‌ಸಿ ತಂಡವನ್ನು ಪರಾಭವಗೊಳಿಸಿತು. ವಿಜೇತ ತಂಡಕ್ಕಾಗಿ ಸಂದೀಪ್ ಲಿಂಬಾ (51ನೇ ನಿ.), ಅರ್ನೆಸ್ಟ್ ಅಡ್ಡೊ (71ನೇ ನಿ.) ಮತ್ತು ಸಂಜೀವ್ ಸಿಂಗ್ (85ನೇ ನಿ.) ಗೋಲು ಹೊಡೆದರು.

ಇನ್ನುಳಿದ ಪಂದ್ಯಗಳಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್ 3–1ರಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ಎದುರು, ಬಿಯುಎಫ್‌ಸಿ 1–0ಯಿಂದ ಯಂಗ್ ಚಾಲೆಂಜರ್ಸ್ ಎದುರು ಜಯ ಸಾಧಿಸಿದವು.

ಮಂಗಳವಾರ ನಡೆಯುವ ಪಂದ್ಯಗಳಲ್ಲಿ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು– ಬಿಎಫ್‌ಸಿ, ಕೊಡಗು ಎಫ್‌ಸಿ– ಥಾಂಕೊಸ್ ಸ್ಟೂಡೆಂಟ್ಸ್ ಯೂನಿಯನ್, ಬೆಂಗಳೂರು ಇಂಡಿಪೆಂಡೆಂಟ್ಸ್– ಫ್ರೆಂಡ್ಸ್ ಯುನೈಟೆಡ್, ಎಡಿಇ ಎಫ್‌ಸಿ– ಅಗ್ನಿಪುತ್ರ ಸೆಣಸಲಿವೆ.


ಬೆಂಗಳೂರು ಡ್ರೀಮ್ ಯುನೈಟೆಡ್‌ನ ಸತೀಶ್ ಸಿಂಗ್ ಗುರ್ಜರ್ (ಬಲ) ಮತ್ತು ಎಫ್‌ಸಿ ಬೆಂಗಳೂರು ಯುನೈಟೆಡ್‌ನ ರಾಕೇಶ್ ಪ್ರಧಾನ್ ನಡುವೆ ಚೆಂಡಿಗಾಗಿ ಪೈಪೋಟಿ– ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

ಕಬಡ್ಡಿ: ಪ್ಯಾಂಥರ್ಸ್‌ಗೆ ಜಯ

ಪುಣೆ: ಜೈಪುರ ಪಿಂಕ್ ಪ್ಯಾಂಥರ್ಸ್ ತಂಡದವರು ಪ್ರೊ ಕಬಡ್ಡಿ ಲೀಗ್‌ನಲ್ಲಿ 42–39 ರಲ್ಲಿ ಯು ಮುಂಬಾ ತಂಡವನ್ನು ಮಣಿಸಿ ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿದರು.

ಸೋಮವಾರ ನಡೆದ ಪಂದ್ಯದಲ್ಲಿ ರೇಡರ್ ಅರ್ಜುನ್ ದೇಶ್ವಾಲ್ ಅವರು 15 ಪಾಯಿಂಟ್ಸ್ ಕಲೆಹಾಕಿ ಪ್ಯಾಂಥರ್ಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಅರ್ಜುನ್ ಅವರ ಸೂಪರ್ ರೇಡ್ ನೆರವಿನಿಂದ ಆರಂಭದಿಂದಲೇ ಪಾಯಿಂಟ್ಸ್ ಕಲೆಹಾಕಿದ ಪ್ಯಾಂಥರ್ಸ್, ಎದುರಾಳಿ ತಂಡವನ್ನು ಆಲೌಟ್ ಮಾಡಿ 9–1 ರಲ್ಲಿ ಮುನ್ನಡೆ ಗಳಿಸಿತು. ಆಶೀಶ್ (11 ಪಾಯಿಂಟ್ಸ್) ಮಿಂಚಿನ ಆಟದ ಬಲದಿಂದ ಮರುಹೋರಾಟ ನಡೆಸಿದ ಮುಂಬಾ 17–17 ರಲ್ಲಿ ಸಮಬಲ ಸಾಧಿಸಿತು. ವಿರಾಮದ ವೇಳೆಗೆ 20–19 ರಲ್ಲಿ ಮುನ್ನಡೆ ಪಡೆದಿದ್ದ ಪ್ಯಾಂಥರ್ಸ್, ದ್ವಿತೀಯಾರ್ಧದಲ್ಲಿ ಎಚ್ಚರಿಕೆಯ ಆಟವಾಡಿ ಗೆಲುವು ಪಡೆಯಿತು.

ಇನ್ನೊಂದು ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ 41–32 ರಲ್ಲಿ ಹರಿಯಾಣ ಸ್ಟೀಲರ್ಸ್ ತಂಡವನ್ನು ಮಣಿಸಿತು.

ಇಂದಿನ ಪಂದ್ಯಗಳು: ಬೆಂಗಾಲ್ ವಾರಿಯರ್ಸ್– ಯು.ಪಿ.ಯೋಧಾಸ್ ದಬಂಗ್ ಡೆಲ್ಲಿ– ತೆಲುಗು ಟೈಟನ್ಸ್

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಪುಣೇರಿ	11	6	3	2	38
ಜೈಪುರ	11	7	4	0	37
ಬೆಂಗಳೂರು	11	6	4	1	36
ಮುಂಬಾ	11	6	5	0	33
ತಲೈವಾಸ್	11	5	4	2	33
ಪಟ್ನಾ	11	5	4	2	33

ಧನುಷ್ಕಾಗೆ ಜಾಮೀನು ನಿರಾಕರಣೆ

ಸಿಡ್ನಿ/ ಕೊಲಂಬೊ (ಪಿಟಿಐ): ಲೈಂಗಿಕ ದೌರ್ಜನ್ಯದ ಆರೋಪದಡಿ ಆಸ್ಟ್ರೇಲಿಯಾದಲ್ಲಿ ಬಂಧನಕ್ಕೆ ಒಳಗಾಗಿರುವ ಶ್ರೀಲಂಕಾ ಕ್ರಿಕೆಟಿಗ ಧನುಷ್ಕಾ ಗುಣತಿಲಕ ಅವರಿಗೆ ಸಿಡ್ನಿಯ ನ್ಯಾಯಾಲಯ ಜಾಮೀನು ನಿರಾಕರಿಸಿದೆ.

ಮಹಿಳೆಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿರುವ ಆರೋಪದಡಿ ಸಿಡ್ನಿಯ ಪೊಲೀಸರು 31 ವರ್ಷದ ಧನುಷ್ಕಾ ಅವರನ್ನು ಭಾನುವಾರ ಬಂಧಿಸಿದ್ದರು. ಅವರನ್ನು ಸರೆ ಹಿಲ್ಸ್‌ನಲ್ಲಿರುವ ಬಂಧನ ಕೇಂದ್ರ ದಲ್ಲಿ ಇರಿಸಲಾಗಿದೆ.

ಧನುಷ್ಕಾ ಅವರ ವಕೀಲರಾದ ಆನಂದ ಅಮರನಾಥ್ ಅವರು ಜಾಮೀನು ಅರ್ಜಿ ಸಲ್ಲಿಸಿದ್ದರು. ಸಿಡ್ನಿಯ ಡೌನಿಂಗ್ ಸೆಂಟರ್ ಸ್ಥಳೀಯ ನ್ಯಾಯಾಲಯದಲ್ಲಿ ಸೋಮವಾರ ವಿಚಾರಣೆ ನಡೆಯಿತು. ಮ್ಯಾಜಿಸ್ಟ್ರೇಟ್ ರಾಬರ್ಟ್ ವಿಲಿಯಮ್ಸ್ ಅವರು ಜಾಮೀನು ನಿರಾಕರಿಸಿದರು ಎಂದು 'ಸಿಡ್ನಿ ಮಾರ್ನಿಂಗ್ ಹೆರಾಲ್ಡ್' ವರದಿ ಮಾಡಿದೆ.

'ಜಾಮೀನು ಕೋರಿ ಶೀಘ್ರದಲ್ಲೇ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗುವುದು' ಎಂದು ಅಮರನಾಥ್ ಪ್ರತಿಕ್ರಿಯಿಸಿದ್ದಾರೆ.

ಎಸ್‌ಎಲ್‌ಸಿ ಅಮಾನತು ಕ್ರಮ: ಶ್ರೀಲಂಕಾ ಕ್ರಿಕೆಟ್ ಮಂಡಳಿ (ಎಸ್‌ಎಲ್‌ಸಿ) ಧನುಷ್ಕಾ ಅವರನ್ನು ಅಮಾನತು ಮಾಡಿದೆ.

ಬಾಕ್ಸಿಂಗ್: ಸೆಮಿಗೆ ಸುಮಿತ್

ನವದೆಹಲಿ (ಪಿಟಿಐ): ಭಾರತದ ಸುಮಿತ್ ಅವರು ಜೋರ್ಡಾನ್‌ನ ಅಮ್ಮಾನ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ನ ಸೆಮಿಫೈನಲ್ ಪ್ರವೇಶಿಸಿ ಮತ್ತೊಂದು ಪದಕ ಖಚಿತಪಡಿಸಿಕೊಂಡರು.

ಸೋಮವಾರ ನಡೆದ ಪುರುಷರ 75 ಕೆ.ಜಿ. ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಸುಮಿತ್ 3–2 ರಲ್ಲಿ ಥಾಯ್ಲೆಂಡ್‌ನ ಬೊರ್‌ವೊರ್ನ್ ಕದಂದುವಾನ್ ಎದುರು ಗೆದ್ದರು. ಇದರೊಂದಿಗೆ ಈ ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ಒಟ್ಟು 11 ಪದಕಗಳು ಖಚಿತವಾದಂತಾಗಿದೆ.

ಸಚಿನ್ (71 ಕೆ.ಜಿ ವಿಭಾಗ) ಮತ್ತು ಲಕ್ಷ್ಯ ಚಾಹರ್ (80 ಕೆ.ಜಿ. ವಿಭಾಗ) ಅವರು ಕ್ವಾರ್ಟರ್ ಫೈನಲ್‌ನಲ್ಲಿ ನಿರಾಸೆ ಅನುಭವಿಸಿದರು.

ಸಚಿನ್ 1–4 ರಲ್ಲಿ ಕಜಕಸ್ತಾನದ ಅಸ್ಲಾಂಬೆಕ್ ಶೈಮ್‌ಬೆರ್ಗನೊವ್ ವಿರುದ್ಧ ಸೋತರೆ, ಲಕ್ಷ್ಯ 0–5 ರಲ್ಲಿ ಉಜ್ಬೆಕಿಸ್ತಾನದ ಅಸ್ಲೊನೊವ್ ಒದಿಲ್‌ಕೊನ್ ಕೈಯಲ್ಲಿ ಪರಾಭವಗೊಂಡರು.

ಟೆನಿಸ್: ಫೆ. 20ರಿಂದ ಬೆಂಗಳೂರು ಓಪನ್

ಬೆಂಗಳೂರು: ಪ್ರತಿಷ್ಠಿತ ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ ಟೂರ್ ಟೆನಿಸ್ ಟೂರ್ನಿಯು 2023ರ ಫೆಬ್ರುವರಿ 20ರಿಂದ 26ರವರೆಗೆ ನಡೆಯಲಿದೆ.

ಕರ್ನಾಟಕ ಲಾನ್ ಟೆನಿಸ್ ಸಂಸ್ಥೆಯ ಕ್ರೀಡಾಂಗಣದಲ್ಲಿ ನಡೆಯಲಿರುವ ಟೂರ್ನಿಯು ಒಟ್ಟು ₹ 1.06 ಕೋಟಿ ಬಹುಮಾನ ಮೊತ್ತ ಒಳಗೊಂಡಿರಲಿದೆ ಎಂದು ಸಂಸ್ಥೆಯ ಗೌರವ ಕಾರ್ಯದರ್ಶಿ ಮಹೇಶ್ವರರಾವ್ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಮ್ಯಾರಥಾನ್‌ಗೆ ಅವಿನಾಶ್ ರಾಯಭಾರಿ



ಬೆಂಗಳೂರು: ರೋಟರಿ ಬೆಂಗಳೂರು ಐಟಿ ಕಾರಿಡಾರ್ ಆಯೋಜಿಸುವ ಬೆಂಗಳೂರು ಮಿಡ್‌ನೈಟ್ ಮ್ಯಾರಥಾನ್‌ಗೆ ಸ್ಟೀಪಲ್‌ಚೇಸರ್ ಅಥ್ಲೀಟ್ ಅವಿನಾಶ್ ಸಬ್ಳೆ ಪ್ರಚಾರ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ. ಮ್ಯಾರಥಾನ್ ಡಿ. 10ರಂದು ವೈಟ್‌ಫೀಲ್ಡ್‌ನಲ್ಲಿ ನಡೆಯಲಿದೆ.

ಸೈಕ್ಲಿಂಗ್ ಟ್ರಯಲ್ಸ್ 13ರಂದು

ಬೆಂಗಳೂರು: ಅಸ್ಸಾಂನ ಗುವಾಹಟಿಯಲ್ಲಿ ಡಿಸೆಂಬರ್‌ನಲ್ಲಿ ನಡೆಯಲಿರುವ ರಾಷ್ಟ್ರೀಯ ಟ್ರ್ಯಾಕ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ಗೆ ರಾಜ್ಯ ತಂಡಗಳ ಆಯ್ಕೆಯಾಗಿ ನವೆಂಬರ್ 13ರಂದು ಟ್ರಯಲ್ಸ್ ಆಯೋಜಿಸಲಾಗಿದೆ.

ಬೆಳಗಾವಿ ಜಿಲ್ಲೆಯ ಚಂದರಗಿ ಕ್ರೀಡಾಶಾಲೆಯಲ್ಲಿ 14, 16, 18 ವರ್ಷದೊಳಗಿನ ಬಾಲಕ-ಬಾಲಕಿಯರಿಗೆ ಮತ್ತು ಮುಕ್ತ ಪುರುಷ-ಮಹಿಳೆಯರಿಗಾಗಿ ಆಯ್ಕೆ ಟ್ರಯಲ್ಸ್ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ರಾಜ್ಯ ಸೈಕ್ಲಿಂಗ್ ಸಂಸ್ಥೆಯ ಗೌರವ ಕಾರ್ಯದರ್ಶಿ ಶ್ರೀಶೈಲ ಎಂ. ಕುರಣಿ (ಮೊಬೈಲ್ ಸಂಖ್ಯೆ 9008377875) ಅವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವಿಜಯ್ ಹಜಾರೆ: ಮಯಂಕ್ ನೇತೃತ್ವ

ಬೆಂಗಳೂರು: ಆರಂಭಿಕ ಬ್ಯಾಟರ್ ಮಯಂಕ್ ಅಗರವಾಲ್ ಅವರು ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಪಾಲ್ಗೊಳ್ಳುವ ಕರ್ನಾಟಕ ತಂಡವನ್ನು ಮುನ್ನಡೆಸಲಿದ್ದಾರೆ. ಆರ್. ಸಮರ್ಥ್ ತಂಡಕ್ಕೆ ವಾಪಸಾಗಿದ್ದು, ಉಪನಾಯಕನ ಜವಾಬ್ದಾರಿ ನೀಡಲಾಗಿದೆ.

ತಂಡ ಹೀಗಿದೆ: ಮಯಂಕ್ ಅಗರವಾಲ್ (ನಾಯಕ), ಆರ್. ಸಮರ್ಥ್ (ಉಪನಾಯಕ), ಮನೀಷ್ ಪಾಂಡೆ, ನಿಕಿನ್ ಜೋಸ್, ಮನೋಜ್ ಭಾಂಡಗೆ, ಅಭಿನವ್ ಮನೋಹರ್, ಬಿ.ಆರ್.ಶರತ್ (ವಿಕೆಟ್ ಕೀಪರ್), ನಿಹಾಲ್ ಉಲ್ಲಾಳ್ (ವಿಕೆಟ್ ಕೀಪರ್), ಕೆ.ಗೌತಮ್, ಶ್ರೇಯಸ್ ಗೋಪಾಲ್, ಜೆ.ಸುಚಿತ್, ವಿದ್ವತ್ ಕಾವೇರಪ್ಪ, ವಿ.ಕೌಶಿಕ್, ರೋನಿತ್ ಮೋರೆ, ಎಂ.ವೆಂಕಟೇಶ್.

ಶೈನಾ–ಐಕ್ಯಗೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕದ ಶೈನಾ ಮಣಿಮುತ್ತು ಮತ್ತು ಐಕ್ಯ ಶೆಟ್ಟಿ ಅವರು ನವೀ ಮುಂಬೈನಲ್ಲಿ ನಡೆದ ಅಖಿಲ ಭಾರತ ಸಬ್‌ಜೂನಿಯರ್ ರ್‍ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದರು.

ಭಾನುವಾರ ಕೊನೆಗೊಂಡ ಟೂರ್ನಿಯ ಬಾಲಕಿಯರ ಡಬಲ್ಸ್ ಫೈನಲ್‌ನಲ್ಲಿ ಕರ್ನಾಟಕದ ಜೋಡಿಯು 21–14, 18–21, 21–19ರಿಂದ ತಮಿಳುನಾಡಿನ ಲಾಕ್ಷಾ ಎನ್.ಡಿ. ಮತ್ತು ದೀಕ್ಷಾ ಎಸ್.ಆರ್. ಅವರನ್ನು ಪರಾಭವಗೊಳಿಸಿದರು.

ಪ್ಯಾರಾ ಶೂಟಿಂಗ್: ಭಾರತಕ್ಕೆ 2 ಪದಕ

ನವದೆಹಲಿ (ಪಿಟಿಐ): ಭಾರತದ ರಾಹುಲ್ ಜಾಕರ್, ಸಿಂಗರಾಜ್ ಮತ್ತು ನಿಹಾಲ್ ಸಿಂಗ್ ಅವರನ್ನೊಳಗೊಂಡ ತಂಡವು ಯುನೈಟೆಡ್ ಅರಬ್ ಎಮಿರೇಟ್ಸ್‌ನ ಅಲ್ ಐನ್‌ನಲ್ಲಿ ನಡೆಯುತ್ತಿರುವ ಪ್ಯಾರಾ ಶೂಟಿಂಗ್ ವಿಶ್ವ ಚಾಂಪಿಯನ್‌ಷಿಪ್‌ನ 25 ಮೀಟರ್ಸ್ ಪಿಸ್ತೂಲ್ ಪಿ3 ವಿಭಾಗದಲ್ಲಿ ಚಿನ್ನದ ಪದಕ ಗೆದ್ದುಕೊಂಡಿತು. ರಾಹುಲ್ ವೈಯಕ್ತಿಕ ವಿಭಾಗದಲ್ಲಿ ಕಂಚು ಗೆದ್ದರು.

ರಯಾನ್ ಮಿಂಚು

ಬೆಂಗಳೂರು: ಬ್ಲ್ಯೂಸ್ಟಾರ್ ಕ್ಲಬ್ ತಂಡವು ಕರ್ನಾಟಕ ರಾಜ್ಯ ಹಾಕಿ ಸಂಸ್ಥೆಯ ಸಿ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಜಯ ಗಳಿಸಿತು.

ಸೋಮವಾರ ಇಲ್ಲಿ ನಡೆದ ಪಂದ್ಯದಲ್ಲಿ ಬ್ಲ್ಯೂಸ್ಟಾರ್ 7–0ಯಿಂದ ಹಾವೇರಿ ಸ್ಪೋರ್ಟ್ಸ್ ಕ್ಲಬ್ ತಂಡವನ್ನು ಪರಾಭವಗೊಳಿಸಿತು. ರಯಾನ್ ಆರನೇ ನಿಮಿಷದಲ್ಲಿ ತಂಡದ ಪರ ಮೊದಲ ಗೋಲು ಹೊಡೆದರು. ಬಳಿಕ 33 ಮತ್ತು 50ನೇ ನಿಮಿಷಗಳಲ್ಲಿಯೂ ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿದರು. ಶ್ರೀಹರ್ಷ (4 ಮತ್ತು 11ನೇ ನಿ.), ಸುಂದರ್‌ರಾಜ್ (39ನೇ ನಿ.) ಮತ್ತು ಪವನ್‌ಕುಮಾರ್ ಕೆ.ಎಂ. (43ನೇ ನಿ.) ವಿಜೇತ ತಂಡದ ಪರ ಗೋಲು ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಫ್ರೆಂಡ್ಸ್ ಕ್ಲಬ್, ಕಲಬುರ್ಗಿ 4–1ರಿಂದ ಬಾಷ್ ಸ್ಪೋರ್ಟ್ಸ್ ಕ್ಲಬ್ ಎದುರು ಗೆದ್ದಿತು.

'ಒಗ್ಗಟ್ಟು ತೋರಿಸಿ; ಇಲ್ಲವೇ ಸಾಮೂಹಿಕವಾಗಿ ಸಾಯಿರಿ'

ಶರ್ಮ್ ಎಲ್ ಶೇಖ್ (ಈಜಿಪ್ಟ್) (ಎಎಫ್‌ಪಿ/ಎಪಿ): ಉಲ್ಬಣಿಸುತ್ತಿರುವ ಹವಾಮಾನ ಬದಲಾವಣೆಯ ಪರಿಣಾಮವನ್ನು ತಡೆಯಲು ಮಾನವೀಯತೆ ಸಹಕಾರ ನೀಡಬೇಕು ಇಲ್ಲವೇ ಸಾಮೂಹಿಕ ವಿನಾಶ ಹೊಂದಬೇಕು ಎಂದು ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರೆಸ್ ಸೋಮವಾರ ವಿಶ್ವದ ನಾಯಕರಿಗೆ ಕಟು ಮಾತಿನಲ್ಲಿ ಹೇಳಿದ್ದಾರೆ.

ವಿಶ್ವಸಂಸ್ಥೆಯ ನೇತೃತ್ವದಲ್ಲಿ ಈಜಿಪ್ಟ್‌ನಲ್ಲಿ ಜಾಗತಿಕ ತಾಪಮಾನ ತಗ್ಗಿಸುವ ಕುರಿತು ನಡೆಯುತ್ತಿರುವ 27ನೇ ಶೃಂಗಸಭೆಯಲ್ಲಿ ಅವರು ಮಾತನಾಡಿದರು.

'ಹವಾಮಾನ ಬದಲಾವಣೆಯ ಪರಿಣಾಮ ತಗ್ಗಿಸುವ ವಿಚಾರದಲ್ಲಿ 'ಒಗ್ಗಟ್ಟು' ಅಥವಾ 'ಸಾಮೂಹಿಕ ಆತ್ಮಹತ್ಯೆ' ಆಯ್ಕೆ ನಿಮಗೆ ಬಿಟ್ಟದ್ದು' ಎಂದು ಅವರು ವಿಶ್ವ ನಾಯಕರಿಗೆ ಹೇಳಿದರು.

ಸಂಜಯ್ ಹಸ್ತಾಂತರಕ್ಕೆ ಕೋರ್ಟ್ ಒಪ್ಪಿಗೆ

ಲಂಡನ್ (ಪಿಟಿಐ): ಭಾರತದಲ್ಲಿ ಅಕ್ರಮ ಹಣ ವರ್ಗಾವಣೆ ಹಾಗೂ ತೆರಿಗೆ ವಂಚನೆ ಮಾಡಿದ ಆರೋಪ ಎದುರಿಸುತ್ತಿರುವ ಶಸ್ತ್ರಾಸ್ತ್ರ ವ್ಯವಹಾರಗಳ ಸಲಹೆಗಾರ ಹಾಗೂ ಮಧ್ಯವರ್ತಿ ಸಂಜಯ್ ಭಂಡಾರಿ ಅವರನ್ನು ಭಾರತಕ್ಕೆ ಹಸ್ತಾಂತರಿಸಲು ಬ್ರಿಟನ್‌ನ ನ್ಯಾಯಾಲಯವೊಂದು ಸೋಮವಾರ ಒಪ್ಪಿಗೆ ನೀಡಿದೆ.

ಈ ವರ್ಷದ ಆರಂಭದಲ್ಲಿ ಲಂಡನ್‌ನ ವೆಸ್ಟ್‌ಮಿನಿಸ್ಟರ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ಪ್ರಕರಣ ಆಲಿಸಿದ ಜಿಲ್ಲಾ ನ್ಯಾಯಾಧೀಶ ಮಿಷೆಲ್ ಸ್ನೋ, ಈ ವ್ಯಕ್ತಿಯನ್ನು ಹಸ್ತಾಂತರಿಸುವುದಕ್ಕೆ ಯಾವುದೇ ನಿರ್ಬಂಧವಿಲ್ಲ ಎಂದು ಆದೇಶ ನೀಡಿದರು.

ಸಂಜಯ್ ಅವರನ್ನು ಭಾರತಕ್ಕೆ ಹಸ್ತಾಂತರ ಕುರಿತಂತೆ ಗೃಹ ಸಚಿವೆ ಸುಯೆಲ್ಲಾ ಬ್ರಾವರ್‌ಮನ್ ಅವರ ಅನುಮತಿ ಬೇಕಿದ್ದು, ಅವರಿಗೆ ಪ್ರಕರಣ ವರ್ಗಾಯಿಸುತ್ತಿರುವುದಾಗಿ ಅವರು ತಿಳಿಸಿದರು.

ಇಮ್ರಾನ್‌ಗೆ ಗುಂಡೇಟು: 24 ಗಂಟೆಯೊಳಗೆ ಎಫ್‌ಐಆರ್‌ಗೆ ಆದೇಶ

ಇಸ್ಲಾಮಾಬಾದ್ (ಪಿಟಿಐ): ಪಾಕ್ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಮೇಲೆ ಕಳೆದ ಗುರುವಾರ ನಡೆದ ಗುಂಡಿನ ದಾಳಿಗೆ ಸಂಬಂಧಿಸಿದಂತೆ 24 ಗಂಟೆ ಒಳಗಾಗಿ ಎಫ್‌ಐಆರ್ ದಾಖಲಿಸುವಂತೆ ಪಂಜಾಬ್ ಪ್ರಾಂತ್ಯದ ಐಜಿಗೆ ಪಾಕಿಸ್ತಾನ ಸುಪ್ರೀಂಕೋರ್ಟ್ ಸೋಮವಾರ ಆದೇಶಿಸಿದೆ.

ಸುಪ್ರೀಂನ ಈ ನಡೆಯನ್ನು ಇಮ್ರಾನ್ ಖಾನ್ ಅವರು 'ನ್ಯಾಯದತ್ತ ಮೊದಲ ಹೆಜ್ಜೆ' ಎಂದು ಪ್ರಶಂಸಿಸಿದ್ದಾರೆ.